ಕರ್ನಾಟಕ ಗಾಂಧೀ ಸ್ಮಾರಕ ನಿಧಿ


ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 2 : ಸಂಚಿಕೆ – 12 ಮಾರ್ಚ್ 2021 ಪುಟ – 32 ₹ 20/-




















'ರಾಮನ್ ಎಫೆಕ್ಟ್' ಆವಿಷ್ಕಾರದ ರಾಷ್ಟ್ರೀಯ ವಿಜ್ಞಾನ ದಿನ ಫೆಬ್ರವರಿ 1928

ಸರ್. ಸಿ.ವಿ. ರಾಮನ್ : (07.11.1888 - 21.11.1970)

– ನಾಡೋಜ ಡಾ. ವೂಡೇ ಪಿ. ಕೃಷ್ಣ



ಸರ್. ಸಿ.ವಿ.ರಾಮನ್ ಎಂದೇ ಸುಪ್ರಸಿದ್ಧರಾಗಿದ್ದ, ಚಂದ್ರಶೇಖರ ವೆಂಕಟರಾಮನ್ ರವರು, ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಪ್ರಪ್ರಥಮ ಭಾರತೀಯ ವಿಜ್ಞಾನಿಯಾಗಿದ್ದಾರೆ. ಭೌತಶಾಸ್ತ್ರ ಕ್ಷೇತ್ರದ "ರಾಮನ್ ಎಫೆಕ್ಟ್" ಸಂಶೋಧನೆಗಾಗಿ 1930ರಲ್ಲಿ ಇವರಿಗೆ ಈ ಪ್ರಶಸ್ತಿ ಪ್ರಧಾನ ಮಾಡಲಾಗಿತ್ತು.

ಚಂದ್ರಶೇಖರ್ ಮತ್ತು ಪಾರ್ವತಿ ಅಮ್ಮಾಳ್ ದಂಪತಿಗಳಿಗೆ ಮಗನಾಗಿ ವೆಂಕಟಾರಾಮನ್ ಜನಿಸಿದರು. ತಂದೆ ಚಂದ್ರಶೇಖರ್ ಅವರು ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಸಿವಿಆರ್ ಅವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಮತ್ತು ಎಂ.ಎಸ್ಸಿ. ಪದವಿ ಪಡೆದರು. 1907ರಲ್ಲಿ ಭಾರತೀಯ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಲ್ಕತ್ತೆಯಲ್ಲಿ, ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿ ವೃತ್ತಿ–ಜೀವನ ಆರಂಭಿಸಿದರು. ವಿದ್ಯಾರ್ಥಿಯಾಗಿದ್ದಾಗಿನ ವೈಜ್ಞಾನಿಕ ಪ್ರಯೋಗಗಳ ಆಸಕ್ತಿಯನ್ನು ಅವರು ವೃತ್ತಿನಿರತರಾದಾಗಲೂ ಮುಂದುವರಿಸಿದರು. ನಂತರ 1917ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುವಾಗ 1924ರಲ್ಲಿ 'ಲಂಡನ್ನಿನ ರಾಯಲ್ ಸೊಸೈಟಿ'ಗೆ ಆಯ್ಕೆಯಾಗಿದ್ದರು.

"ಆಕಾಶಕ್ಕೆ ನೀಲಿ ಬಣ್ಣವೇಕೆ"? ಎಂಬ ಪ್ರಶ್ನೆ ರಾಮನ್‌ರನ್ನು ಮೊದಲಿನಿಂದಲೂ ಕಾಡುತ್ತಿತ್ತು. ಹಡಗಿನಲ್ಲಿ ಯುರೋಪ್‌ಗೆ ಪ್ರಯಾಣ ಮಾಡುವಾಗ ಕಡಲಿನ ಸೌಂಧರ್ಯಕ್ಕೆ ಚಕಿತರಾದರು ಮತ್ತು ನೀಲಿ ಬಣ್ಣಕ್ಕೆ ಕಾರಣಗಳೇನು? ಎಂಬ ವಿಚಾರ ಅವರ ಮನಸ್ಸನ್ನು ಆವರಿಸಿಕೊಳ್ಳುತ್ತಿತ್ತು. ಹಡಗಿನ ತುಂಬ ಅಲೆದಾಡುತ್ತಿದ್ದರು. ಹಾಗೆಯೇ ವೈವಿಧ್ಯಮಯವಾದ ಹೂಗಳ ಬಣ್ಣಗಳಿಂದಲೂ ಅವರು ಆಶ್ಚರ್ಯ ಚಕಿತರಾಗುತ್ತಿದ್ದರು. ಕಡಲಿಗೆ ವಾತಾವರಣದಲ್ಲಿನ ಧೂಳಿನ ಕಣಗಳು ಬೆಳಕನ್ನು ಭಾಗಶಃ ಚದುರಿಸುವವು. ಹೀಗೆ ಬೆಳಕು ಚದುರಿದಾಗ, ಅದರ ಎಲ್ಲ ಬಣ್ಣಗಳೂ ಚದುರುವುವು. ಆದರೆ ಹೆಚ್ಚು ಚದುರದ ಕೆಂಪುಬೆಳಕು, ದಿಗಂತದ ಸಮೀಪ, ಸೂರ್ಯ ಕಾಣುವ ಪ್ರದೇಶದಲ್ಲಿ ಪ್ರಜ್ವಲಿಸುವುದು. ಉಳಿದವುಗಳು ಆಕಾಶಕ್ಕೆ ನೀಲಿ ಬಣ್ಣವನ್ನು ಹೊಮ್ಮುವುದು. ಬೆಳಕು ಚದುರುವಾಗ ಶಕ್ತಿಯ ಸ್ವೀಕಾರ ಅಥವಾ ಬೆಳಕಿನ ತರಂಗಾಂತರವನ್ನು ನಿರ್ದಿಷ್ಟವಾಗಿ ಬದಲಾಯಿಸುವ ಸಾಧ್ಯತೆ ಲಕ್ಷದಲ್ಲೊಂದು ಮಾತ್ರ. ಎಂದರೆ ಒಂದು ಲಕ್ಷ ಬೆಳಕಿನ ಕಣಗಳು ಚದುರಿದಾಗ ಒಂದು ಮಾತ್ರ ಈ ಪರಿಣಾಮಕ್ಕೆ ಒಳಗಾಗುವುದು, ಎನ್ನುವ ವಿಚಾರ ಬೆಳಕಿಗೆ ಬಂತು. ಇದನ್ನೇ ಹಡಗಿನಲ್ಲಿ ಸರಳ ಪ್ರಯೋಗ ಮಾಡಿ ಪ್ರತಿಪಾದಿಸಿದರು. ಭಾರತಕ್ಕೆ ವಾಪಸಾಗಿ ಬೆಂಗಳೂರಿಗೆ ಬಂದು ಹೆಚ್ಚಿನ ಸಂಶೋಧನೆಯಲ್ಲಿ ತೊಡಗಿದರು. ಬೆಳಕು ಅಣುಗಳ ಮೇಲೆ ಬಿದ್ದಾಗ ಅದು ಚದುರಿ ಬಣ್ಣ ಬದಲಾಯಿಸುತ್ತದೆ ಎಂದು ಕಂಡು ಹಿಡಿದರು. ಇದರ ಅನ್ವಯಿಕ ಉಪಯುಕ್ತತೆಯ ತತ್ವ ಸಂಶೋಧನೆ– 'ರಾಮನ್ ಎಫೆಕ್ಟ್'ನ್ನು 'ಬೆಂಗಳೂರಿ'ನಲ್ಲಿ 1928ರಲ್ಲಿ ಬಹಿರಂಗಕ್ಕೆ ತೆರೆದಿಟ್ಟರು. ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ನಿರ್ದೇಶಕರಾಗಿ 1934ರಲ್ಲಿ ಡಾ. ರಾಮನ್ ಅಧಿಕಾರ ವಹಿಸಿಕೊಂಡಿದ್ದರು. 1943ರಲ್ಲಿ "ರಾಮನ್ ಸಂಶೋಧನಾ ಕೇಂದ್ರ"ವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಪ್ರೊ. ರಾಮನ್ ಅವರು ಬೆಂಗಳೂರನ್ನು ಕಾರ್ಯಕ್ಷೇತ್ರವಾಗಿ ಮಾಡಿಕೊಂಡು "ರಾಮನ್ ರಿಸರ್ಚ್ ಇನ್ಸಿಟಿಟ್ಯೂಟ್" ಎಂಬ ವಿಜ್ಞಾನ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ ಬಹಳಷ್ಟು ಸಂಶೋಧನೆಗಳನ್ನು ಮಾಡಿದ್ದರು. ಈ ಸಂಸ್ಥೆ ವಿಶೇಷವಾಗಿ ಭೌತಶಾಸ್ತ್ರದ ಪ್ರಮುಖ ಸಂಶೋಧನ ಸಂಸ್ಥೆಯಾಗಿದೆ. ಇವರಿಗೆ ರಾಯಲ್ ಸೊಸೈಟಿ ಸದಸ್ಯತ್ವ, ನೈಟ್ ಹುಡ್ ಪ್ರಶಸ್ತಿ, ನೊಬಲ್ ಪ್ರಶಸ್ತಿ, ಮೈಸೂರು ಮಹಾರಾಜರಿಂದ, 'ರಾಜ ಸಭಾ ಭೂಷಣ ಗೌರವ', ಭಾರತ ರತ್ನ ಪ್ರಶಸ್ತಿ, ಲೆನಿನ್ ಶಾಂತಿ ಪ್ರಶಸ್ತಿಗಳು ಪ್ರಧಾನ ಮಾಡಲಾಗಿದೆ. ಇವರ ರಾಮನ್ ಎಫೆಕ್ಟ್ ಥಿಯರಿ ಆವಿಷ್ಕಾರಕ್ಕಾಗಿ ಪ್ರತಿವರ್ಷ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತಿದೆ.

I know nothing of the science of astrology and I consider it to be a science, if it is a science, of doubtful value, to be severely left alone by those who have any faith in Providence.

- Mahatma Gandhi





ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA
(A Monthly Kannada - English
Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

- 'ರಾಮನ್ ಎಫೆಕ್ಟ್' ಆವಿಷ್ಕಾರದ ರಾಷ್ಟ್ರೀಯ ವಿಜ್ಞಾನ ದಿನ ಫೆಬ್ರವರಿ 1928 : ನಾಡೋಜ ಡಾ. ವೂಡೇ ಪಿ. ಕೃಷ್ಣ 2
- ಸಂಪಾದಕೀಯ 4
- ಆಫ್ರಿಕಾಕ್ಕೆ ಹೊರಡಲು ಸಿದ್ಧತೆ : ಮೋ.ಕ. ಗಾಂಧಿ 5
- ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924 ಸಂ : ಸಿದ್ದವನಹಳ್ಳಿ ಕೃಷ್ಣಶರ್ಮ 6
- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಇಂದಿರಾ ಕೃಷ್ಣಪ್ಪ 7
- ಗಾಂಧೀಜಿಯ ಅವರ ವೈಜ್ಞಾನಿಕ ಚಿಂತನೆಗಳು ಡಾ. ಸುಮಂಗಲಾ ಮುಮ್ಮಿಗಟ್ಟಿ 7.
- ಗಾಂಧೀಜಿಯ ಕೊನೆಯ ಉಪವಾಸಗಳು ಲೂಯಿ ಫಿಶರ್ 'ಗಾಂಧಿ' ಪುಸ್ತಕದಿಂದ ಸಂ: ನಳಿನಾ ಡಿ. 8
- ಸರ್ವಾಧಿಕಾರಿಗಳಿಗೆ ತಕ್ಕ ಶಾಸ್ತಿ : ಎಚ್.ಎಸ್.ದೊರೆಸ್ವಾಮಿ 8
- ಲೋಕ ಮಾನ್ಯರು : ಇಂದಿರಾ ಕೃಷ್ಣಪ್ಪ 9
- ಅಕ್ಷರದವ್ವ : ಸಾವಿತ್ರಿ ಬಾಪುಲೆ, ಸಂ. ಎಸ್.ಎಂ. ಶ್ಯಾಮಲ 9
- ಕನ್ನಡ ನೆಲ-ಜಲ-ಶಿಕ್ಷಣವನ್ನು ಸಮೃದ್ಧಿಗೊಳಿಸಿದ ಸಮಿತಿಗಳ ವರದಿಗಳು : ಸಂ : ರುದ್ರಪ್ಪ ಹನಗವಾಡಿ 10
- ನವ್ಯಕ್ಕೆ ಅಡಿಗಲ್ಲಿಟ್ಟ ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ಶತಮಾನೋತ್ಸವ 10
- ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ : ಪ್ರಸನ್ನಕುಮಾರ್ ಕೆರಗೋಡು 11
- ಗಾಂಧೀಜಿ ಮತ್ತು ದಲಿತರ ದೇವಸ್ಥಾನ ಪ್ರವೇಶ ವೇಮಗಲ್ ಸೋಮಶೇಖರ್ 12
- ದ ಮಹಾತ್ಮ ರಿಟರ್ನ್ಸ್ : ಪ್ರೊ. ಎಂ. ಚಂದ್ರಶೇಖರಯ್ಯ 13
- ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ : ಯ. ರು. ಪಾಟೀಲ 13
- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ : ಇಂದಿರಾ ಕೃಷ್ಣಪ್ಪ 14
- ಕನ್ನಡ.. ಕನ್ನಡಿಗ... ಕರ್ನಾಟಕ.. : ಮಹೇಶ್ 15
- ರುಕ್ಮಿಣಿದೇವಿ ಅರುಂಡೇಲ್: ಪ್ರೊ. ಲೀಲಾ ವಾಸುದೇವ್ 15
- ಕನಕದಾಸರು : ಪ್ರೊ. ಬಿ. ಕೃಷ್ಣಪ್ಪ 16
- ಹೆಮ್ಮೆಯ ಕನ್ನಡಿಗ : ನ್ಯಾಯಮೂರ್ತಿ ರಾಮಾಜೋಯಿಸ್ ಡಾ. ರಾಮಲಿಂಗೇಶ್ವರ (ಸಿಸಿರಾ) 17
- ಕಸ್ತೂರ್‌ಬಾ ಗಾಂಧಿ : ಸರಳಾದೇವಿ ಸಂ. : ವಿ.ಎನ್. ತಿಪ್ಪನಗೌಡ 18
- ರೈತ ಚಳುವಳಿಯ ರೂವಾರಿ ಸಮಾಜವಾದಿ ಧುರೀಣ : ಪ್ರೊ. ಎಂ.ಡಿ.ಎನ್. : ಅಖಿಲಾ ವಿದ್ಯಾಸಂದ್ರ 19
- ಕರ್ನಾಟಕ ಕಟ್ಟಿದ ಕೃಷ್ಣರಾಜ : ಇಂದಿರಾ ಕೃಷ್ಣಪ್ಪ 20
- ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ ನಾಡೋಜ ಡಾ. ವೂಡೇ ಪಿ. ಕೃಷ್ಣ 21
- ಮಾದಕ ವಸ್ತುಗಳ ಮಾಯಾಜಾಲ ಡಾ. ಸಿ.ಆರ್. ಚಂದ್ರಶೇಖರ್ 22
- ಪ್ರಾಕೃತಿಕ ಆಹಾರದ ಮಹತ್ವ : ಡಾ. ವಸುಂಧರಾ ಭೂಪತಿ 22
- ಬೇಸಿಗೆಯ ಬಿರು ಬಿಸಿಲಿನಿಂದ ಬರುವ ಸಾಮಾನ್ಯ ಕಾಯಿಲೆಗಳು ಹಾಗೂ ಪರಿಹಾರಗಳು: ಡಾ. ಸಂದೀಪ್ 23
- FEVER! - John Fuller 24
- ಪುಸ್ತಕ ಪರಿಚಯ : ಡಾ. ಎಸ್. ರಾಮಲಿಂಗೇಶ್ವರ 24
- ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ 25
- ಗಾಂಧಿ ಭವನದ ಕಾರ್ಯಕ್ರಮಗಳು–ಛಾಯಾಚಿತ್ರಗಳು 26
- ಪತ್ರಿಕಾ ವರದಿಗಳು 28
- ROOTS :Sold Into Slavery - Alex Harley 29
- ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು 30

ಸಂಪಾದಕೀಯ



ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು,

ಕೊರೋನ 2ನೇ ಅಲೆಯ ಭೀತಿ ಹಬ್ಬುತ್ತಿರುವ ಸಂದರ್ಭದಲ್ಲಿ ನಾವು ಕ್ರಮಿಸುತ್ತಿದ್ದೇವೆ. ಕೊರೋನಾ–19 ವಿಶ್ವದಾದ್ಯಂತ ತಂದಿತ್ತ ಸಾವು ನೋವು, ಆರ್ಥಿಕ ಸ್ಥಗಿತತೆ, ನಿರುದ್ಯೋಗ, ಹಸಿವು, ಅನ್ಯಾಯ, ನಷ್ಟಗಳಿಂದ ಇನ್ನೂ ಚೇತರಿಸಿಕೊಳ್ಳುತ್ತಿರುವ ಹಂತದಲ್ಲಿ ಮತ್ತೊಮ್ಮೆ ಅಂಥಹದೇ ಪರಿಸ್ಥಿತಿ ಬರುತ್ತಿದೆ. ಎಂಬುದೇ ಜನರನ್ನು ತಲ್ಲಣಗೊಳಿಸುತ್ತಿದೆ.

ಕೊರೋನ ವರ್ಷ – 2020ರಲ್ಲಿನ ಕಾರ್ಮಿಕರ ವಲಸೆ, ನಿರುದ್ಯೋಗ, ವಲಸಿಗರು ಮತ್ತು ಸ್ಥಳೀಯರ ನಡುವಿನ ಉದ್ಯೋಗದ ಪೈಪೋಟಿಗಳು ಹೃದಯವಿದ್ರಾವಕವಾದ ಘಟನೆಗಳಾಗಿವೆ. ಇತ್ತೀಚೆಗೆ ಜಾರ್ಖಂಡ್ 75% ಉದ್ಯೋಗವನ್ನು ಸ್ಥಳೀಯರಿಗೆಂದು ನಿರ್ಣಯಿಸಿತು. ಅದರಂತೆ ಹರಿಯಾಣ ರಾಜ್ಯವು ಕ್ರಮಕ್ಕೆ ಮುಂದಾಯಿತು. ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ, ರಾಜಸ್ಥಾನ, ಗುಜರಾಥ್ ಈ ಹಾದಿಯಲ್ಲೇ ಮಂದುವರಿದಿವೆ. ತಮಿಳುನಾಡಿನ ಡಿ.ಎಂ.ಕೆ. ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ 75% ಉದ್ಯೋಗ ತಮಿಳರಿಗೆ ಎಂದು ಹೇಳಿದೆ. ಈ ನಿರ್ಣಯಗಳು ಯುವ ಜನತೆಯನ್ನು ಬಹುವಾಗಿ ಆಕರ್ಷಿಸಿದವು. ಲಾಕ್‌ಡೌನ್ ಅವಧಿಯಲ್ಲಿ 122 ಮಿಲಿಯನ್ ಜನ ಕೆಲಸ ಕಳೆದುಕೊಂಡರು. ಅವರಲ್ಲಿ ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೃಷಿ ಕಾರ್ಮಿಕರು, ಹೋಟೆಲ್, ಮಾಲ್, ಕೊರಿಯರ್ ಸರ್ವೀಸಸ್‌ನಂಥಹ ಕೆಲಸಗಾರರು ನಿರುದ್ಯೋಗಿಗಳಾದರು. ಆ ಉದ್ಯೋಗಗಳು, ಯಾವುದೇ ಆರೋಗ್ಯ ಪೆನ್‌ಷನ್, ಭದ್ರತೆಗಳನ್ನು ಹೊಂದಿದವುಗಳಾಗಿರಲಿಲ್ಲ. ವಿಶ್ವಬ್ಯಾಂಕ್ ವರದಿಯಂತೆ ಭಾರತದಲ್ಲಿ 70% ಉದ್ದಿಮೆಗಳು ಈ ಅವಧಿಯಲ್ಲಿ ಸಂಪೂರ್ಣ ಸ್ಥಗಿತಗೊಂಡಿದ್ದು ಮತ್ತೆ ಚೇತರಿಸಿಕೊಳ್ಳಲು ಬಹಳ ಕಾಲಾವಧಿಯಾಗುವುದು ಎನ್ನುತ್ತಿದೆ.

'ಸ್ಥಳೀಯರಿಗೆ ಉದ್ಯೋಗ' ಎಂಬುದು ಕೂಡ ಪಿಡುಗಾಗಿ ಪರಿಣಮಿಸಿದೆ. ಹೊರಗಿನವರು ಮತ್ತು ಮಣ್ಣಿನ ಮಕ್ಕಳು ಎಂಬ ಪ್ರಭೇಧಗಳು ವಿಶ್ವದಾದ್ಯಂತ ಇರುವ ಸಿಂಡ್ರೋಮ್‌ವಾಗಿದೆ. ಬ್ರಿಟನ್ ವ್ಯಾಪಾರ ಒಕ್ಕೂಟ, ಬ್ರಿಟನ್–ಅಮೆರಿಕಾದಲ್ಲಿ ಈ ಸಮಸ್ಯೆಗಳು ಇವೆ. ಅಮೆರಿಕಾ ಸ್ನೇಹ ಸಂಬಂಧದ ವಲಸೆ ಕಾರ್ಮಿಕರ ಜನ ಸಂಖ್ಯೆಯನ್ನು ಹೊಂದಿದೆ. ಅಲ್ಲಿನ 17.4% ಕಾರ್ಮಿಕರು ವಿದೇಶಿಗರೇ ಆಗಿದ್ದಾರೆ. ಭಾರತದಲ್ಲಿ 2011ರ ಸೆನ್ಸಸ್ ವರದಿಯಂತೆ, 54.3 ಮಿಲಿಯನ್ ಜನರು ರಾಜ್ಯಗಳ ನಡುವಿನ ವಲಸಿಗ ಕಾರ್ಮಿಕರಾಗಿದ್ದಾರೆ. ಈ ಸಂದರ್ಭದಲ್ಲಿ ಕೇರಳ ರಾಜ್ಯ ವಲಸಿಗ ಕಾರ್ಮಿಕರಿಗಾಗಿ, ಕೆಲಸ ಮತ್ತು ರಾಜ್ಯ ಭಾಷೆಯ ತರಬೇತಿಯನ್ನು ಮಕ್ಕಳಿಗೆ ಶಿಕ್ಷಣದ ಭರವಸೆಯನ್ನು ನೀಡಿದೆ. ವ್ಯವಸ್ಥಿತ ಕಾರ್ಮಿಕ ಸಂಪನ್ಮೂಲವನ್ನು ಬಳಕೆ ಮಾಡಲು ಶಿಕ್ಷಣ, ಕೌಶಲ್ಯ ತರಬೇತಿ, ಸೌಕರ್ಯಗಳ ಮೂಲಕ ಕಾರ್ಮಿಕರ ಸ್ಥಿತಿ ಸುಧಾರಣೆ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಗೆ ಬುನಾದಿ ಹಾಕಬೇಕಿದೆ. ಇದೇ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಆಹಾರ ತ್ಯಾಜ್ಯ ಅಂಕಿ ಅಂಶ 2021ನ್ನು ಗಮನಿಸಿದಾಗ, ಒಂದು ಕಡೆ ಹಸಿವಿನಿಂದ ಮಿಲಿಯನ್‌ಗಟ್ಟಲೆ ಜನ ಸಾಯುತ್ತಿರುವುದು, ಮತ್ತೊಂದು ಕಡೆ ಟ್ರಕ್‌ಗಟ್ಟಲೆ ಆಹಾರ ನಿರುಪಯೋಗವಾಗುತ್ತಿರುವ ದೃಶ್ಯ ಚಿತ್ತ ಕಲಕುತ್ತದೆ. 2019ರಲ್ಲಿ 931 ಮಿಲಿಯನ್ ಟನ್ ಆಹಾರ ನಿರುಪಯುಕ್ತವಾಗಿದ್ದು, ಅದರಲ್ಲಿ 61% ಆಹಾರ, ಮನೆಗಳಿಂದ, ಕೆಟರಿಂಗ್ ಮತ್ತು ಹೋಟೆಲ್‌ಗಳಿಂದಾಗಿರುವುದು ಕಂಡು ಬಂದಿದೆ. ಇದನ್ನು 23 ಮಿಲಿಯನ್ ತ್ಯಾಜ್ಯ ಆಹಾರದ 40 ಟನ್ ತುಂಬಿದ ಟ್ರಕ್‌ಗಳು ಇಡೀ ವಿಶ್ವವನ್ನು 7 ಸುತ್ತು ಸುತ್ತುವರಿಯುವಷ್ಟಿದೆ ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ ಒಂದು ಲಕ್ಷ ಕೋಟಿಯಷ್ಟು ಆಹಾರ ತ್ಯಾಜ್ಯಕ್ಕೆ ಹೋಗಿದೆ. ಇದು ಕೇವಲ ಸಿದ್ಧಗೊಳಿಸಿದ ಆಹಾರ ಮಾತ್ರವಲ್ಲ. ಆಹಾರ ಪದಾರ್ಥಗಳು ಬೆಳೆಯುವ ಹೊಲದಲ್ಲಿ, ಮಾರುಕಟ್ಟೆಗೆ ಸಾಗಾಣಿಕೆಯಲ್ಲಿ ನಂತರ ಅಂಗಡಿಗಳಲ್ಲಿ ನಂತರ ಅಡುಗೆ ಕೋಣೆಯಲ್ಲಿ ಹಂತ ಹಂತವಾಗಿ, ಬೆಳೆಗಳು, ಹಣ್ಣು ತರಕಾರಿಗಳು ತ್ಯಾಜ್ಯಕ್ಕೆ ಸೇರುತ್ತಲೇ ಇರುತ್ತವೆ. ಹೊಲಗಳಲ್ಲಿ, ಸಾಕಾಣಿಕೆಯಲ್ಲಿ, ಮಾರುಕಟ್ಟೆ–ಅಂಗಡಿಗಳಲ್ಲಿ ಆಧುನಿಕ ತಾಂತ್ರಿಕರಣ ವ್ಯವಸ್ಥೆ ಮಾಡುವುದರಿಂದ ಲಕ್ಷೋಪಲಕ್ಷ ತ್ಯಾಜ್ಯ ನಿವಾರಣೆ ಮಾಡಬೇಕಾಗಿದೆ. ಈ ದಿಸೆಯಲ್ಲಿ ಚೀನಾದ ಮಾದರಿ **'Clean Plate Campaign'**ಯೆಡೆಗೆ ದೃಷ್ಟಿ ಹರಿಸಬೇಕಾಗಿದೆ. ಜನರಿಗೆ ಆಹಾರ–ಬೆಳೆ–ಪದಾರ್ಥ ಯಾವುದೇ ರೂಪದಲ್ಲೂ ಹಾಳು ಮಾಡಬಾರದೆಂಬ ಪ್ರಜ್ಞೆ ಜನರಲ್ಲಿ ರೂಢಿಸಬೇಕಿದೆ. ಇದರಿಂದ ಹಸಿರುಮನೆಯ ಗ್ಯಾಸ್ ಆವಿಯಾಗುವಿಕೆ ಮತ್ತು ಪರಿಸರ ಮಾಲಿನ್ಯ, ರಾಷ್ಟ್ರದ ಹಸಿವು ನಿವಾರಣೆ ಮಾಡಬಹುದು ಎಂದು ವಿಶ್ವಸಂಸ್ಥೆ ಕರೆ ನೀಡಿದೆ.

2020ನೇ ಮಾರ್ಚ್ 10 ರಂದು ದೇಶದ ಮೊದಲ ಕೋವಿಡ್ ಸಾವು ಕಲ್ಬುರ್ಗಿಯಲ್ಲಿ ಘಟಿಸಿ, ಈ ಮಾರ್ಚ್ 10ಕ್ಕೆ ಒಂದು ವರ್ಷ ಗತಿಸುತ್ತಿದೆ. ಮಾರ್ಚ್ 12 ಇದು ಕೋವಿಡ್‌ನಿಂದಾದ ಸಾವು ಎಂದು ದೃಢಪಟ್ಟಾಕ್ಷಣ ಅದೇ ದಿನ ಕಲ್ಬುರ್ಗಿಗೆ ದಿಗ್ಬಂದನ ವಿಧಿಸಲಾಯಿತು. ದಿನದಿಂದ ದಿನಕ್ಕೆ ಸಾವಿನ ಪ್ರಮಾಣ ಏರುತ್ತಲೇ ಸಾಗಿತು. ನಂತರ ಪ್ರಧಾನಿ ಅವರು ಮಾರ್ಚ್ 24 ರಿಂದ 21 ದಿನಗಳ ಮೊದಲ ಲಾಕ್‌ಡೌನ್ ವಿಧಿಸಿದರು. ಇದರ ಪರಿಣಾಮಗಳು ವಿಶ್ವದಾದ್ಯಂತ ಅತ್ಯಂತ ಭೀಕರವಾಗಿದ್ದರೂ, ಮಹಿಳೆಯರ ಮೇಲಿನ ಪರಿಣಾಮ ಭೀಭತ್ಸವಾಗಿತ್ತು. ಮಹಿಳಾ ದಿನಾಚರಣೆ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಕರೋನಾದಿಂದಾಗಿ ಮರಣಿಸಿದ, ಸಂಕಷ್ಟಕ್ಕೆ, ದೌರ್ಜನ್ಯಕ್ಕೆ ಸಿಲುಕಿದ, ಹಸಿವು ನಿರುದ್ಯೋಗದಿಂದ ತತ್ತರಿಸುತ್ತಾ, ಕಂಕುಳಲ್ಲಿ ಮಕ್ಕಳನ್ನು ಹೊತ್ತು, ತಲೆ ಮೇಲೆ ಸಮಾನು ಹೊತ್ತು, ಚಪ್ಪಲಿಗಳಿಲ್ಲದೆ ಉದ್ಯೋಗಕ್ಕಾಗಿ ಬಿಸಿಲಿನಲ್ಲಿ ಬಿರುಬೀಸ ನಡೆದ ಮಹಿಳಾ ಕಾರ್ಮಿಕರ ಬೇಗುದಿಗೆ ಪರಿಹಾರವೇ ಇಲ್ಲವಾಯಿತು. ಮಹಿಳಾ ದಿನಾಚರಣೆ ದಿನ ಕಟ್ಟಡ ಕಾರ್ಮಿಕ, ಕೂಲಿ ಕಾರ್ಮಿಕರು, ಕೆಲಸ ಮಾಡುತ್ತಲೇ ದೇಶ ಕಟ್ಟುವ ಕೆಲಸದಲ್ಲಿ ನಿರತರಾದುದನ್ನು ನಾವು ಕಾಣಬಹುದು. ಕರೋನಾ ಪಿಡುಗಿನ ವರ್ಷದಲ್ಲಿ ಮಹಿಳೆ ಮತ್ತು ಹೆಣ್ಣುಮಕ್ಕಳ ಆಹಾರ, ಆರೋಗ್ಯ, ಆದಾಯ, ರಕ್ಷಣೆಗಳು ದೊಡ್ಡ ಸವಾಲಾಗಿತ್ತು. ಇದರ ಪರಿಣಾಮದಿಂದಾಗಿ, ಕೆಲಸ ಕಳೆದುಕೊಂಡ ಮಹಿಳೆಯರಿಗೆ ಕೋವಿಡ್ ನಂತರ ಕೆಲಸ ಮರೀಚಿಕೆಯಾಯಿತು. ಶಾಲಾ ಕಾಲೇಜು ಮುಚ್ಚಿದ್ದರಿಂದ ಬಾಲ್ಯವಿವಾಹ, ಮನೆಕೆಲಸ, ದೌರ್ಜನ್ಯಗಳು ಅಧಿಕವಾದದ್ದು ಅಂಕಿಅಂಶಗಳು ತೆರೆದಿಡುತ್ತವೆ. ಅಂತೂ ಇಂತೂ ಹರಸಾಹಸದಿಂದ ಉದ್ಯೋಗ ಪಡೆದ ಮಹಿಳೆಯರು ಕೆಲಸದ ಸ್ಥಳದಲ್ಲಿ ಅಸಮಾನತೆ, ಅಭದ್ರತೆ, ರಜೆ ಸೌಲಭ್ಯವಿಲ್ಲದಿರುವುದು, ವೃತ್ತಿ ಕೌಶಲ್ಯಕ್ಕೆ ತಡೆ, ಇನ್ನೂ ಮುಂತಾದ ಸಮಸ್ಯೆಗಳನ್ನು ಇಂದಿಗೂ ಅನುಭವಿಸುತ್ತಿದ್ದಾರೆ. ತಮ್ಮ ಮಕ್ಕಳನ್ನು ಶಿಶುವಿಹಾರ, ಅಂಗನವಾಡಿಗಳಲ್ಲಿ ಪಾಲಿಸುವ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಬಜೆಟ್‌ನಲ್ಲಿ ಉಚಿತ ಆರೋಗ್ಯ ಸೇವೆ, ಗೌರವಧನ ಹೆಚ್ಚಳ ಬೇಡಿಕೆ ಇಟ್ಟು ಅಹೋರಾತ್ರಿ ಬೆಂಗಳೂರಿನ ಬಿರುಬಿಸಿಲಿನ ಬೇಗೆಯಲ್ಲಿ ಕುಳಿತು ಧರಣಿ ನಡೆಸುತ್ತಿದ್ದಾರೆ. ಅವರ ಬೇಡಿಕೆಗಳಿಗಾಗಿ ಸರ್ಕಾರದ ಮೇಲೆ ಒತ್ತಡ ತರಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಭವಿಷ್ಯದ ಮಕ್ಕಳ ಪಾಲಕರ ಸ್ಥಿತಿ ಎಂದೂ ಹದಗೆಡಬಾರದು.



ಆಫ್ರಿಕಾಕ್ಕೆ ಹೊರಡಲು ಸಿದ್ಧತೆ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪೋರ್‌ಬಂದರಿನಲ್ಲಿದ್ದ ಒಬ್ಬ ಮೇಮನ್ ಕಂಪನಿ (ಅಂಗಡಿ) ಯವರು ನಮ್ಮಣ್ಣನಿಗೆ ಹೀಗೆ ಬರೆದರು: "ದಕ್ಷಿಣ ಆಫ್ರಿಕಾದಲ್ಲಿ ನಮ್ಮ ವ್ಯಾಪಾರವಿದೆ. ನಮ್ಮದು ದೊಡ್ಡ ವ್ಯಾಪಾರ. ನಾವು ದಕ್ಷಿಣ ಆಫ್ರಿಕಾದ ನ್ಯಾಯಸ್ಥಾನದಲ್ಲಿ ನಲವತ್ತು ಸಾವಿರ ಪೌಂಡಿನ ಒಂದು ದೊಡ್ಡ ದಾವ ಹೂಡಿದ್ದೇವೆ. ಅದು ಬಹಳ ದಿನಗಳಿಂದ ನಡೆಯುತ್ತಾ ಇದೆ. ನಾವು ಉತ್ತಮರಾದ ವಕೀಲರು ಮತ್ತು ಬ್ಯಾರಿಸ್ಟರುಗಳನ್ನು ಗೊತ್ತುಮಾಡಿಕೊಂಡಿದ್ದೇವೆ. ನಿಮ್ಮ ತಮ್ಮನನ್ನು ನೀವು ಇಲ್ಲಿಗೆ ಕಳುಹಿಸಿದರೆ ನಮಗೆ ಸಹಾಯವಾಗುತ್ತದೆ. ಇದರಿಂದ ಅವನಿಗೂ ಒಳ್ಳೆಯದಾಗುತ್ತದೆ. ಆತ, ನಾವು ವಿವರಿಸುವುದಕ್ಕಿಂತ ಚೆನ್ನಾಗಿ, ಬ್ಯಾರಿಸ್ಟರಿಗೂ, ವಕೀಲರಿಗೂ ನಮ್ಮ ಪಕ್ಷದ ಸಂಗತಿಗಳನ್ನು ತಿಳಿಸಬಲ್ಲ. ಜತೆಗೆ ಈ ಹೊಸ ದೇಶವನ್ನು ನೋಡಬಹುದು. ಹೊಸ ಹೊಸ ಜನರ ಪರಿಚಯವನ್ನೂ ಹೊಂದಬಹುದು."

ನಮ್ಮಣ್ಣ, ಈ ವಿಷಯವನ್ನು ನನ್ನೊಂದಿಗೆ ಸಮಾಲೋಚಿಸಿದನು. ಬ್ಯಾರಿಸ್ಟರಿಗೆ ಮೊಕದ್ದಮೆಯ ವಿಷಯಗಳನ್ನು ತಿಳಿಸಿ ಹೇಳುವುದು ಮಾತ್ರವೋ, ಅಥವಾ ನಾನೇ ನ್ಯಾಯಸ್ಥಾನಕ್ಕೂ ಹೋಗಿ ವಾದಿಸಬೇಕೋ ಎಂಬುದು ನನಗೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ಆದರೂ ನನಗೆ ಹೋಗಬೇಕೆಂಬ ಆಸೆಯುಂಟಾಯಿತು.

ನಾನು ಹೋಗುತ್ತಿದ್ದುದು ದಾದಾ ಅಬ್ದುಲ್ಲಾ ಮತ್ತು ಕಂಪೆನಿ ಎಂಬ ಅಂಗಡಿಯವರ ಕೆಲಸಕ್ಕಾಗಿ ಅದರ ಪಾಲುದಾರರಾದ ಸೇಠ್ ಅಬ್ದುಲ್ ಕರೀಂ ಜವೇರಿಯವರನ್ನು ನಮ್ಮ ಪರಿಚಯ ಮಾಡಿಕೊಟ್ಟನು. ಸೇಠರು, "ಕೆಲಸ ನಿಮಗೆ ಕಠಿಣವಾಗುವುದಿಲ್ಲ. ನಮಗೆ ಮಿತ್ರರಾಗಿ ದೊಡ್ಡ ದೊಡ್ಡ ಐರೋಪ್ಯರು ಇದ್ದಾರೆ. ನಿಮಗೆ ಅವರ ಪರಿಚಯವಾಗುವುದು. ನಮ್ಮ ಅಂಗಡಿಯಲ್ಲಿಯೂ ನೀವು ನಮಗೆ ಸಹಾಯ ಮಾಡಬಹುದು. ನಮ್ಮ ಪತ್ರವ್ಯವಹಾರ ಹೆಚ್ಚಾಗಿ ಇಂಗ್ಲೀಷಿನಲ್ಲಿದೆ. ಅದರಲ್ಲಿಯೂ ನೀವು ನಮಗೆ ಸಹಾಯಕರಾಗಬಹುದು. ನೀವು ನಮ್ಮ ಅತಿಥಿಯೇ ಆಗಿರುತ್ತೀರಿ. ಆದುದರಿಂದ ನಿಮಗೆ ಯಾವ ಖರ್ಚೂ ಬೀಳುವುದಿಲ್ಲ" ಎಂದು ಹೇಳಿದರು.

"ನನ್ನ ಸೇವೆ ನಿಮಗೆ ಎಷ್ಟು ಕಾಲ ಬೇಕು, ಸಂಬಳ ಎಷ್ಟು ಕೊಡುತ್ತೀರಿ", ಎಂದು ಕೇಳಿದೆ. "ಒಂದು ವರುಷಕ್ಕಿಂತ ಹೆಚ್ಚು ಕಾಲ ಬೇಕಿಲ್ಲ. ಮೊದಲನೆ ದರ್ಜೆಯ ಪ್ರಯಾಣ ವೆಚ್ಚ, ಆಫ್ರಿಕಾದಲ್ಲಿರುವಾಗ ನಿಮ್ಮ ಊಟ ವಸತಿ ಎಲ್ಲದರ ವೆಚ್ಚ, ಜತೆಗೆ ಒಂದು ನೂರ ಐದು ಪೌಂಡು ಸಂಭಾವನೆ." ಹೀಗೆ ಹೋಗುವುದು ಬ್ಯಾರಿಸ್ಟರ್ ಆಗಿ ಅಲ್ಲ, ಅಂಗಡಿಯ ನೌಕರನಾಗಿ ಎಂದು ನಾಮ ಭಾವಿಸಿದೆ. ಆದರೆ ಹೇಗಾದರೂ ಸರಿಯೆ, ಭಾರತವನ್ನು ಬಿಟ್ಟರೆ ಸಾಕೆಂದು ನನಗೆ ಅನ್ನಿಸುತ್ತಿತ್ತು. ಜತೆಗೆ ಒಂದು ಹೊಸ ದೇಶವನ್ನು ನೋಡುವ, ಮತ್ತು ಹೊಸ ಅನುಭವವನ್ನು ಹೊಂದುವ ಆಸೆಯೂ ಸೇರಿತ್ತು. ಮನೆಯ ವೆಚ್ಚಕ್ಕೆ ನಮ್ಮಣ್ಣನಿಗೆ ನಾನು ನೂರ ಐದು ಪೌಂಡುಗಳನ್ನು ಕಳುಹಿಸಬಹುದಾಗಿತ್ತು, ನಾನು ಹೆಚ್ಚು ಚರ್ಚೆ ಮಾಡದೆ ನೌಕರಿಗೆ ಒಪ್ಪಿಕೊಂಡು ದಕ್ಷಿಣ ಆಫ್ರಿಕಾಕ್ಕೆ ಹೊರಡುವ ಸಿದ್ಧತೆ ಮಾಡಿಕೊಂಡೆ.

ನೇಟಾಲನ್ನು ತಲುಪಿದುದು : ದಕ್ಷಿಣ ಆಫ್ರಿಕಾಕ್ಕೆ ಹೊರಟಾಗ, ಹಿಂದೆ ನಾನು ಇಂಗ್ಲೆಂಡಿಗೆ ಹೊರಡುವಾಗ ಆದಷ್ಟು ವಿಯೋಗದುಃಖ ನನಗಾಗಲಿಲ್ಲ. ನಮ್ಮ ತಾಯಿ ತೀರಿಕೊಂಡಿದ್ದರು. ನನಗೆ ಸ್ವಲ್ಪ ಮಟ್ಟಿನ ಪ್ರಪಂಚಜ್ಞಾನವೂ, ಹೊರಗಿನ ಪ್ರಪಂಚದ ಅನುಭವವೂ ಉಂಟಾಗಿದ್ದವು. ರಾಜಕೋಟೆಯಿಂದ ಬೊಂಬಾಯಿಗೆ ಹೋಗಿ ಬರುವುದು ಅಸಾಮಾನ್ಯ ವಿಷಯವಾಗಿರಲಿಲ್ಲ.

ಈಗ ಹಂಡತಿಯನ್ನು ಬಿಟ್ಟು ಹೋಗುವ ವಿಯೋಗದುಃಖ ಮಾತ್ರ ನನಗೆ ಉಂಟಾಯಿತು. ನಾನು ಇಂಗ್ಲೆಂಡಿನಿಂದ ಹಿಂದಿರುಗಿದ ಈಚೆಗೆ, ನನಗೆ ಮತ್ತೊಂದು ಮಗು ಹುಟ್ಟಿದ್ದಿತು. ನಮ್ಮ ಪ್ರೇಮವು ಕಾಮದಿಂದ ವಿರಹಿತವಾಗಿದ್ದಿತೆಂದು ಇನ್ನೂ ಹೇಳಲು ಸಾಧ್ಯವಿರಲಿಲ್ಲ. ಆದರೂ ನಾವು ನಿಧಾನವಾಗಿ ಹೆಚ್ಚು ಶುದ್ಧರಾಗುತ್ತಾ ನಡೆದಿದ್ದವು. ಯೂರೋಪಿನಿಂದ ನಾನು ಹಿಂದಿರುಗಿದ ಮೇಲೆ, ನಾವಿಬ್ಬರೂ ಒಟ್ಟಿಗೆ ಇದ್ದ ಕಾಲ ಬಹು ಸ್ವಲ್ಪ, ಜತೆಗೆ ನಾನು ಉತ್ತಮ ಉಪಾಧ್ಯಾಯನಲ್ಲದಿದ್ದರೂ, ಹೇಗೋ ಆಕೆಗೆ ಶಿಕ್ಷಕನಾಗಿದ್ದೆ, ಕೆಲವು ಸುಧಾರಣೆಗಳನ್ನು ನಡೆಸಲು ಆಕೆಗೆ ನಾನು ಸಹಾಯಕನಾಗಿದ್ದೆ. ಆದುದರಿಂದ ಈ ಸುಧಾರಣೆಗಳನ್ನು ಮುಂದುವರಿಸುವುದಕ್ಕಾಗಿ ಯಾದರೂ ನಾವು ಒಟ್ಟಾಗಿರುವುದು ಅವಶ್ಯಕವೆಂದು ನಮ್ಮಿಬ್ಬರಿಗೂ ಅನ್ನಿಸಿತ್ತು. ಆದರೆ ದಕ್ಷಿಣ ಆಫ್ರಿಕಾದ ಆಕರ್ಷಣೆ, ವಿಯೋಗವನ್ನು ಸಹನೀಯವಾಗಿ ಮಾಡಿತು. ನಾನು ಅವಳನ್ನು ಸಮಾಧಾನಪಡಿಸುತ್ತಾ "ಒಂದು ವರುಷ ಕಳೆಯುವುದರೊಳಗಾಗಿ ನಾವು ಮತ್ತೆ ಸೇರುವುದು ಖಂಡಿತ" ಎಂದು ಹೇಳಿ ರಾಜಕೋಟೆಯಿಂದ ಬೊಂಬಾಯಿಗೆ ತೆರಳಿದೆ. ದಾದಾ ಅಬ್ದುಲ್ಲಾ ಕಂಪನಿಯವರ ಏಜೆಂಟರ ಮೂಲಕ ನನಗೆ ಟಿಕೇಟು ದೂರೆಯಬೇಕಾಗಿತ್ತು. ಆದರೆ ಹಡಗಿನಲ್ಲಿ ಕ್ಯಾಬಿನ್ ಸಿದ್ಧವಿರಲಿಲ್ಲ. ನಾನು ಆ ಹಡಗಿನಲ್ಲಿ ಪ್ರಯಾಣ ಮಾಡದೆ ಇದ್ದಿದ್ದರೆ ಬೊಂಬಾಯಿಯಲ್ಲಿಯೇ ಉಳಿದು ಬಿಡಬೇಕಾಗಿತ್ತು.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ) : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇದು ಬರೀ ಕಾಗದದ ಒಪ್ಪಂದವಾಗಬಾರದು. ಇದರ ಅರ್ಥ ನಿರಂತರಕಾರ್ಯ, ಕಠಿಣ ಶಿಸ್ತಿಗೆ ಆಹ್ವಾನ. ಇದಕ್ಕೆ ಒಪ್ಪಿಕೊಂಡವರು ಪ್ರತಿಯೊಬ್ಬರೂ ತಾವೇ ನೂತ 2 ಸಾವಿರ ಗಜ ನೂಲನ್ನು ಕಳುಹಿಸಬೇಕಾಗುತ್ತದೆ. ನೂಲಲು ಆಗದಿದ್ದವರು ಅಥವಾ ಇಷ್ಟವಿಲ್ಲದಿದ್ದವರು ಇತರರಿಂದ ನೂಲಿಸಿ ಕಳುಹಿಸಬಹುದು. ಆದರೆ ಅವರು ಅದರ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬೇಕು. ಇದನ್ನು ಪೂರ್ತಿ ಅರ್ಥಮಾಡಿಕೊಂಡು, ಸಭೆ ಒಪ್ಪಿಗೆ ಕೊಡಬೇಕು ಎಂದರು. ಅಪರಿವರ್ತನವಾದಿಗಳ ಸಭೆಯಲ್ಲಿ ಸ್ವರಾಜ್ಯ ಪಕ್ಷಕ್ಕೆ ಒಂದು ಮತದಾನ ಪದ್ಧತಿ, ಕಾಂಗ್ರೆಸ್ಸಿಗೇ ಒಂದು ಇರಬಹುದೇ ಎಂಬ ಪ್ರಶ್ನೆ ಬಂದು, ಶ್ರೀ ಶ್ರೀನಿವಾಸಯ್ಯಂಗಾರ್ಯರು ಕಾಂಗ್ರೆಸ್ ನಿಯಮಗಳಿಗೆ ತಕ್ಕಹಾಗೆ ಸ್ವರಾಜ್ಯ ಪಕ್ಷದ ಅಂಗರಚನೆಯನ್ನು ತಿದ್ದಲು ಯೋಚಿಸಿದ್ದೇವೆ ಎಂದರು. ಅವರೂ ತಮ್ಮಂತೆಯೇ ಅಂಗರಚನೆಯನ್ನು ಮಾಡಿಕೊಳ್ಳುವರೆಂದು ತಿಳಿದು ಅಪರಿವರ್ತನವಾದಿಗಳು ಒಪ್ಪಂದವನ್ನು ಒಪ್ಪಿಕೊಂಡರು. ಆವತ್ತಿಗೆ ಮೂರನೆಯ ದಿನ ಎಂದರೆ 25-12-24ರಲ್ಲಿ ಗಾಂಧೀಜಿಯ ಹೇಳಿಕೆಯೊಂದು ಬಂತು, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವೆಚ್ಚ ಬಹಳ ಶ್ರೀಮಂತಿಕೆಯದು; ಅಲಂಕಾರಕ್ಕೆ ವಸತಿಗೆ ಹೆಚ್ಚು ಹಣ ವೆಚ್ಚವಾಗುತ್ತದೆ. ಈಗಿರುವ ಹತ್ತು ರೂಪಾಯಿ ಪ್ರತಿನಿಧಿಗಳ ಶುಲ್ಕ ಬಹಳ ಹೆಚ್ಚು ಎಂದು ಅದರಲ್ಲಿ ಇತ್ತು. ತಮ್ಮ ಗುಡಿಸಲು ಕೂಡ ಬಹಳ ಹಣ ತಿಂದಿದೆ. ತಾವು ಆ ಸಮಿತಿಯ ಸದಸ್ಯರಾಗಿದ್ದರೆ ಈ ವೆಚ್ಚವನ್ನೇ ತಗ್ಗಿಸಬಹುದಾಗಿತ್ತು ಎಂದರು. ಪ್ರತಿನಿಧಿಗಳ ಶುಲ್ಕ ಹತ್ತು ರೂಪಾಯಿ ಬೇಡ, ಒಂದು ರೂಪಾಯಿ ಸಾಕು ಎಂದರು. ಎಷ್ಟೋ ಜನ ನೂರಾರು ರೂಪಾಯಿ ವೆಚ್ಚಮಾಡಿ ಕಾಂಗ್ರೆಸ್ಸಿಗೆ ಬಂದಿದ್ದಾರೆ ಎಂದು ಹೇಳಿದರು. ವಿಷಯ ನಿಯಾಮಕ ಸಮಿತಿಯು ಪ್ರತಿನಿಧಿಶುಲ್ಕವನ್ನು ಒಂದು ರೂಪಾಯಿಗೆ ಇಳಿಸಿತು. ಮುಂದಿನ ಕಾಂಗ್ರೆಸ್ಸಿನ ಅಧಿವೇಶನ, ಯಾವ ಪ್ರಾಂತದಲ್ಲಿ ಖಾದೀ ಕಾರ್ಯಕ್ರಮ ಪರದೇಶಿ ವಸ್ತ್ರ ಬಹಿಷ್ಕಾರ, ಆ ಪ್ರಾಂತದ ಜನಸಂಖ್ಯೆಗೆ ಅನುಗುಣವಾಗಿ, ಹೆಚ್ಚು ಆಗಿದೆಯೋ ಅಲ್ಲಿ ನಡೆಯಬೇಕು ಎಂದು ತೀರ್ಮಾನ ಆಯಿತು.

ವಿಷಯ ನಿಯಾಮಕ ಸಮಿತಿಯಲ್ಲಿ (25.12.1924):

ನಾಳೆ ಮೂರು ಗಂಟೆಗೆ ಸರಿಯಾಗಿ ನಾವು ಸೇರುತ್ತೇವೆ. ಒಂದೆರಡು ನಿಮಿಷ ಪ್ರಾರ್ಥನೆ. ಆಮೇಲೆ ಸ್ವಾಗತ ಭಾಷಣ. ಅದು 15 ನಿಮಿಷಕ್ಕೆ ಹೆಚ್ಚಾಗುವುದಿಲ್ಲ. ನಾನು ನನ್ನ ಭಾಷಣ ಓದುವುದಿಲ್ಲ. ಇವತ್ತು ಸಂಜೆಗೆ ಅದರ ಪ್ರತಿಗಳನ್ನು ಹಂಚುತ್ತಾರೆ. ಅದನ್ನು ಚೆನ್ನಾಗಿ ಓದಿ. ನಾನು ಕೆಲವು ಪ್ರಾರಂಭದ ಮಾತುಗಳನ್ನು ಹೇಳುತ್ತೇನೆ. ಹಿಂದೂಸ್ತಾನಿಯಲ್ಲಿ ಪ್ರಾರಂಭಿಸಿ ಇಂಗ್ಲೀಷಿನಲ್ಲಿ ಮುಗಿಸುತ್ತೇನೆ. ನಾಳೆ ಮೊಟ್ಟಮೊದಲು ಬರುವ ಗೊತ್ತುವಳಿ ಕಲ್ಕತ್ತೆಯ ಒಪ್ಪಂದದ ಬಗ್ಗೆ. ಅದನ್ನು ಮೌಲಾನಾ ಹಜರತ್ ಮೋಹಾನೀ ವಿರೋಧಿಸುತ್ತಾರೆ. ಈ ಸಂದರ್ಭದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಒಂದು ಅರ್ಥದಲ್ಲಿ ನೀವು ಪ್ರತಿನಿಧಿಗಳು, ಎಲ್ಲರೂ ಬಂದಿದ್ದಾರೆ. ಭಾರವನ್ನೆಲ್ಲ ನನ್ನ ತಲೆಯ ಮೇಲೆ ಹಾಕುವಹಾಗಿದ್ದರೆ ಈ ಗೊತ್ತುವಳಿಯನ್ನು ಒಪ್ಪಿಕೊಳ್ಳಬೇಡಿ ಎಂದು ಮರ್ಯಾದೆಯಿಂದ ಹೇಳುತ್ತೇನೆ. ನನ್ನ ಹೆಗಲು ಈ ಭಾರವನ್ನು ಹೊರಲಾರದು. ನಿಮ್ಮ ಸಹಾಯವಿದ್ದರೆ ಮಾತ್ರ ಹೊರಬಲ್ಲೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಇದಕ್ಕೆ ತತ್ವಶಃ ಅಕ್ಷರಶಃ ಪೂರ್ಣ ಮನಸ್ಸಿನಿಂದ ನೆರವು ಕೊಡಲು ಸಿದ್ಧರಾಗದಿದ್ದರೆ, ನಮ್ಮ ಉದ್ದೇಶ ಸಫಲ ಆಗುವುದಿಲ್ಲ. ಪರದೇಶೀ ವಸ್ತ್ರ ಬಹಿಷ್ಕಾರ ಮಾಡುವುದೇ ನಮ್ಮ ಉದ್ದೇಶ. ಇದನ್ನು ಕಾರ್ಯಗತಮಾಡಲು ಕಡು ಬಡವರಾದ ಗಂಡಸರೂ, ಹೆಂಗಸರೂ, ಮಕ್ಕಳೂ ಇವರೆಲ್ಲರ ಸಹಾಯದಿಂದ ಮಾತ್ರ ಸಾಧ್ಯ. ಇದು ಪ್ರಾಮಾಣಿಕ ಪ್ರಯತ್ನವಾಗಬೇಕು. ನನ್ನ ವಿನಮ್ರ ಅಭಿಪ್ರಾಯದಲ್ಲಿ ಇಡೀ ರಾಷ್ಟ್ರವೇ ಕೈಕೊಳ್ಳಲು ತಕ್ಕುದಾದ ಕಾರ್ಯಕ್ರಮ ಇದು. ಇವತ್ತು ನಾವು ಮಾಡಬಹುದಾದುದು ಇಷ್ಟೇ. ಇದನ್ನು ಮಾಡಿದರೆ ಇನ್ನೂ ಸಾವಿರ ಕಾರ್ಯಗಳನ್ನು ಮಾಡಬಹುದು ಎಂದು ನಮಗೆ ನಾವೇ ಮನಗಾಣುತ್ತೇವೆ. ಇದನ್ನು ಜಗತ್ತಿಗೂ ತೋರಿಸಿಕೊಡುತ್ತೇವೆ.

ಇವತ್ತು ಬಂದ ತಿದ್ದುಪಡಿ ನನ್ನನ್ನು ಬಹಳ ನೋಯಿಸಿತು. ಭೋಪಟಕರರು ಅದನ್ನು ಮಂಡಿಸುತ್ತಾ, ಎಲ್ಲ ಸಂದರ್ಭದಲ್ಲಿಯೂ ನಮ್ಮಲ್ಲಿ ವಯಸ್ಕರಾದವರೇ ನೂಲದೇ ಇದ್ದರೆ, ಖಾದೀ ಧರಿಸದೇ ಇದ್ದರೆ, ಮಕ್ಕಳು ಹಾಗೆ ಮಾಡಿಯಾರು ಎಂದು ನಿರೀಕ್ಷಿಸಬಾರದು ಎಂದರು. ಇದು ನಿಜವಾಗಿಯೂ ನನ್ನನ್ನು ನೋಯಿಸಿತು. ಏಕೆಂದರೆ ಮತಾಧಿಕಾರ ಪಾತ್ರತೆಯ ಬಗೆಗೆ ನಾವು ಹಾಕಿದ ನಿರ್ಬಂಧದ ವಿಷಯಕ್ಕೆ ಶ್ರೀ ಭೋಪಟಕರರು ಅದರಲ್ಲಿ ಇಲ್ಲದ ಅರ್ಥವನ್ನು ಆರೋಪಿಸಿದ್ದಾರೆ. ಅವರು ಮಾಡಿದ ಈ ವಿವರಣೆ ಸರಿಯಲ್ಲ. ನಾವು ಹಾಕಿಕೊಂಡ ಕನಿಷ್ಠ ಮಿತಿ ಇದು. ಅದೇ ಸ್ವಾಭಾವಿಕ. ಏಕೆಂದರೆ ಈ ಕನಿಷ್ಠ ಮಿತಿಯನ್ನು ಅಂಗೀಕರಿಸದವರಿಗೆ ಮತದಾನದ ಅಧಿಕಾರ ಬಹಳ ಪವಿತ್ರ. ಅದಕ್ಕೆ ಕನಿಷ್ಠ ಮಿತಿಯನ್ನು ಹಾಕಲೇಬೇಕು. ಎಲ್ಲ ರಾಜಕೀಯ ಮತ್ತು ಇತರ ಸಮಾರಂಭಗಳ ಸಂದರ್ಭಗಳಲ್ಲೆಲ್ಲ ಖಾದಿಯನ್ನು ಹಾಕಿಕೊಳ್ಳಬೇಕು ಎಂಬುದು ಕನಿಷ್ಠ ಮಿತಿ. ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ಮುಗಿದ ಕೂಡಲೇ ಖಾದೀ ಉಡುಪನ್ನು ನೀವು ಕೈಬಿಡುತ್ತೀರಿ ಎಂದು ಅರ್ಥವಲ್ಲ.

ಮುಂದುವರಿಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ರತ್ನಾಬಾಯಿ ಸತ್ಯವಂತರಾವ್

ಬಳ್ಳಾರಿಯಲ್ಲಿ ಗಾಂಧಿ ಅವರ ರಚನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಂಡವರಲ್ಲಿ ಪ್ರಮುಖರಾದವರು ಸತ್ಯವಂತರಾವ್ ಮತ್ತು ರತ್ನಾಬಾಯಿ ದಂಪತಿಗಳು. ರತ್ನಬಾಯಿ ಅವರು ಬಾಲ್ಯವಿವಾಹದ ನಂತರ ವಿಧವಾ ಜೀವನದ ಅತೀ ಕಷ್ಟದಲ್ಲಿ ಸಂದರ್ಭದಲ್ಲಿ ಸತ್ಯವಂತರಾವ್ ಅವರನ್ನು ವಿವಾಹವಾದರು. ದಂಪತಿಗಳಿಬ್ಬರು ಸೇರಿ 1929ರಲ್ಲಿ ಹರಿಜನ ಬಾಲಕಿಯರಿಗಾಗಿ ಹೈಸ್ಕೂಲ್ ಆರಂಭಿಸಿದರು. ಈ ಹೈಸ್ಕೂಲ್‌ನೊಂದಿಗೆ ಸರ್ಕ್ಯೂಲೇಟಿಂಗ್ ಲೈಬ್ರರಿ ಆರಂಭಿಸಿ, ಸಮುದಾಯದ ಮಕ್ಕಳನ್ನು ಶಿಕ್ಷಿತರನ್ನಾಗಿಸಲು ದುಡಿದರು.

ರಾಮಲಿಂಗಮ್ಮ

ಅದೋನಿ ತಾಲ್ಲೂಕು ಪೆದ್ದ ಕಡಬೂರಿನ ಐ. ವೆಂಕಟರೆಡ್ಡಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಅವರ ಪತ್ನಿ ರಾಮಲಿಂಗಮ್ಮ ಪತಿಯೊಂದಿಗೆ ಸೇರಿ ಅದೇ ಊರಿನಲ್ಲಿ "ಭಾರದ್ವಜ ಆಶ್ರಮ" ಸ್ಥಾಪಿಸಿದರು. ಅಲ್ಲಿ ಖಾದಿ ಬಟ್ಟೆ ತಯಾರಿಕೆ, ಕೈಯಲ್ಲಿ ಕಾಗದ ತಯಾರಿಕೆ ಘಟಕಗಳನ್ನು ಸ್ಥಾಪಿಸಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಕಳುಹಿಸಲಾಗುತ್ತಿತ್ತು. ಪತಿ 1940–41ರಲ್ಲಿ 'ಎಮ್ಮಿಗನೂರು ಸತ್ಯಾಗ್ರಹಿಗಳ ತಂಡ ಸೇರಿಕೊಂಡು ಕಾಲ್ನಡಿಗೆಯಲ್ಲಿ 'ದೆಹಲಿ ಚಲೋ' ಚಳುವಳಿಯಲ್ಲಿ ಭಾಗವಹಿಸಿದಾಗ ಮಧ್ಯಪ್ರದೇಶದಲ್ಲಿ ಬಂಧನಕ್ಕೊಳಗಾದರು. ಪತಿಯ ಬಂಧನದಿಂದ ವಿಚಲಿತರಾಗದ ರಾಮಲಿಂಗಮ್ಮ, ಆಶ್ರಮ, ಖಾದಿ ಬಟ್ಟೆ ತಯಾರಿಕೆ ಮತ್ತು ಕಾಗದ ಘಟಕಗಳನ್ನು ಸುಸೂತ್ರವಾಗಿ ನಡೆಸುತ್ತಾ ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾಯಕರಾಗಿ ನಿಂತರು. ಆಶ್ರಮಕ್ಕೆ ಅಗತ್ಯವಿರುವ ಜಮೀನನ್ನು ದಾನವಾಗಿ ರಾಮಲಿಂಗಮ್ಮ ಅವರೇ ಕೊಟ್ಟಿದ್ದರು.

ಬಳೇಕಲ್ಲು ರಾಮಕ್ಕ ಮತ್ತು ನಂಟೆ ಯಂಕಮ್ಮ

ಬಳ್ಳಾರಿಯ ಆದವಾನಿ ತಾಲ್ಲೂಕು, ಬಳೇಕಲ್ಲು ರಾಮಕ್ಕ ಮತ್ತು ನಂಟೆ ಯಂಕಮ್ಮ ಇವರು, 1942ರ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಬಂಧಿಸಲಾಗಿತ್ತು. ಮತ್ತು ಆರು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿತ್ತು.

ಮುಂದುವರಿಯುವುದು...

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಅವರು ಸಂಯುಕ್ತವಾಗಿ ದಿ.24.12.2020ರಂದು ಆಯೋಜಿಸಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಂಡಿಸಿದ ಲೇಖನವನ್ನು ಫೆಬ್ರವರಿ ತಿಂಗಳಿಂದ ಪ್ರಕಟವಾಗುತ್ತಿದೆ.

ನೂಲುವ ಚಕ್ರದ ವಿಜ್ಞಾನ– ಗಾಂಧೀಜಿ ಅವರು ಚರಕದಿಂದ ನೂಲನ್ನು ತೆಗೆದು ಬಟ್ಟೆಯನ್ನು ನೇಯುವುದನ್ನು ಅತ್ಯಂತ ವಿಭಿನ್ನ ದೃಷ್ಟಿ ಕೋನದಿಂದ ನೋಡಿದರು. ಅವರು ಅದನ್ನು ಬಳಸುವವರಿಗೆ ಹೇಳಿರುವ ವಿಷಯಗಳನ್ನು ಗಮನಿಸೋಣ. ಮೊದಲನೆಯದಾಗಿ, ಅವರು ರೈತರಿಗೆ ಉತ್ತಮವಾದ ಅಂದರೆ ಗಟ್ಟಿಯಾದ ಎಳೆಯನ್ನು ಕೊಡಬಲ್ಲ ಹತ್ತಿಯನ್ನು ಬೆಳೆಯುವಂತೆ ಹೇಳುತ್ತಿದ್ದರು, ಮಾತ್ರವಲ್ಲ, ಅಂತಹ ಹತ್ತಿ ಯಾವುದೆಂದು ತಿಳಿದುಕೊಂಡು ಆ ತಳಿಯನ್ನು ಬೆಳೆಯುವಂತೆ ಹೇಳುತ್ತಿದ್ದರು. ಮಾತ್ರವಲ್ಲ ಅಂತಹ ಹತ್ತಿ ಯಾವುದೆಂದು ತಿಳಿದುಕೊಂಡು ಆ ತಳಿಯನ್ನು ಅಭಿವೃದ್ಧಿ ಪಡಿಸಬೇಕು ಎನ್ನುವ ಸಲಹೆಯನ್ನು ನೀಡುತ್ತಿದ್ದರು. ಹತ್ತಿಯನ್ನು ಬಳಸುವಾಗ ಅದರ ಬೀಜ ಒಡೆಯಬಾರದು ಎನ್ನುವುದು ಕೂಡಾ ಗಾಂಧೀಜಿ ಅವರ ಒಂದು ಸಿದ್ಧಾಂತವಾಗಿತ್ತು. ಯಾಕೆಂದರೆ ಬೀಜಗಳನ್ನು ಸಂಗ್ರಹಿಸಿ ಅದರಿಂದ ಎಣ್ಣೆಯನ್ನು ತೆಗೆಯಬೇಕು. ಮತ್ತು ಬೀಜಗಳನ್ನು ದನಕರುಗಳಿಗೆ ಆಹಾರವಾಗಿ ಬಳಸಬೇಕು. ಇಷ್ಟು ಮಾತ್ರವಲ್ಲ ಗಾಂಧೀಜಿ ಅವರು ಚರಕ ಮತ್ತು ತಕಲಿಗಳನ್ನು ಸುಧಾರಿಸಲು ವೈಜ್ಞಾನಿಕವಾಗಿ ಹೆಚ್ಚು ಸಮರ್ಥವಾಗುವಂತೆ ಮಾಡಲು ಪ್ರಯತ್ನಿಸಿದರು. ತಕಲಿಯ ತಿರುಗುವಿಕೆಯ ವೇಗವನ್ನು ಹೆಚ್ಚಿಸಲಾಯಿತು. ಚರಕವನ್ನು ಮತ್ತಷ್ಟು ಸುಧಾರಿಸುವಂತೆ ಮಾಡಲು ಗಾಂಧೀಜಿ ಅವರು ಸ್ಪರ್ಧೆಯನ್ನು ಏರ್ಪಡಿಸಿದ್ದರು.1920ರಲ್ಲಿ ಅದಕ್ಕಾಗಿ 5000 ರೂಪಾಯಿಗಳ ಬಹುಮಾನವನ್ನು ಘೋಷಿಸಿದ್ದರು. ಹಾಗೂ ಅದನ್ನು ಕೊಡಲಾಯಿತು. 1929ರಲ್ಲಿ ಗಾಂಧೀಜಿ ಅವರು ಸುಧಾರಿತ ಮತ್ತು ವೈಜ್ಞಾನಿಕ ಚರಕದ ಸ್ಪರ್ಧೆಯನ್ನು ಏರ್ಪಡಿಸಿ ಅದಕ್ಕಾಗಿ ಒಂದು ಲಕ್ಷ ರೂಪಾಯಿಯ ಬಹುಮಾನವನ್ನು ಘೋಷಿಸಿದ್ದರು. ಆಗ ಸಿದ್ಧಪಡಿಸಿದ್ದ ಬಾಕ್ಸ್ ಟೈಪ್ ಚರಕವೊಂದನ್ನು ಗಾಂಧೀಜಿ ಅವರು ಲಂಡನ್ನಿಗೆ ತೆಗೆದುಕೊಂಡು ಹೋಗಿದ್ದರು. ಇತ್ತೀಚೆಗೆ ಅದನ್ನು ಹರಾಜು ಮಾಡಲಾಯಿತು. ಗಾಂಧೀಜಿ ಅವರ ಆಶ್ರಮ ಈ ರೀತಿಯ ಪ್ರಯೋಗಗಳಿಗೆ ಕಾರ್ಯಾಗಾರವಾಯಿತು. ಒಳ್ಳೆಯ ಸ್ಪಿಂಡಲ್ಲುಗಳನ್ನು ತಯಾರು ಮಾಡುವ ಯಂತ್ರಗಳನ್ನು ತಯಾರಿಸುವ ಯಂತ್ರಗಳ ಕಡೆಗೆ ಅವರು ಒಲವು ಹೊಂದಿದ್ದರು. ಅದಕ್ಕಾಗಿ ಅವರು ಆಲ್ ಇಂಡಿಯಾ ಸ್ಪಿನ್ನರ್ ಅಸೋಸಿಯೇಶನ್‌ಗೆ ಪತ್ರವನ್ನು ಕೂಡಾ ಬರೆದ ದಾಖಲೆಯಿದೆ.

ಮುಂದುವರಿಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ ಕೃತಿಯಿಂದ ಆಯ್ದ ಭಾಗಗಳು)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಎರಡು ಮತಗಳಿಗೂ ನಿಜವಾದ ಸೌಹಾರ್ದವುಂಟಾದರೆ, "ಮಗುವಿನಂತೆ ಕುಣಿದೇನು". ಆಗ 125 ವರ್ಷ ಬದುಕುವ ಆಸೆ ಪುನರುಜ್ಜೀವಿತವಾಗುವುದು. ವೈದ್ಯರ ಮಾತನ್ನು ಕೇಳಲಿಲ್ಲ. ದೇಹಸ್ಥಿತಿಯ ಪರೀಕ್ಷೆಗೆ ಅವಕಾಶ ಕೊಡಲಿಲ್ಲ. ಉಪ್ಪುಹಾಕಿ ಅಥವಾ ಹಾಕದ ನಿಂಬೆ ಹುಳಿಯೊಡನೆ ನೀರು ಕುಡಿಯಲು ನಿರಾಕರಿಸಿದನು. ಪ್ರತಿ ದಿನ ದೇಹದ ತೂಕ ಎರಡು ಪೌಂಡು ತಗ್ಗುತ್ತಿತ್ತು. ಮೂತ್ರ ಜನಕಾಂಗಗಳು ಸರಿಯಾಗಿ ಕೆಲಸ ಮಾಡದೆ ಶಕ್ತಿ ಕುಗ್ಗುತ್ತಿತ್ತು. ಆತನು ಲಕ್ಷ್ಯಮಾಡಲಿಲ್ಲ. "ನನ್ನನ್ನು ದೇವರ ಕೈಗೆ ಒಪ್ಪಿಸಿದ್ದೇನೆ." ಮಾರನೆಯ ದಿನ ಕರುಳನ್ನು ತೊಳೆಯಲು ಅನುಮತಿ ಕೊಟ್ಟನು. ಬೆಳಗಿನ ಜಾವಾ 2.30 ಗಂಟೆಗೆದ್ದು, ಸ್ನಾನಮಾಡಿ, ಪಾಕಿಸ್ತಾನಕ್ಕೆ ಅವಿಭಕ್ತ ಇಂಡಿಯಾದಿಂದ ಸಲ್ಲಬೇಕಾದ 550,000,000 ರೂಪಾಯಿಗಳನ್ನು ಕೊಡಬೇಕೆಂದು ನೆಹರು ಸರ್ಕಾರಕ್ಕೆ ಪ್ಯಾರೀಲಾಲ್‌ರ ಕೈಯಲ್ಲಿ ಕಾಗದ ಬರೆದನು. ಸ್ವಲ್ಪ ಹೊತ್ತಾದ ಮೇಲೆ ಆರ್ಥಿಕ ಮಂತ್ರಿ ಡಾಕ್ಟರ್ ಜಾನ್ ಮತ್ತಾಯ್, ನೆಹರು, ಸರ್ದಾರ್ ವಲ್ಲಭಬಾಯ್ ಪಟೇಲ್ ಗಾಂಧಿಯ ಬಳಿಗೆ ಬಂದು ಆ ಹಣ ಕೊಡಲು ಏಕೆ ಸಾಧ್ಯವಿಲ್ಲವೆಂಬುದನ್ನು ವಿವರಿಸಿದರು. ಮೊದಲು ಮತ್ತಾಯ್, ನೆಹರು ಮಾತನಾಡಿದರು. ಅನಂತರ ಪಟೇಲ್ ಒಂದೂವರೆ ಗಂಟೆ ಹೊತ್ತು ಮಾತನಾಡಿ, ತಮ್ಮ ನಿಲುವನ್ನು ಸಮರ್ಥಿಸಿಕೊಂಡನು. ಪಟೇಲರ ಮಾತು ಮುಗಿಯುತ್ತಲೇ ಗಾಂಧಿ ಎದ್ದು ಕುಳಿತು ಸರ್ದಾರ್, "ನೀವು ನನಗೆ ಪರಿಚಿತರಾದ ಸರ್ದಾರರಲ್ಲ," ಎಂದು ಹೇಳಿ ಕಣ್ಣೀರಿಟ್ಟರು. ಮತ್ತಾಯ್, ನೆಹರು, ಪಟೇಲರು ಪುನಃ ಮಂತ್ರಿಮಂಡಲದ ಸಭೆ ಸೇರಿದರು. ಅವರೆಲ್ಲಾ ಮಹಾತ್ಮರ ಮನಃಕ್ಷೇಶವನ್ನು ಅರಿಯುತ್ತಲೇ ಹಣ ಕೊಡಲೊಪ್ಪಿದರು. ಬಿರ್ಲಾ ಮಂದಿರದ ಮುಂದೆ ಗಾಂಧಿಯ ಮಂಚಕ್ಕೆ ಹತ್ತಡಿ ದೂರದಲ್ಲಿ ಸಾವಿರಾರು ಜನ ಇಂಡಿಯನ್ನರೂ, ಪರದೇಶಿಯರೂ ಸಾಲಾಗಿ ನಡೆದು ಹೋದರು. ಮೊಣಕಾಲನ್ನು ಹೊಟ್ಟೆಯ ಕೆಳಗೆಳೆದುಕೊಂಡು ಗಾಂಧಿ ಮಲಗಿದ್ದರು. ತಲೆ, ದೇಹಗಳೆಲ್ಲಾ ಬಿಳೀ ಖಾದಿ ದುಪಟಿಯಿಂದ ಮುಚ್ಚಲ್ಪಟ್ಟು ಮುಖಮಾತ್ರ ಕಾಣುತ್ತಿತ್ತು. ಕಣ್ಣು ಮುಚ್ಚಿ, ಅರೆಜ್ಞಾನದಲ್ಲಿದ್ದಂತಿದ್ದನು. ಮುಖದಲ್ಲಿ ತೀವ್ರವಾದ ನೋವು ಕಾಣುತ್ತಿತ್ತು. ಆದರೂ ಹೇಗೋ ನಿದ್ದೆಯಲ್ಲಿ, ಅರೆಜ್ಞಾನದಲ್ಲಿ ನೋವು ಉದಾತ್ತವಾದಂತಿತ್ತು. ನಂಬಿಕೆಯ ಉನ್ಮತ್ತತೆಯಲ್ಲಿ, ಸೇವೆಯ ಅರಿವಿನಲ್ಲಿ ಮರೆಯಾದ ನೋವದು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ

ಸರ್ವಾಧಿಕಾರಿಗಳಿಗೆ ತಕ್ಕ ಶಾಸ್ತಿ

– ಡಾ. ಎಚ್.ಎಸ್. ದೊರೆಸ್ವಾಮಿ



ರಾಜಕೀಯ ಲಾಭಕ್ಕಾಗಿ ಸಮಾಜ ಒಡೆಯುವ ಕೆಲಸವನ್ನು ಪಕ್ಷಗಳು ಮಾಡುತ್ತಿದೆ. ಹಿಂದೂಗಳನ್ನು ಒಡೆಯುವ ಕೆಲಸವನ್ನು ಅರೆಸ್ಸೆಸ್, ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳಲ್ಲವೇ ಮಾಡುತ್ತಿರುವುದು? 'ಶಿಸ್ತಿಗೆ ನಾನು ಕರೆ ಕೊಟ್ಟರೆ ಸರ್ವಾಧಿಕಾರಿಪಟ್ಟ ಕಟ್ಟುತ್ತಾರೆ' ಎಂದು ತಮ್ಮ ಬಗ್ಗೆ ತಾವೇ ಅನುಕಂಪದ ಮಾತನ್ನಾಡುತ್ತಾರೆ. ಸಂಪುಟದಲ್ಲಿರುವವರ ವರ್ತನೆ ನೋಡಿದರೆ ಗಾಬರಿಯಾಗುತ್ತದೆ. ಜಾತಿ ದ್ವೇಷ ಬೆಳೆಸುವ, ಅವರ ಅಭಿಪ್ರಾಯಗಳನ್ನು ಒಪ್ಪದವರನ್ನು ಅವಾಚ್ಯ ಶಬ್ದಗಳಿಂದ ಟೀಕೆ ಮಾಡುವ, ಸಮಾಜದ ಸ್ವಾಸ್ಥ್ಯ ಕೆಡಿಸುವವರನ್ನು ಪ್ರೋತ್ಸಾಹಿಸುವ–ಇಂಥವರೇ ಶಿಸ್ತಿನ ಪಾಠ ಕಲಿತವರು. ಅವರಿಗೆ ಅಧಿಕಾರ ನೀಡಿ, ಸಂಬಳ ಸವಲತ್ತು ಭತ್ಯೆ ಇತ್ಯಾದಿ ನೀಡುತ್ತಿರುವುದು ಇಂಥಾ ಕೆಲಸಗಳಿಗಾಗಿಯೇ? ಶಿಸ್ತು ಬೆಳೆಸುವುದು ಎಂದರೆ ಇದೇನಾ? ಯುದ್ಧ ವಿಮಾನಗಳನ್ನು ಕೊಳ್ಳುವ ವಿಚಾರದಲ್ಲಿ ಫ್ರಾನ್ಸ್ ಸರ್ಕಾರದೊಂದಿಗೆ ಗುಟ್ಟಾಗಿ ಒಪ್ಪಂದ ಮಾಡಿಕೊಂಡು ಕೋಟ್ಯಾಧಿಪತಿ ಅಂಬಾನಿಗೆ ಸಾವಿರಾರು ಕೋಟಿ ಹರಿದು ಹೋಗುವಂತೆ ಮಾಡಿದ ಆರೋಪ ಹೊತ್ತಿರುವವರು ಸ್ವತಃ ಪಾರ್ಲಿಮೆಂಟನ್ನು ಕಡೆಗಣಿಸಿದ್ದು ಹಾಗಿರಲಿ, ಕ್ಯಾಬಿನೆಟ್‌ನ್ನೂ ಕಡೆಗಣಿಸಿದ್ದು ಎಷ್ಟು ಸರಿ? HALಗೆ ದೊರಕಬೇಕಾಗಿದ್ದ ಗುತ್ತಿಗೆ ಅಂಬಾನಿಗೆ ದೊರಕಿದ್ದಾದರೂ ಹೇಗೆ? ನಿರುದ್ಯೋಗ ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದ, ಅದೇ ವೇಳೆಯಲ್ಲಿ ಭ್ರಷ್ಟರು, ಕಳ್ಳಸಾಗಾಣಿಕೆದಾರರು, ಕೋಟ್ಯಾಧಿಪತಿಗಳು ತಮ್ಮಲ್ಲಿದ್ದ ಕಪ್ಪು ಹಣವನ್ನು ಬಿಳಿಯದಾಗಿ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟ ನೋಟು ರದ್ದತಿ ಎಷ್ಟು ಸಮಂಜಸ? ಹಾದಿಬೀದಿಯಲ್ಲಿ ಜನರನ್ನು ಥಳಿಸಿ ಕೊಲ್ಲಲಾಗುತ್ತಿದೆ. ಇದ್ಯಾವುದರ ಬಗ್ಗೆಯೂ ಒಂದು ಚಕಾರ ಶಬ್ದ ಎತ್ತದೆ, ಹಿಂಸಾಚಾರಕ್ಕೆ ಪರೋಕ್ಷ ಬೆಂಬಲ ನೀಡಲಾಗುತ್ತಿದೆ. ದಲಿತರ, ರೈತರ, ಆದಿವಾಸಿಗಳ ಪರವಾಗಿ ಹೋರಾಡುತ್ತಿರುವವರನ್ನು, ದುರಾಡಳಿತವನ್ನು ಪ್ರಶ್ನಿಸುತ್ತಿರುವವರನ್ನು ಸುಳ್ಳುಕೇಸುಗಳನ್ನು ಹಾಕಿ ಜೈಲಿಗಟ್ಟುವ ಇಂದಿರಾ ಗಾಂಧಿಯ ಚಾಳಿಯನ್ನೇ ಅನುಸರಿಸುತ್ತಿದ್ದಾರೆ. ಈ ಎಲ್ಲ ಅಧಿಕಾರದ ಅಕ್ರಮಗಳ ಹಿಂದೆ ಭಾರೀ ಸಂಘಟಿತ ಶಕ್ತಿಯೊಂದು ಕೆಲಸ ಮಾಡುತ್ತಿದೆ. ಇದೂ ಸಹಾ ಒಂದರ್ಥದಲ್ಲಿ ಸರ್ವಾಧಿಕಾರವೇ. ಒಬ್ಬ ವ್ಯಕ್ತಿ ನಿರಂಕುಶವಾಗಿ ಅಧಿಕಾರ ಚಲಾಯಿಸುವುದು ಮಾತ್ರ ಸರ್ವಾಧಿಕಾರವಾಗುವುದಿಲ್ಲ, ಭಿನ್ನ ಚಿಂತಕರ ದ್ವೇಷಿಸುತ್ತಾ ತಮ್ಮ ವಿಚಾರಗಳನ್ನಷ್ಟೇ ಪ್ರತಿಷ್ಠಾಪಿಸಲು ಒಟ್ಟುಗೂಡುವ ಚಿಂತನೆಗಳ ಸಮೂಹವೂ ಸರ್ವಾಧಿಕಾರಿ ಎನಿಸಿಕೊಳ್ಳುತ್ತದೆ. ಅಂತಹ ಸಮೂಹ ಸರ್ವಾಧಿಕಾರಕ್ಕೆ ಮುಖವಾಣಿಯಾಗುವುದು ದೇಶದ ವಿದ್ಯಮಾನಗಳಿಂದ ಸಾಬೀತಾಗುತ್ತದೆ. ಸರ್ವಾಧಿಕಾರಿಗಳಿಗೆ ಇತಿಹಾಸ ಕೊಟ್ಟ ಉತ್ತರವನ್ನು ಮರೆತಂತೆ ಕಾಣುತ್ತದೆ.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಆದರೂ ಅದನ್ನು ಲೆಕ್ಕಿಸದೆ, ವಾಮನ ಕಾಮತರು ತಮ್ಮ ಹತ್ತಿಗಿರಣಿಯ ಆವರಣದಲ್ಲಿಯೇ ಸಭೆಗೆ ಅವಕಾಶ ಮಾಡಿಕೊಟ್ಟರು. ನನ್ನ ಅಣ್ಣ ಮೂವರು ಗಾಂಧಿ ಅವರ ಕರೆಯ ಮೇರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದನ್ನು ಸ್ಮರಿಸಿಕೊಂಡು ಹೇಳುತ್ತಾರೆ. ನಿಪ್ಪಾಣಿಯ ವ್ಯಾಪಾರಿಯಾಗಿದ್ದ, ಚಂದೂಲಾಲ, ರಾ.ಪಾ. ಜತ್ರಟಕರ ಅವರು ಬಾಲ್ಯದ ನೆನಪುಗಳನ್ನು ದಾಖಲಿಸುತ್ತಾ "ನಾನು ರೇಡಿಯೋಗಳಲ್ಲಿ ಸ್ವರಾಜ್ಯ ಹೋರಾಟದ ಸುದ್ದಿಗಳನ್ನು ಕೇಳಿ ಉತ್ಸುಕನಾಗಿದ್ದೆ, ಲೋಕಮಾನ್ಯರು 1919ರಲ್ಲಿ ನಿಪ್ಪಾಣಿಗೆ ಬಂದಾಗ, ಸಾರ್ವಜನಿಕ ಭಾಷಣಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಆದರೆ ಎಲ್ಲರೂ ಸೇರಿ ಅಲ್ಲಿನ ಗುಡಿಯಲ್ಲೇ ಅವರಿಂದ ಭಾಷಣ ಮಾಡಿಸಿದ್ದರು. ಸಹಪಾಠಿಗಳೊಂದಿಗೆ ನಾನೂ ಭಾಗಿಯಾಗಿದ್ದೆ. ಸತತ ಒಂದು ಗಂಟೆಯ ಅವರ ಭಾಷಣ ಎಂಥಹವರನ್ನು ವೀರಾವೇಶಗೊಳಿಸುತ್ತಿತ್ತು. ಹಾಗೆ ನಾನೂ ಅವರಿಂದ ಪ್ರಭಾವಿತನಾಗಿ, ಸತ್ಯಾಗ್ರಹಗಳಲ್ಲಿ ಭಾಗವಹಿಸಲಾರಂಭಿಸಿದೆ ಎಂದು ಹೇಳಿದ್ದಾರೆ. ವಿಜಾಪುರದ ಶ್ರೀನಿವಾಸರಾವ್ ಕೌಜಲಗಿ ಅವರು ಖ್ಯಾತ ವಕೀಲರು ಮತ್ತು ಸ್ವಾತಂತ್ರ್ಯ ಹೋರಾಟದ ಮುಖಂಡರೂ ಆಗಿದ್ದರು. ಆ ಭಾಗದಲ್ಲಿ ಅವರು 'ಕರ್ನಾಟಕದ ಸಿಂಹ' ಎಂದೇ ಪ್ರಖ್ಯಾತರಾಗಿದ್ದರು. ಪುಣೆಯಲ್ಲಿ ಶಿಕ್ಷಣ ಪಡೆಯುವಾಗ, ಟಿಳಕರ ಸ್ನೇಹ ಬಳಗದವರೇ ಆಗಿದ್ದ ಶ್ರೀನಿವಾಸರಾಯರು, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಬೆಳೆಸಿದ್ದರು. ಟಿಳಕರ ಹೋಂ ರೂಲ್ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮುಧೋಳದ ಹಣಮಂತರಾವ್ ಕೌಜಲಗಿ ಅವರು ಬಾಲ್ಯದಿಂದಲೂ ರಾಷ್ಟ್ರೀಯ ಚಳುವಳಿಯಿಂದ ಆಕರ್ಷಿತರಾಗಿದ್ದರು. ಸ್ವದೇಶಿ ಚಳುವಳಿಯಲ್ಲಿ ಭಾಗಿಯಾಗುತ್ತಾ, ಶಿವಾಜಿ ಪ್ಲೇಯಿಂಗ್ ಕ್ಲಬ್ ಸ್ಥಾಪಿಸಿ, ಅದರಲ್ಲಿ ಕ್ರಾಂತಿಕಾರಿ ಚಟುವಟಿಕೆಯಲ್ಲಿ ತೊಡಗಿದರು.



ಪುಣೆಯಲ್ಲಿ ಶಿಕ್ಷಣ ಪಡೆಯುವಾಗಲೇ ಟಿಳಕರ ಕ್ರಾಂತಿಕಾರಿ ವಿಚಾರಗಳಿಂದ ಪ್ರಭಾವಿತರಾಗಿದ್ದರು. ಕೆಲಕಾಲ ಕರ್ನಾಟಕ ವೈಭವ ಪತ್ರಿಕೆಯ ಸಂಪದಕರಾಗಿಯೂ ಕಾರ್ಯನಿರ್ವಹಿಸಿದರು. ಇವರು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸುತ್ತಿದ್ದಾರೆಂದು ಇವರ ಮೇಲೆ ಕ್ರಿಮಿನಲ್ ಪ್ರೊಸಿಜರ್ ಕೋಡ್ 108ರಂತೆ ದಾವೆ ಹಾಕಿದ್ದರು. ಆಗ ವಿಚಾರಣೆಗೆ ಹೋಗುವ ಸಂದರ್ಭದಲ್ಲಿ ಗಾಂಧಿ ಟೋಪಿ ಧರಿಸಿದ್ದರು. ಇದಕ್ಕಾಗಿ ಅವರಿಗೆ ಒಂದು ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು. ಈ ವಿಷಯಗಳೂ ಸಹ 'ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಮತ್ತು ಸರ್ಕಾರದ ಕ್ರಮವನ್ನು ಖಂಡಿಸಿ ಪ್ರಕಟವಾಗಿತ್ತು. ಮೇಜರ್ ನುಗ್ಗೇಹಳ್ಳಿ ಅಚ್ಯುತ ಅವರ ತಂದೆ ನುಗ್ಗೇಹಳ್ಳಿ ನರಸಿಂಹಯ್ಯಂಗಾರ್ ಅವರು, ಅಂದಿನ 'ದಿ ಹಿಂದೂ' ಪತ್ರಿಕೆಯನ್ನು ತರಿಸಿ ರಾಷ್ಟ್ರ ರಾಜಕೀಯದ ವಿಷಯಗಳನ್ನು ಓದುತ್ತಿದ್ದರು. 1920ರ ಆಗಸ್ಟ್ ಒಂದರಂದು ಟಿಳಕರ ನಿಧನದ ವಾರ್ತೆ ಪ್ರಕಟವಾಗಿದ್ದನ್ನು ಓದಿ ಬಹಳ ದುಃಖಿತರಾಗಿ ಅವರ ಜೀವನದ ಚಿತ್ರಣವನ್ನು ಮಕ್ಕಳಾದ ನಮಗೆ ತಿಳಿಸಿದ್ದರು. ಮತ್ತು ಟಿಳಕರ ಶ್ರದ್ಧಾಂಜಲಿ ಸಭೆಗೂ ಕರೆದುಕೊಂಡು ಹೋಗಿದ್ದರು. ನಂತರ ಗಾಂಧಿ ಟೋಪಿ ಕೊಂಡು ಧರಿಸಿದ್ದನ್ನು ತದನಂತರ ಬೆಂಗಳೂರು ರೈಲು ನಿಲ್ದಾಣದಲ್ಲಿ ಗಾಂಧೀಜಿ ಅವರನ್ನು ಕಂಡಿದ್ದನ್ನು ಜ್ಞಾಪಿಸಿಕೊಂಡು ಬರೆದಿದ್ದಾರೆ. ಹಾಗೆಯೇ 'ಟಿಳಕರ ನಿಧಿಗೆ' ಹಣ ಸಂಗ್ರಹವನ್ನೂ ಮಾಡುತ್ತಿದ್ದುದನ್ನು ಮಹಾತ್ಮ ಗಾಂಧಿ ಮತ್ತೆಲ್ಲಾ ಧುರೀಣರನ್ನು ನೋಡಿದ ಒಡನಾಡಿದ ಸಂದರ್ಭಗಳನ್ನು ನುಗ್ಗೇಹಳ್ಳಿ ಅಚ್ಯುತ ಅವರು ಸ್ಮರಿಸುತ್ತಿದ್ದಾರೆ.

ಮುಂದುವರಿಯುವುದು..

ಅಕ್ಷರದವ್ವ : ಸಾವಿತ್ರಿಬಾ ಪುಲೆ :

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ದಂಪತಿಗಳಿಬ್ಬರೂ ತಮ್ಮನ್ನು ಸಜ್ಜುಗೊಳಿಸಿಕೊಂಡ ನಂತರ ತಮ್ಮಂತಹ ಸಾವಿರಾರು ಮಂದಿಯ ಜೀವನದ ಬಗ್ಗೆ ವಿಚಾರ ಮಾಡಿದರು. ಸರ್ಕಾರಿ ನೌಕರಿಯಾಗಲೀ, ಬ್ರಿಟಿಷರ ಮತ್ತು ಪೇಶ್ವೆಗಳ ಆಡಳಿತದಲ್ಲಿ ನೌಕರಿಗಾಗಲೇ ಹೋಗದೆ, ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡರು. ಅಂದಿನ ಭಾರತದಲ್ಲಿ ಸಮಾಜ ಸುಧಾರಕರು, ರಾಷ್ಟ್ರಪ್ರೇಮಿಗಳು, ಸಮಾಜ ಸುಧಾರಣೆ, ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಹಿಂದೂ ಸಮಾಜ ಸುಧಾರಣೆ, ಅಂಧಶ್ರದ್ಧೆ ನಿರ್ಮೂಲನೆ, ಕಾರ್ಯದಲ್ಲಿ ತೊಡಗಿದ್ದು, ವೈಚಾರಿಕತೆ, ವೈಜ್ಞಾನಿಕತೆಯೊಂದಿಗೆ ಬ್ರಿಟಿಷರ ವಿರುದ್ಧದ ಸಾರ್ವಜನಿಕ ಅಭಿಪ್ರಾಯಗಳು ಒಡಮೂಡುತ್ತಿದ್ದವು. ಭಾರತದಲ್ಲಿ ಬ್ರಿಟಿಷರ ಸಾಮ್ರಾಜ್ಯ ಮತ್ತಷ್ಟು ವಿಸ್ತಾರಗೊಂಡ ನಂತರ ದಕ್ಷಿಣ ಭಾರತದ ಮತ್ತು ಬಂಗಾಲ ರಾಜ್ಯಗಳು ಅವರ ಕೈವಶವಾದವು. ಗೌರ್ನರ್ ಜನರಲ್‌ಗಳ ಆಡಳಿತ ವ್ಯವಸ್ಥೆ ಜಾರಿಗೆ ಬಂದಿತು. ಹಾಗೆಯೇ ಮರಾಠ ಸಾಮ್ರಾಜ್ಯ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಆಂಗ್ಲರು ಮತ್ತು ಮರಾಠರ ನಡುವೆ 3 ಯುದ್ಧಗಳು ನಡೆದು, ಮರಾಠರು, ಶಕ್ತಿಹೀನರಾದರು. ಪೇಶ್ವೆಗಳು, ಪೆನ್‌ಶನ್ ಪಡೆಯುವಂತಾಯಿತು. ನಿಜಾಮರು ಬ್ರಿಟಿಷರ ಕೈಗೊಂಬೆಗಳಾದರು. ರಜಪೂತರು ಮೂಲೆ ಗುಂಪಾದರು. ಹೀಗಿದ್ದಾಗ್ಯೂ ಭಾರತೀಯರ ಮನಸ್ಸನ್ನು ಒಗ್ಗೂಡಿಸಲು ಎಲ್ಲಾ ತರಹದ ತಾರತಮ್ಯ, ಅಂಧಾನುಕರಣೆ



ಹೋಗಲಾಡಿಸಲು ಇಂಗ್ಲೀಷ್ ಶಿಕ್ಷಣ, ಮಹಿಳಾ ಶಿಕ್ಷಣ, ಪಾಶ್ಚಾತ್ಯ ವಿದ್ಯಾಭ್ಯಾಸ, ಉನ್ನತ ಶಿಕ್ಷಣಗಳನ್ನು ವ್ಯವಸ್ಥಿತವಾಗಿ ಹಂತ ಹಂತವಾಗಿ ಜಾರಿಗೊಳಿಸಲು ರಾಜಾರಾಮ್ ಮೋಹನ್ ರಾಯ್, ದ್ವಾರಕನಾಥ ಠಾಕೂರ್, ಈಶ್ವರಚಂದ್ರ ವಿದ್ಯಾಸಾಗರ್, ತಾತ್ಯಾಟೋಪಿ, ಬಾಲಗಂಗಾಧರ ತಿಲಕ್, ಬಿಪಿನ್ ಚಂದ್ರಪಾಲ್, ಲಾಲಾ ರಜಪತ್‌ರಾಯ್ ಮುಂತಾದವರು ಭಾರತೀಯರನ್ನು ಎಲ್ಲಾ ಆಯಾಮಗಳಿಂದ ಜಾಗೃತಗೊಳಿಸಲು ಟೊಂಕ ಕಟ್ಟಿ ನಿಂತಿದ್ದರು. ಇವರೆಲ್ಲರ ಪ್ರಭಾವ ಪುಲೆ ದಂಪತಿಗಳ ಹೃದಯದಲ್ಲಿ ಅಚ್ಚೊತ್ತಿ ನಿಂತಿತ್ತು. ಅಕ್ಷರ ಜ್ಞಾನ–ಶಿಕ್ಷಣವೇ ವಿಮೋಚನೆ ಹಾದಿ ಎಂದು ನಂಬಿದ ಸಾವಿತ್ರಿ ಬಾ ಪುಲೆ, ಪತಿಯ ಜೊತೆಗೂಡಿ 1851ರಲ್ಲಿ ಪುಣೆಯ ಬುಧವಾರ ಪೇಟೆಯಲ್ಲಿ 'ಕನ್ಯಾಶಾಲೆ'ಯೊಂದನ್ನು ಹೆಣ್ಣು ಮಕ್ಕಳಿಗಾಗಿ ತೆರೆದರು.

ಪುಟ 11ರಲ್ಲಿ ಮುಂದುವರಿದಿದೆ.

ಕನ್ನಡ ನೆಲ-ಜಲ-ಶಿಕ್ಷಣವನ್ನು ಸಮೃದ್ಧಿಗೊಳಿಸಿದ ಅಧಿಕೃತ ಗೊಳಿಸಿದ ಸರ್ಕಾರ ನೇಮಕಮಾಡಿದ ಸಮಿತಿಗಳ ವರದಿಗಳು

ಸಂಗ್ರಹ : ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನ್ನಡ ನಾಡನ್ನು ಕಟ್ಟುವಲ್ಲಿ, ವಿವಿಧ ಚಳುವಳಿಗಳು ಬಹು ಮುಖ್ಯ ಪಾತ್ರವಹಿಸಿದಂತೆ ಸರ್ಕಾರ ನೇಮಿಸಿದ ಸಮಿತಿಗಳ ವರದಿಗಳು ಪ್ರಮುಖವಾಗಿವೆ. 1967ರ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ವರದಿಯ ಉಲ್ಲೇಖವಿದೆ. ಆದರೆ ವರದಿ ಲಭ್ಯವಿಲ್ಲ. ಹಲವು ವರದಿಗಳು ಗಾತ್ರದಲ್ಲಿ ದೊಡ್ಡದಾಗಿವೆ. ಕೆಲವು ಆಂಗ್ಲ ಭಾಷೆಯಲ್ಲಿವೆ. ಲಭ್ಯವಿರುವುದನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಗಡಿಪ್ರದೇಶಗಳ ಸ್ಥಿತಿಗತಿಗಳ ಕುರಿತು ಅಧ್ಯಯನ ನಡೆಸಲು ನಾಲ್ಕು ಸಮಿತಿಗಳನ್ನು ಕ್ರಮವಾಗಿ ರಚಿಸಲಾಗಿತ್ತು ಮತ್ತು ವರದಿಗಳನ್ನು ಪಡೆಯಲಾಗಿತ್ತು. ಅವುಗಳೆಂದರೆ; ಗಡಿನಾಡು ಸಮಿತಿಯನ್ನು ಡಾ. ಡಿ.ಎಂ. ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸಮಿತಿ 2000ನೇ ಸಾಲಿನಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತ್ತು. ಗಡಿನಾಡ ಅಧ್ಯಯನ ಮಧ್ಯಂತರ ವರದಿಗಾಗಿ ಶ್ರೀ ವಾಟಾಳ್ ನಾಗರಾಜ್ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದು. ತದನಂತರ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷರಾಗಿರುವ ಗಡಿನಾಡ ಅಧ್ಯಯನ ಸಮಿತಿಯನ್ನು ರಚಿಸಿದ್ದು, ಸಮಿತಿ ಸಾವಿರ ಪುಟಕ್ಕೂ ಮಿಕ್ಕಿ ಬಹು ವಿವರವಾದ ವರದಿಯನ್ನು 2002ರಲ್ಲಿ ಸಲ್ಲಿಸಿತ್ತು. 2006ರಲ್ಲಿ ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ಗಡಿ ಕನ್ನಡಿಗರ ವ್ಯಥೆಕತೆಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಅವುಗಳ ಆಧಾರದ ಮೇಲೆ ಗಡಿ ಪ್ರದೇಶಗಳಲ್ಲಿ ಸೌಕರ್ಯ ಅಭಿವೃದ್ಧಿ, ಕನ್ನಡ ಶಾಲೆಗಳ ಸ್ಥಾಪನೆ ಮತ್ತು ಸುಧಾರಣೆ, ಉನ್ನತ ಶಿಕ್ಷಣಕ್ಕೆ ಕಾಲೇಜುಗಳು, ವೃತ್ತಿ ತರಬೇತಿ ಸಂಸ್ಥೆ, ವಸತಿ ಶಾಲೆಗಳು, ಕುಡಿಯುವ ನೀರು, ನೀರಾವರಿ, ಪಡಿತರ, ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿ, ಗಡಿನಾಡ ಅಭಿವೃದ್ಧಿ ಪ್ರಾಧಿಕಾರ, ಶಿಕ್ಷಣ ನಿರ್ದೇಶನಾಲಯ, ಸಾಂಸ್ಕೃತಿಕ ಚಟುವಟಿಕೆಗಳು ಆಗಬೇಕಾಗಿರುತ್ತದೆ. ಅದೇ ರೀತಿ ಇದಕ್ಕೂ ಪೂರ್ವದಲ್ಲಿ ಕರ್ನಾಟಕ ರಾಜ್ಯದ ಜಿಲ್ಲೆಗಳು ಮತ್ತು ತಾಲ್ಲೂಕುಗಳ ಪುರ್ನವಿಂಗಡಣೆಗಾಗಿ ಎಂ. ವಾಸುದೇವರಾವ್ ಆಯೋಗವು 10 ಅಂಶಗಳ ವರದಿ ಸಲ್ಲಿಸಿತ್ತು. ಇವಿಷ್ಟೇ ಅಲ್ಲದೆ ಕನ್ನಡ ನೆಲ ಜಲಕ್ಕೆ ಸಂಬಂಧಪಟ್ಟ ಇನ್ನೂ ಹತ್ತು ಹಲವು ವರದಿಗಳು ಬಂದಿವೆ. ಜಿ.ಎಸ್. ಪರಮಶಿವಯ್ಯ ವರದಿ, ಉತ್ತರ-ದಕ್ಷಿಣ ಅಭಿವೃದ್ಧಿ ಅಧ್ಯಯನ ಸಮಿತಿ ವರದಿ, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ವರದಿ, ಭಾಷಾನ್ವಯ ರಾಜ್ಯ ರಚನೆ; ಆಯೋಗಗಳ ವರದಿಗಳು, ಗಡಿ ಕನ್ನಡಿಗರ ಸಮಸ್ಯೆ ಅಧ್ಯಯನ ವರದಿ, 9 ತಾಲೂಕುಗಳ ಪುನರ್ ವಿಂಗಡಣೆ, ಸಮಿತಿ ಶಿಫಾರಸುಗಳು ಇವುಗಳಲ್ಲಿ ಮುಖ್ಯವಾದವುಗಳು. ಹಾಗೆಯೇ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಅಧ್ಯಕ್ಷರಾಗಿದ್ದ ಐದು ಜನ ಸದಸ್ಯರನ್ನೊಳಗೊಂಡ 'ಸರ್ಕಾರಿ ಶಾಲೆಗಳ ಸಬಲೀಕರಣ ಸಮಿತಿ'ಯನ್ನು ಸರ್ಕಾರ ದಿ.13.06.2016ರಲ್ಲಿ ರಚಿಸಿತು. ಈ ಸಮಿತಿಯು ದಿ.04.09.2017ರಲ್ಲಿ ಆಗ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿದ್ದ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಸದರಿ ವರದಿಯು ಸರ್ಕಾರಿ ಶಾಲೆಗಳ ಸಬಲೀಕರಣದ 21 ಶಿಫಾರಸ್ಸು ಗಳನ್ನೊಳಗೊಂಡಿತ್ತು.


ನವ್ಯಕ್ಕೆ ಅಡಿಗಲ್ಲಿಟ್ಟ ಪ್ರೊ. ಎಂ. ಗೋಪಾಲಕೃಷ್ಣ ಅಡಿಗ ಶತಮಾನೋತ್ಸವ

"ಇದು ಬಾಳು ನೋಡು, ಇದ ತಿಳಿದನೆಂದರೂ ತಿಳಿದ ಧೀರನಿಲ್ಲ"

ಅಡಿಗರ ಜೀವನದ ಮುಖ್ಯ ಘಟ್ಟಗಳು

ಜನನ : 18.02.1918
ಸ್ಥಳ : ಕುಂದಾಪುರ ತಾಲ್ಲೂಕು ಕೆರ್ಗಾಲು ಗ್ರಾಮದ ಮೊಗೇರಿ
ವಿದ್ಯಾಭ್ಯಾಸ : ಎಂ.ಎ. (ಇಂಗ್ಲಿಷ್) ನಾಗಪುರ ವಿಶ್ವವಿದ್ಯಾಲಯ 1952
ವಿವಾಹ : 08.12.1944
ಅಧ್ಯಾಪಕ ವೃತ್ತಿ : ಹೈಸ್ಕೂಲ್ ಅಧ್ಯಾಪಕ (2 ವರ್ಷ)
: ಶಾರದವಿಲಾಸ ಕಾಲೇಜು, ಮೈಸೂರು
: ಕೆನರಾ ಕಾಲೇಜು, ಕುಮಟಾ, ಇಂಗ್ಲಿಷ್ ಉಪನ್ಯಾಸಕ (6 ವರ್ಷ)
: ಸೇಂಟ್ ಫಿಲೋಮಿನಾ ಕಾಲೇಜು, ಮೈಸೂರು, (ಇಂಗ್ಲೀಷ್ ರೀಡರ್: 1954-64) (10 ವರ್ಷ)
: 'ಸಾಕ್ಷಿ' ಪತ್ರಿಕೆ ಆರಂಭ 1962, ಲಾಲ್‌ಬಹದ್ದೂರ್, ಕಾಲೇಜು, ಸಾಗರ
: ಪೂರ್ಣಪ್ರಜ್ಞ ಕಾಲೇಜು, ಉಡುಪಿ, (ಪ್ರಾಧ್ಯಾಪಕ, ಪ್ರಾಂಶುಪಾಲ) (7 ವರ್ಷ)
: ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ, ಉಪ ನಿರ್ದೇಶಕ-ಸಂಪಾದಕ, ಫೆಬ್ರವರಿ - ಜೂನ್ 1972(6 ತಿಂಗಳು)
: ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಶಿಮ್ಲಾ
ವಿಸಿಟಿಂಗ್ ಫೆಲೊ 1972-1975 (3 ವರ್ಷ)
: ಜನಸಂಘದ ಅಭ್ಯರ್ಥಿಯಾಗಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ - 1971
: ಮೊದಲ ಬಾರಿ ಅಮೆರಿಕಾ ಪ್ರವಾಸ - 1974
: ಬೆಂಗಳೂರಿನಲ್ಲಿ ನಿವೃತ್ತ ಜೀವನ - 1975-92
: ವಿಶ್ವಕವಿ ಸಮ್ಮೇಳನದಲ್ಲಿ ಭಾಗವಹಿಸಲು ಪ್ಯಾರಿಸ್, ಯುಗೋಸ್ಲಾವಿಯಾಗಳಿಗೆ ಭೇಟಿ - 1982
: ಜನಸಂಘದ ಅಭ್ಯರ್ಥಿಯಾಗಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ - 1985
: ಎರಡನೆ ಬಾರಿ ಅಮೆರಿಕಾ ಪ್ರವಾಸ - 1986
: ಪಾರ್ಶ್ವವಾಯುವಿನಿಂದ ಆರೋಗ್ಯದಲ್ಲಿ ಏರುಪೇರು - 1986
: ಮರಣ - 04.11.1995

ಮುಂದುವರಿಯುವುದು..



ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪುಸ್ತಕಗಳಲ್ಲಿ ಆತ್ಮ ಸಾಂಗತ್ಯ ಕಂಡುಕೊಂಡಿದ್ದ ಬಾಪು...

ಇದು ಸತ್ಯ ಕೂಡ. ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಧಾವಂತದಲ್ಲೆ ಬದುಕು ಸಾಗುತ್ತಿದೆ. ಅಷ್ಟೇನೂ ಕೆಲಸವಿಲ್ಲದಿದ್ದರೂ ಯಾರಿಗೂ ಪುರುಸೊತ್ತು ಸಿಗುತ್ತಿಲ್ಲ. ಎಲ್ಲರೂ ಒಂದರ್ಥದಲ್ಲಿ ಬ್ಯುಸಿ ಬ್ಯುಸಿಯೆ. ಸಮಯ ಎಲ್ಲರಿಗೂ ದುಬಾರಿಯಾಗಿದೆ. ಒಟ್ಟಾರೆ ಉತ್ಪಾದಕತೆ ಕಡಿಮೆಯಾಗುತ್ತಿದ್ದರೂ ಯಾರೂ ಸೋಮಾರಿಗಳಲ್ಲ. ಮನಸ್ಸು ಎಲ್ಲರಿಗೂ ನಿಯಂತ್ರಣದಲ್ಲಿದೆ ಎಂದು ಹೇಳಲಾಗುತ್ತಿಲ್ಲ. ಒಂದು ಬಗೆಯ ಗೊಂದಲ, ಗಲಿಬಿಲಿ, ಚಾಂಚಲ್ಯ, ಅಸಹನೆ ಬಹುತೇಕರಲ್ಲಿ ಮನೆ ಮಾಡಿದೆ. ಸತ್ಯ ಹೇಳಬೇಕೆಂದರೆ ಇಂತಹ ಸಂದರ್ಭಗಳಲ್ಲೆ ಮನುಷ್ಯನಿಗೆ ಪುಸ್ತಕಗಳ ಅವಶ್ಯಕತೆ ಕಡ್ಡಾಯವಾಗಿ ಇರುವುದು. ಆದರೆ ಪುಸ್ತಕಗಳು ಎಲ್ಲರಿಂದ ದೂರವಾಗುತ್ತಿವೆ ಎನ್ನುವುದು ಸರ್ವವಿದಿತ. ಅವುಗಳನ್ನು ಹಿಡಿದು ಓದುವ ಮನಸ್ಸು ಮತ್ತು ಅದಕ್ಕೆ ಬೇಕಾದ ಸಹನೆ ಬಹುಸಂಖ್ಯಾತರಲ್ಲಿ ಇಲ್ಲವಾಗಿದೆ. ಎಲ್ಲರಿಗೂ ಪುಸ್ತಕಗಳು ನೀಡುತ್ತಿದ್ದ ಜ್ಞಾನ, ಆತ್ಮ ಸಂವೇದನೆ, ಮಾನಸಿಕ ನೆಮ್ಮದಿ–ಶಾಂತಿ, ಮನಸ್ಸು ಮತ್ತು ಹೃದಯ ವೈಶಾಲ್ಯತೆ, ಆಲೋಚನೆಯಲ್ಲಿನ ವೈಚಾರಿಕತೆ, ವರ್ತನೆಯಲ್ಲಿನ ಪ್ರಬುದ್ಧತೆಗಳು ಸಿಗುತ್ತವೆ ಎನ್ನುವುದರ ಬಗೆಗಿನ ಅರಿವು ಕಾಣೆಯಾಗುತ್ತಿದೆ. ಅಥವಾ ಅವುಗಳನ್ನೆಲ್ಲಾ ಬೇರೆಲ್ಲೋ ಪಡೆದುಕೊಳ್ಳಲಾಗುತ್ತಿದೆ ಎನ್ನುವ ತಪ್ಪು ಗ್ರಹಿಕೆ ಎಲ್ಲರಲ್ಲೂ ಮನೆ ಮಾಡಿದೆ. ಅಥವಾ ಇನ್ನೂ ಮುಂದೆ ಹೋಗಿ ಅವುಗಳನ್ನೆಲ್ಲಾ ಪಡೆದುಕೊಳ್ಳಬೇಕು ಎಂಬ ಹವಣಿಕೆಯೂ ಕಡಿಮೆಯಾಗಿದೆ ಎನ್ನಬಹುದು.

ಓದು–ಬರಹ ಕಲಿತ ಯಾರೆ ಆಗಲಿ, ಓದುವ ಹವ್ಯಾಸವನ್ನು ಅಭಿವೃದ್ಧಿಪಡಿಸಿಕೊಂಡಿದ್ದೇ ಆದಲ್ಲಿ ಅವರು ಇಡಿ ವಿಶ್ವದ ಜ್ಞಾನವನ್ನು ಅರಗಿಸಿಕೊಳ್ಳುತ್ತಾರೆ ಎಂಬ ಮಾತು ಸಾರ್ವತ್ರಿಕವಾಗಿತ್ತು. ಜ್ಞಾನಾರ್ಜನೆ ಮಾತ್ರವಲ್ಲದೆ ಯಾವುದೇ ಮಕ್ಕಳ ಅಥವಾ ವಯಸ್ಕರ ಸಕಾರಾತ್ಮಕ ಮತ್ತು ಪರಿಣಾಮಕಾರಿ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ಪುಸ್ತಕಗಳು ಬಹುಮುಖ್ಯ ಪಾತ್ರ ವಹಿಸುತ್ತವೆ ಎನ್ನುವ ಅಭಿಪ್ರಾಯವೂ ಕೂಡ ಸಾರ್ವಕಾಲಿಕವಾದುದ್ದು. ಪರಿಪೂರ್ಣ ವ್ಯಕ್ತಿತ್ವವನ್ನು ಸಾಧಿಸಬೇಕೆಂದರೆ ಪುಸ್ತಕಗಳನ್ನು ಓದಬೇಕು, ಅನುಭವಿಸಲು ಸಾಧ್ಯವಿಲ್ಲದ ಅಥವಾ ಅನುಭವಕ್ಕೆ ಬಾರದ ಯಾವುದೆ ಒಂದನ್ನು ಮನಸ್ಸಿಗೆ ತಂದುಕೊಳ್ಳಬೇಕೆಂದರೆ ಅಥವಾ ಅದರ ಮಿತಿ–ಪರಿಮಿತಿಗಳನ್ನು ಅರ್ಥೈಸಿಕೊಳ್ಳಬೇಕೆಂದರೆ ಓದಿನ ಅಗತ್ಯತೆ ಅತ್ಯಾವಶ್ಯಕ. ಈ ವಿಚಾರವನ್ನು ಚರ್ಚೆ ಮಾಡುವಾಗ ಬರಹಗಾರ ಪೂರ್ಣಚಂದ್ರ ತೇಜಸ್ವಿಯವರ ಮಾತು, "ಬೆಲೆಕಟ್ಟಲಾಗದ ಅಕ್ಷಯನಿಧಿ ನನಗೆ ಅನುಭವಗಳ ಮುಖಾಂತರ, ಅದಕ್ಕಿಂತ ನೂರ್ಮಡಿಯಾಗಿ ಪುಸ್ತಕಗಳ ಮುಖಾಂತರ ದೊರೆಯಿತು. ದೂರ ದೇಶಗಳ ಬಗ್ಗೆ, ಅಗಾಧ ವಿಶ್ವದ ಬಗ್ಗೆ, ಚಿತ್ರ ವಿಚಿತ್ರ ಸಂಸ್ಕೃತಿಗಳ ಮತ್ತು ಜನಗಳ ಬಗ್ಗೆ ಅಸದೃಶ ಸಾಹಸಗಳ ಬಗ್ಗೆ, ಮಹಾ ಸಂಶೋಧನೆಗಳ ಬಗ್ಗೆ ನಾವಾಗಿಯೇ ಅದರಲ್ಲಿ ತೊಡಗುವುದಕ್ಕಿಂತ ಆರಾಮಾಗಿ ಕುಳಿತು ಓದುವುದು ಬಹಳ ಕಡಿಮೆ ಖರ್ಚಿನ ನಿರಾಯಾಸವಾದ ಕೆಲಸ. ಆದರೆ ನಮ್ಮ ದೇಶದ ಬಡತನದಿಂದಾಗಿ ಅದೂ ಕೂಡ ದುಬಾರಿಯಾಗಿ ಕೈಗೆಟುಕದಂತಾಗಿದೆ" ಎಂಬ ನುಡಿ ಆಪ್ತವೆನಿಸುತ್ತದೆ.

ಮುಂದುವರಿಯುವುದು..

9ನೇ ಪುಟದಿಂದ ಮುಂದುವರಿದಿದೆ.

ಬ್ರಾಹ್ಮಣ ಸಮುದಾಯದವರೇ ಹೆಚ್ಚಾಗಿ ವಾಸಿಸುತ್ತಿದ್ದ ಶ್ರೀ ಭಿಡೆ ಅವರ ಮನೆಯ ಒಂದು ಕೊಠಡಿಯಲ್ಲಿ ಅವರೆಲ್ಲರ ಸಹಕಾರದಿಂದ ಶಾಲೆ ಆರಂಭಿಸಿದರು. ಇದನ್ನು 28–11.1851ರ "ಬಾಂಬೆ ಗಾರ್ಡಿಯನ್" ಪತ್ರಿಕೆಯಲ್ಲಿ ವಿಶೇಷ ಅಂಕಣದಲ್ಲಿ ಪ್ರಕಟಿಸಿತ್ತು. ಆ ಶಾಲೆಗೆ ಸಾವಿತ್ರಿ ಪುಲೆಯೇ ಅಧ್ಯಾಪಕಿಯಾಗಿ ಸೇವೆ ಆರಂಭಿಸಿದರು. ಬಹುಜನರ ವಿರೋಧದ ನಡುವೆ ಶಾಲೆಯನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದ ಸಾವಿತ್ರಿ ಪುಲೆ ಅವರೇ ಭಾರತದ 'ಮೊದಲ ಮಹಿಳಾ ಅಧ್ಯಾಪಕಿ'ಯೆಂಬ ಮಾನ್ಯತೆ ಅಂದು ದೊರಕದಿದ್ದರೂ ಇಂದು ಆ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಆದರೆ ಬಹು ಜನರ ನಿಂದನೆಯ ಮಾತನ್ನು ಆಲಿಸಿದ ತಂದೆ ಗೋವಿಂದರಾವ್ ಅವರು ದಂಪತಿಗಳಿಗೆ ಶಾಲೆಯನ್ನು ಮುಚ್ಚಲು ಒತ್ತಾಯ ಪಡಿಸಿದರು. ಆದರೆ ಅವರ ಮಾತನ್ನು ಪಾಲಿಸಲು ಪುಲೆ ದಂಪತಿಗಳು ಸಿದ್ಧರಿರಲಿಲ್ಲ. ಇದರಿಂದ ಕುಪಿತರಾದ ಅವರು ದಂಪತಿಗಳಿಗೆ "ನಿಮಗೆ ಮನೆಯ ಬಾಗಿಲು ಮುಚ್ಚಿದೆ' ಎಂದರು. ಇಬ್ಬರೂ ಯಾವ ಮಾತನ್ನು ಆಡದೆ ಮನೆ ಬಿಟ್ಟು ಹೊರಟರು. ಪುಲೆ ಅವರು ಮಹಿಳೆಯರಿಗೋಸ್ಕರ 14 ಶಾಲೆಗಳನ್ನು ಸ್ಥಾಪನೆ ಮಾಡಿದ್ದರು. ಈ ಎಲ್ಲಾ ಸಾಧನೆಗಳನ್ನು ಪರಿಗಣಿಸಿ ಬ್ರಿಟಿಷ್ ಸರಕಾರ ಇವರಿಗೆ "ಇಂಡಿಯಾಸ್ ಫಸ್ಟ್ ಲೇಡಿ ಟೀಚರ್" ಎಂದು ಬಿರುದು ಕೂಡ ಕೊಟ್ಟಿದೆ. ಸ್ತ್ರೀಯರು ಕೂಡ ಪುರುಷರಂತೆ ಶಿಕ್ಷಣವನ್ನು ಪಡೆಯಬೇಕೆಂಬ ಮಹದಾಸೆಯಿಂದ ತಮಗೊದಗಿದ ಕಷ್ಟ – ಕಾರ್ಪಣ್ಯಗಳನ್ನು ಲೆಕ್ಕಿಸದೇ ಸ್ತ್ರಿ ಸಂಕುಲಕ್ಕೆ ಶೈಕ್ಷಣಿಕ ರಹದಾರಿಯನ್ನು ತೋರಿಸಿದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧಿ ಮತ್ತು ದಲಿತರ ದೇವಸ್ಥಾನ ಪ್ರವೇಶ

– ವೇಮಗಲ್ ಸೋಮಶೇಖರ್.


(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅದೇ ದಿನ ಸಂಜೆ ವಾರ್ಧಾದಲ್ಲಿ ಭಾಷಣ ಮಾಡುತ್ತಾ "ಭೌಗೋಳಿಕ ದೃಷ್ಟಿಯಿಂದ ಭಾರತದ ಕೇಂದ್ರದಂತಿರುವ ವಾರ್ಧಾದಿಂದ ನನ್ನ ಈ ಹರಿಜನಯಾತ್ರೆ ಆರಂಭವಾಗುವುದು ಒಂದು ಸುಯೋಗ. ಇದು ಈ ಅಂದೋಲನದ ಕೇಂದ್ರವಾಗಬೇಕೆಂಬುದೂ ನನ್ನ ಆಶಯ. ಜಮನಾಲಾಲ್‌ಜೀ ಯಾವ ಉದ್ದೇಶದಿಂದ ತಮ್ಮ ದೇವಾಲಯವನ್ನು ಹರಿಜನರ ಪ್ರವೇಶಕ್ಕೆ ತೆರೆದಿಟ್ಟರೋ ಮತ್ತು ವಿನೋಬಾ ಹಾಗೂ ಅವರ ಸಂಗಾತಿಗಳು ಹರಿಜನರೊಂದಿಗೆ ತಮ್ಮ ಭವಿಷ್ಯವನ್ನೇ ಧಾರೆ ಎರೆದಿರುವರೋ ಆ ಭಾವ ಸಮಗ್ರ ದೇಶದಲ್ಲಿ ಹರಡುವುದೆಂದು ನಾನು ನಂಬಿದ್ದೇನೆ." ಎಂದರು. ನವಂಬರ್ ಎಂಟು ಮತ್ತು ಒಂಬತ್ತರಂದು ಎರಡು ದಿವಸ ಗಾಂಧೀಜಿ ನಾಗಪುರದಲ್ಲಿ ಕಳೆದರು. ಪ್ರಥಮ ದಿವಸ ಭಾಷಣ ಮಾಡಿದ ಸಭೆಯು ಹಿಂದೆಂದೂ ಕಾಣದಿದ್ದಷ್ಟು ದೊಡ್ಡದಾಗಿತ್ತು. ಸುಮಾರು 30 ಸಾವಿರ ಜನ ಸೇರಿದ್ದರು. ಅವರು ಅನೇಕ ಹರಿಜನ ಸಂಸ್ಥೆಗಳಿಗೆ ಭೇಟಿಯಿತ್ತರು. ಹರಿಜನ ಮಹಿಳಾ ಆಶ್ರಮವೊಂದನ್ನು ಪ್ರಾರಂಭಿಸಿದರು. ಎರಡು ಬಾವಿಗಳನ್ನು ಹರಿಜನರ ಬಳಕೆಗೆ ಬಿಡಿಸಿ ಕೊಡಿಸಿದರು. ಬಿಡುವಿಲ್ಲದ ಕಾರ್ಯದಿಂದಾಗಿ ಆಹಾರ ಸೇವನೆಗೂ ವಿಶ್ರಾಂತಿಗೂ ಅವರಿಗೆ ಬಿಡುವಿಲ್ಲವಾಗಿತ್ತು. ನಗರದಲ್ಲಿಯೂ ಮತ್ತು ಸುತ್ತಲಿನ ಗ್ರಾಮಗಳಲ್ಲಿಯೂ ಹಲವಾರು ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಗಾಂಧೀಜಿ ತೆರೆದ ಫೋರ್ಡ್ ಕಾರ್‌ನಲ್ಲಿ ಸ್ಥಳಕ್ಕೆ ಧಾವಿಸುತ್ತಿದ್ದರು. ಅದರಲ್ಲಿ ಅವರ ವಿಶ್ರಾಂತಿಗೆಂದು ಹಲಗೆಯ ಮೇಲೆ ಹಾಸಿಗೆಯೊಂದನ್ನು ಹಾಸಿದ್ದರು. ಎಲ್ಲ ಕಡೆಯಲ್ಲೂ ಸಹಸ್ರಾರು ಮಂದಿ ನೆರೆಯುತ್ತಿದ್ದರು. ಸವರ್ಣೀಯರು ಮತ್ತು ಅಸ್ಪೃಶ್ಯರು ಜೊತೆಯಾಗಿಯೇ ಕುಳಿತುಕೊಳ್ಳುತ್ತಿದ್ದರು. ಸ್ತ್ರೀಯರೂ ಅಧಿಕಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಈ ಯಾತ್ರೆಯ ಸಮಯದಲ್ಲಿ ಗಾಂಧೀಜಿ ಪತ್ನಿಯನ್ನು ಮರೆತಿರಲಿಲ್ಲ. ಪ್ರತಿ ವಾರ ಕಸ್ತೂರಬಾಗೆ ಪತ್ರ ಬರೆದು ಯೋಗಕ್ಷೇಮವನ್ನು ತಿಳಿಸುತ್ತಿದ್ದರಲ್ಲದೆ, ಬಾ ಮತ್ತು ಮಕ್ಕಳು–ಸೊಸೆಯಂದಿರು ಮತ್ತು ಮೊಮ್ಮಕ್ಕಳ ಯೋಗ ಕ್ಷೇಮದ ಸುದ್ದಿಗಳನ್ನು ಪತ್ರಗಳ ಮುಖೇನ ಪಡೆಯುತ್ತಿದ್ದರು. ಎಲ್ಲ ಕಡೆಯಲ್ಲೂ ಗಾಂಧೀಜಿ ಹರಿಜನರ ಅಭಿವೃದ್ಧಿಗಾಗಿ ನಿಧಿ ಕೂಡಿಸಿದರು. ಹರಿಜನ ಕೇರಿಗಳಿಗೆ ಭೇಟಿ ಕೊಡುತ್ತಿದ್ದರು. ಹರಿಜನರಿಗೆ ದೇವಾಲಯ ಪ್ರವೇಶ ದೊರಕಿಸಿಕೊಟ್ಟರು. ಹೋದೆಡೆಗಳಲ್ಲಿ ಜನ ಬಿನ್ನವತ್ತಳೆ ಅರ್ಪಿಸಲು ಮುಂದಾದಾಗ ಬಿನ್ನವತ್ತಳೆಯಲ್ಲಿ ಆ ಸ್ಥಳದ ಸ್ಥಿತಿಗಳನ್ನು ಬಿಂಬಿಸುವಂತೆ ಒತ್ತಾಯಪಡಿಸುತ್ತಿದ್ದರು. ಈ ಮಧ್ಯೆ ನಿಯತಕಾಲಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದರು. ಹೀಗೆ ಹನ್ನೆರಡು ಸಾವಿರದ ಐದುನೂರು ಮೈಲಿ ದೂರವನ್ನು ಒಂಬತ್ತು ತಿಂಗಳುಗಳ ಕಾಲ ಈ ಹರಿಜನ ಯಾತ್ರೆಯಲ್ಲಿ ಎಂಟು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದರು ಮತ್ತು ಏನಿಲ್ಲವೆಂದರೂ ಹತ್ತು ಕೋಟಿ ಜನರಿಗೆ ಅಸ್ಪೃಶ್ಯತೆ ನಿವಾರಣೆ ಕುರಿತು ತಿಳಿಹೇಳಿದ್ದರು. ಕೋಟ್ಯಾಂತರ ದಲಿತರಿಗೆ ನೈತಿಕ ಧೈರ್ಯ ಮತ್ತು ಆಶ್ವಾಸನೆ ನೀಡಿದ್ದರು. ಕೊಟ್ಯಾಂತರ ಸವರ್ಣ ಹಿಂದೂಗಳ ಹೃದಯ ಪರಿವರ್ತನೆಯಾಯಿತು. ನೂರಾರು ವರ್ಷಗಳ ಹಳೆಯ ಪರಂಪರೆ ಬೇರು ಸಹಿತ ಅಲ್ಲಾಡಿತು. ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿದ ಈ ಹರಿಜನಯಾತ್ರೆ ಬನಾರಸ್‌ನಲ್ಲಿ 1934ರ ಜುಲೈ 29ರಂದು ಮುಕ್ತಾಯಗೊಂಡಿತು. ಯಾತ್ರೆ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದಕ್ಕೆ ದೇಶಾದ್ಯಂತ ಆ ದಿನವನ್ನು ಧನ್ಯತಾ ದಿನವನ್ನಾಗಿ ಆಚರಿಸಲಾಯಿತು.

ಸಾದರ ಸ್ವೀಕಾರ

	BOOK TITLE	PUBLICATION	AUTHOR
1.	Gandhi a very short introduction	Oxford University press - 1997	Biku Parek
2.	Gandhi's Khadi a history of contalitions & contention	Oriental Languages-2008	Rahul Ramagundam
3.	The Moral & political thought of Mahatma Gandhi	Oxford Unviersity press 2000	Raghavan Iyer
4.	Cambridge Companian to Gandhi	Cambridge University press-2011	Judith Brown & Antony Parel
5.	Gandhi's Religion: A Homespun Shawl	Oxford Unviersity press-1998	J.T.F. Jordans
6.	Essential Writing of Mahatma Gandhi	Oxford Unviersity press -1998	Raghavan Iyer
7.	The impossible Indian Gandhi and the Temptation of violence	Harward University-2012	Faisal Devji
8.	The Doctor and the Saint caste Race and Anhilation of caste the debate between B.R. Ambedkar & M.K. Gandhi	Shikago Henmarket book-2017	Arundhathi Roy
9.	Gandhi against caste	Oxford Unviersity press -2017	Nishikant - Kolge
10.	Clothing Gandhi's Nation: Homespun and Modern India	Indiana University press 2007	Sa Thrivedi

Collection by Naveenkumar



ದ ಮಹಾತ್ಮ ರಿಟರ್ನ್ಸ್ : ಯುವ ಶಕ್ತಿಗೆ ಗಾಂಧಿಯನ್ನು ಪರಿಚಯಿಸುವ ಶ್ರೇಷ್ಠ ಕಿರುಚಿತ್ರ

– ಪ್ರೊ. ಎಂ. ಚಂದ್ರಶೇಖರಯ್ಯ

ಪೂಜಾ ಶಕುನ್ ಎಂಬ ವಿಶ್ವ ಹಿಂದೂ ಪರಿಷತ್‌ನ ಮಹಿಳೆ "ಗಾಂಧಿಯನ್ನು ಕೊಂದು ರಕ್ತಹರಿಸುವ ವಿಡಿಯೋ"ವೊಂದನ್ನು ದೇಶದಾದ್ಯಂತ ಹರಿದಾಡಿಸಿದರೂ ತಣ್ಣಗಿರುವ ಯುವ ಜನಾಂಗವನ್ನು ಚಿಂತನೆಗೆ ಹಚ್ಚುವ ಅತ್ಯುತ್ತಮ ಕಿರುಚಿತ್ರವೇ 'ದ ಮಹಾತ್ಮ ರಿಟರ್ನ್ಸ್'. ಇದನ್ನು ಡಾ. ರಶ್ಮಿ ಜೇತಾ ಅವರು ನಿರ್ದೇಶಿಸಿದ್ದಾರೆ. 2019ರ ಈ ಚಿತ್ರ ಮಿಯಾಮಿ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ, ಏಷಿಯಾ ಚಲನ ಚಿತ್ರೋತ್ಸವ, ಜೈಪುರ ಅಂತರ ರಾಷ್ಟ್ರೀಯ ಚಿತ್ರೋತ್ಸವ (2019)ರಲ್ಲಿ ಪ್ರದರ್ಶನಗೊಂಡ 20 ನಿಮಿಷಗಳ ಕಿರುಚಿತ್ರವಾಗಿದೆ. ಡಾ. ರಶ್ಮಿ ಜೇತಾರಿಗೆ ಮಹಾತ್ಮ ಇನ್ನೂ ಸತ್ತಿಲ್ಲ, ಜೀವಂತವಾಗಿದ್ದಾರೆಂದು ನಿರೂಪಿಸುವುದೇ ಉದ್ಧೇಶವಾಗಿತ್ತು. ಪ್ರಶಾಂತ್ ಜಡಿಯಾ–ಗಾಂಧಿ ಪಾತ್ರಧಾರಿ, ಮನೀಷ್ ಸೋನಿ – ನಿರೂಪಕ, ನೋಡುಗರನ್ನು ಗಂಭೀರ ಚಿಂತನೆಗೆ ಹಚ್ಚುವಂತೆ ಅಭಿನಯಿಸಿದ್ದಾರೆ. ಗಾಂಧಿ, ನಿರೂಪಕ, ತರುಣ–ತರುಣಿಯರ ಗುಂಪು–ಇವು ಚರ್ಚಿಸುವ, ವಿವರಿಸುವ ಘಟನಾವಳಿಗಳನ್ನು ರಶ್ಮಿ ಜೇತಾ ಸೂಕ್ಷ್ಮವಾಗಿ ಜೋಡಿಸಿ ಗಾಂಧಿಯನ್ನು ಅರ್ಥೈಸಿಕೊಳ್ಳುವಲ್ಲಿ ತಪ್ಪು ಗ್ರಹಿಕೆಗಳಿದ್ದ ಯುವಪಡೆ ಕೊನೆಗೆ ಗಾಂಧಿಯ ಸಮಜಾಯಿಷಿ ಉತ್ತರಗಳಿಗೆ ಸೋತು ಕಣ್ಣೀರು ಮಿಡಿಯುವಂತೆ, ಚಿತ್ರ ಅಪೂರ್ವ ಯಶಸ್ಸು ಸಾಧಿಸುತ್ತದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದ ಯುವಪಡೆ ಕಣ್ಣು ತೆರೆದು "ಮಹಾತ್ಮ ಗಾಂಧಿ" ಎಂದು ಅಚ್ಚರಿಗೊಳ್ಳುತ್ತದೆ. ಗಾಂಧೀಜಿ ಅವರು ಗುಂಪು ತನಗೆ ಮಹಾತ್ಮ ಎಂದು ಪ್ರಯೋಗಿಸಿದ ಪದ ನಿರಾಕರಿಸಿ ತಾನು 'ಗಾಂಧಿ ಅಷ್ಟೇ' ಎನ್ನುತ್ತಾರೆ. ತನ್ನ ದಂಡ ಹಿಂಸೆಯ ಆಯುಧವಾದರೂ ಅದನ್ನು ಅಹಿಂಸೆಗೆ ತಿರುಗಿಸುವ ದಂಡ ಎನ್ನುತ್ತಾರೆ. ಈ ವೇಳೆಗೆ ನಿರೂಪಕ ಆಗಮಿಸಿ ರಾಷ್ಟ್ರವಾದಕ್ಕೆ ಜನ್ಮ ನೀಡಿದ ಗಾಂಧಿಯ ಹಿಂಸೆ–ಅಹಿಂಸೆಯ ಸೂಕ್ಷ್ಮ ಸ್ತರ ಚರ್ಚೆ ಹೇಳಿದ ಕೂಡಲೇ, ಚರ್ಚೆಯ ದಿಕ್ಕು ಬದಲಾಗುತ್ತದೆ.

ಯುವಪಡೆ ಗಾಂಧಿ ವಿರುದ್ಧ ಆಕ್ರೋಶಗೊಳ್ಳುತ್ತದೆ. ವಿರೂಪಗೊಂಡ ಚರಿತ್ರೆಯ ವಿವರಗಳಿಂದ ಅದು ಆಕ್ರಮಣ ಮಾಡುತ್ತದೆ. ದೇಶ ನಕಾರಾತ್ಮಕ ಫಸಲನ್ನು ಕೊಯ್ಯುತ್ತಿದೆ ಎನ್ನುತ್ತಾರೆ. ಚೌರಿಚೌರಾ ಹಿಂಸೆ, ಸುಭಾಷ್ ಹಿನ್ನಲೆಗೆ ಚಲಿಸಿದ್ದು, ನೆಹರು ಗಾಂಧಿ ಪರ ನಿಂತಿದ್ದನ್ನು ಪ್ರಸ್ತಾಪಿಸುತ್ತಾರೆ. ನಿರೂಪಕ, ಶಸ್ತ್ರಾಸ್ತ್ರ ಹಿಡಿದ ಬ್ರಿಟಿಷರನ್ನು, ನಿರಾಯುಧ ಗಾಂಧೀಜಿ ಎದುರಿಸಿದ ಬಗ್ಗೆ ವಿವರಿಸುತ್ತಾನೆ. ಯುವಕರ ಕೋಪಕ್ಕೆ ಗಾಂಧಿ ವಿವರಣೆ ನೀಡುತ್ತಾರೆ.

ಮುಂದುವರಿಯುವುದು....

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

– ಯ.ರು. ಪಾಟೀಲ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಈ ಪತ್ರಿಕೆಯನ್ನು ಗಾಂಧೀಜಿ ಅವರು ಕೈಗೆತ್ತಿಕೊಂಡಾಗ ಇದೇನೂ ಲಾಭಕರವಾಗಿ ನಡೆಯುತ್ತಿರಲಿಲ್ಲ. ಇದರ ಹೊಣೆಗಾರಿಕೆಯನ್ನು ಗಾಂಧೀಜಿ ಅವರು ವಹಿಸಿಕೊಂಡಾಗ ಒಟ್ಟು ಪ್ರಸಾರ ಕೇವಲ 400 ಪ್ರತಿಗಳು. ಮೊದಮೊದಲು ಇದನ್ನು ಮುನ್ನಡೆಸುವ ಸಲುವಾಗಿ ಪ್ರತಿ ತಿಂಗಳು ಹನ್ನೆರಡು ನೂರು ರೂಪಾಯಿಗಳ ಖರ್ಚು ಮಾಡುತ್ತಿದ್ದರು. ಅಂದರೆ ಈ ಪತ್ರಿಕೆಯನ್ನು ನಡೆಸುವುದಕ್ಕಾಗಿ ಒಟ್ಟು ಇಪ್ಪತ್ತಾರು ಸಾವಿರ ರೂಪಾಯಿಗಳ ಹಾನಿ ಮಾಡಿಕೊಂಡರು. ಆದಾಗ್ಯೂ ಪತ್ರಿಕೆಯಲ್ಲಿ ಜಾಹಿರಾತು ನಿಷೇಧವೆನ್ನುವ ದೃಢ ಮನಸ್ಸಿನಲ್ಲಿ ಬದಲಾವಣೆಯಾಗಲಿಲ್ಲ. ಜಾಹಿರಾತಿನ ಇದೇ ಸ್ಥಳದಲ್ಲಿ ತಮ್ಮ ಅಭಿಪ್ರಾಯ ವಿಚಾರಗಳನ್ನು ತಿಳಿಸಬಹುದು ಎನ್ನುವುದೊಂದು ಕಾರಣವಾದರೆ, ಯಾರದ್ದೇ ಪಕ್ಷ, ಪ್ರಭಾವಗಳಿಗೆ ಒಳಪಡದೆ ನಿರ್ಭೀತಿಯಿಂದ ತಮ್ಮ ವಿಚಾರಗಳನ್ನು ನಿಷ್ಪಕ್ಷಪಾತದಿಂದ ಹೇಳಬಹುದು ಎಂಬುದು ಮತ್ತೊಂದು ಕಾರಣವಾಗಿತ್ತು. ಪತ್ರಿಕೆಗಳ ಮಹತ್ವ ಮತ್ತು ವ್ಯಾಪ್ತಿಯನ್ನು ಗಾಂಧೀಜಿ ಅವರು ಅರಿತಿದ್ದರು. ಇತರೆ ಪತ್ರಿಕೆಗಳೊಂದಿಗೆ ಪೈಪೋಟಿಗೆ ಇಳಿಯಲಿಲ್ಲ, ಇನ್ನಾವುದೇ ತಂತ್ರ ಕುತಂತ್ರಗಳಿಂದ ಪತ್ರಿಕೆಯ ಬೇಡಿಕೆ ವಿಸ್ತರಿಸಲು ಯತ್ನಿಸಲಿಲ್ಲ. ಒಂದು ಪತ್ರಿಕೆಯ ಮಾರಾಟ ಏನಿದ್ದರೂ ಅದರ ಒಡಲಾಳದಲ್ಲಿರುವ ಬರಹದ ಯೋಗ್ಯತೆಯನ್ನೇ ಅವಲಂಬಿಸಿರಬೇಕು ಎನ್ನುವುದು ಅವರ ಅಚಲ ನಂಬಿಕೆಯಾಗಿತ್ತು. ಮುಖ್ಯವಾಗಿ ಪತ್ರಿಕೆಯ ಮೂಲಕ ಬ್ರಿಟೀಷರ ಹಾಗೂ ಭಾರತೀಯರ ಸೌಹಾರ್ದ ಸಂಬಂಧಗಳನ್ನು ಗಟ್ಟಿಗೊಳಿಸಲು ಯತ್ನಿಸಿದರು. ಹರಿಜನ ಪತ್ರಿಕೆಯಲ್ಲಿ ಹೊಸ ಪ್ರಯೋಗ ನಡೆಸಿದರು. ಪತ್ರಿಕೆ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬೇಕೆನ್ನುವ ಉದ್ದೇಶದಿಂದ ಹತ್ತು ಸಾವಿರ ಪ್ರತಿಗಳನ್ನು ಪ್ರಕಟಿಸಿದರು. ಅವರ ಇಚ್ಛೆಯಂತೆ ಗುಣಮಟ್ಟದ ಆಧಾರದಿಂದ ಅವು ಮಾರಾಟವಾಗುತ್ತಿದ್ದವು. ಕ್ರಮೇಣ ಈ ಪತ್ರಿಕೆ ಇಂಗ್ಲೀಷ್, ಹಿಂದಿ, ಕನ್ನಡ, ಉರ್ದು, ತಮಿಳು, ತೆಲುಗು, ಒರಿಯಾ, ಮರಾಠಿ, ಗುಜರಾತಿ ಮತ್ತು ಬಂಗಾಳಿ ಭಾಷೆಗಳಲ್ಲಿ ಪ್ರಕಟವಾದವು ಇಂಗ್ಲೀಷ್, ಹಿಂದಿ, ಗುಜರಾತಿ ಮತ್ತು ಉರ್ದು ಭಾಷೆಗಳಲ್ಲಿ ಸ್ವತಃ ಗಾಂಧೀಜಿ ಅವರು ಬರೆಯುತ್ತಿದ್ದರು. ಇನ್ನುಳಿದಂತೆ ಅನುವಾದವಾಗುತ್ತಿದ್ದವು. ಗಾಂಧೀಜಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ "ಸತ್ಯಾಗ್ರಹಿ" ಕೈಬರಹ ಪತ್ರಿಕೆಯಾಗಿದ್ದು, ಇದು 1919ರಲ್ಲಿ ಮುಂಬೈ ಲೇಬರ್‌ನಮ್ ರಸ್ತೆಯ, ಗಾಂವ್ ದೇವಿ ಇಲ್ಲಿಂದ ಪ್ರಕಟವಾಗುತ್ತಿತ್ತು. ಅದರ ಬೆಲೆ ಆಗ ಕೇವಲ ಒಂದು ಪೈಸೆ ಮಾತ್ರ. ಪ್ರತಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಪ್ರಕಟವಾಗುತ್ತಿದ್ದು ಈಗ ಗಾಂಧೀ ಸ್ಮಾರಕವೆಂದು ಪ್ರಸಿದ್ಧಿಯಾಗಿರುವ ಮಣಿ ಭವನ ಕಟ್ಟಡ ಗಾಂಧೀಜಿ ಅವರು ಆಗ ಮುಂಬೈಗೆ ಬಂದಾಗ ವಾಸ್ತವ್ಯ ಹೂಡುತ್ತಿದ್ದುದಾಗಿತ್ತು.

ಮುಂದುವರಿಯುವುದು....

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ


ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ವಿಶ್ವದಾದ್ಯಂತ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿ ವರ್ಷ ಮಾರ್ಚ್ 8 ರಂದು ಆಚರಿಸಲಾಗುತ್ತಿದೆ. 1975–85ನ್ನು ಮಹಿಳಾ ದಶಕವೆಂದು ಆಚರಿಸಿದ್ದೇವೆ. ಹಾಗೆಯೇ 2011ರಲ್ಲಿ ಶತಮಾನದ ಮಹಿಳಾ ದಿನಾಚರಣೆಯ ಸಂಭ್ರಮವನ್ನು ಹಂಚಿಕೊಂಡಿದ್ದೇವೆ. ಮೊದಮೊದಲು "ಮಹಿಳಾ ದಿನಾಚರಣೆ"ಯನ್ನು ಲೇವಡಿ, ವ್ಯಂಗ್ಯ ಮತ್ತು ಹಾಸ್ಯಸ್ಪದವಾಗಿ ಕಾಣುತ್ತಿದ್ದರು. 1975ರಲ್ಲಿ ವಿಶ್ವಸಂಸ್ಥೆಯ ಅಧಿಕೃತವಾಗಿ ಅಂತರ ರಾಷ್ಟೀಯ ಮಹಿಳಾ ವರ್ಷವನ್ನು ಘೋಷಣೆ ಮಾಡಿದಾಗ ಜಗತ್ತಿನ ರಾಷ್ಟ್ರಗಳು ಮಾನ್ಯತೆ ನೀಡಿದಾಗ, ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕಾರ್ಯಕ್ರಮ ಆಯೋಜನೆ, ಮಹಿಳಾ ಸಾಧಕಿಯರಿಗೆ ಗೌರವ ಜೀವನ ಚಿತ್ರಣ ಅನಾವರಣ ಇನ್ನೂ ಮುಂತಾದ ಮಹಿಳಾ ಪ್ರಧಾನ ಕಾರ್ಯಗಳು ಆಯೋಜನೆಗೊಳ್ಳಲಾರಂಭಿಸಿದವು.

ಜಗತ್ತಿನ ಮಹಿಳಾ ಸಮುದಾಯಕ್ಕೆ ಘನತೆಯನ್ನು ದೊರಕಿಸಲು ಮಾಡಿದಂಥ ಪ್ರಯತ್ನಗಳೇನು? ಹಿನ್ನಲೆ ಏನು? ಅದರ ಹಿಂದೆ ದುಡಿದ ಮಹನೀಯರು, ಮಾನಿನಿಯರು ಯಾರು? ಸಾಗಿ ಬಂದ ದಾರಿ ಹೇಗಿದೆ? ಅದರ ಇತಿಹಾಸವೇನು? ಎಂಬ ಅವಲೋಕನವೇ ಮಹಿಳಾ ಪ್ರಜ್ಞೆಯನ್ನು ಅಂತರಾತ್ಮದಲ್ಲಿ ಒಡಮೂಡಿಸಿಕೊಳ್ಳಲು ಸಹಾಯಕವಾಗುತ್ತದೆ.

ಮಹಿಳೆಯರ ಘನತೆಯ ಬದುಕಿಗೆ ಇತಿಹಾಸ ಸೃಷ್ಟಿಸಿದ ವಿಶ್ವ ವ್ಯಾಪಕತೆಯನ್ನು ತಂದು ಕೊಟ್ಟ ಎಲ್ಲಾ ಹೋರಾಟಗಾರರು, ಗಣ್ಯರು, ತಜ್ಞರು, ನೇತಾರರು ಮತ್ತು ಚಿಂತಕರನ್ನು ಈ ಸಂದರ್ಭದಲ್ಲಿ ಸ್ಮರಿಸೋಣ. ವಿಶ್ವಮಟ್ಟದಲ್ಲಿ ಮಹಿಳಾ ದಿನಾಚರಣೆ ಅನುಷ್ಠಾನಗೊಳಿಸಲು ಅಪಾರವಾಗಿ ಶ್ರಮಿಸಿದ "ಕ್ಲಾರಜೆಟ್ಕಿನ್", ರೋಸಾ ಲಕ್ಷಂಬರ್ಗ್ (ಜರ್ಮನಿ), ಎಮ್ಮಾಪ್ಯಾಟರ್‌ಸನ್ (ಬ್ರಿಟನ್) ಆಗಸ್ಟ್ ಶ್ಮಿಟ್ (ಜರ್ಮನಿ) ಲಾರ ಲಫಾರ್ಗ್ (ಕಾರ್ಲ್ ಮಾರ್ಕ್ಸ್ ಮಗಳು), ಲೂಯಿಸ್‌ಸೆಟ್ಜ್, ಒಟಲಿ ಬಾಡರ್, ಪ್ರಾರಜ್ ಮೇರಿಂಗ್ ಮತ್ತು ಅವರೊಂದಿಗೆ ಕೈ ಜೋಡಿಸಿದ, ಎಲ್ಲಾ ಕ್ರಾಂತಿಕಾರಿಗಳು ಸ್ವಾತಂತ್ರ್ಯ ಹೋರಾಟಗಾರರು ನಡೆದು ಬಂದ ಹಾದಿಯೆಡೆಗೆ ಕಿರುನೋಟ ಹರಿಸೋಣ.

ಉತ್ತರ ಅಮೇರಿಕಾದಲ್ಲಿ ಜವುಳಿ ವ್ಯಾಪಾರ, ಬಟ್ಟೆ ಹೊಲಿಯುವ ವ್ಯವಹಾರ, ಮುಂಚೂಣಿ ಉದ್ಯಮವಾಗಿತ್ತು. ಅಂದಿನ ಈ ಉದ್ದಿಮೆಯಲ್ಲಿನ ವಾತಾವರಣ, ಮಹಿಳಾ




ಕಾರ್ಮಿಕರನ್ನು ಅನೇಕ ದೈಹಿಕ, ಮಾನಸಿಕ, ಭೌತಿಕ ತೊಂದರೆಗಳಿಗೆ ಮತ್ತು ಸಂಕಷ್ಟಗಳಿಗೆ ದೂಡಿತ್ತು. ಕಲುಷಿತ ವಾತಾವರಣದಲ್ಲಿ ನಿರಂತರ ದುಡಿಮೆ, ಹತ್ತಿ ಧೂಳಿನಲ್ಲಿ ಕೆಲಸ, ಅವಧಿ ಮೀರಿದ ದುಡಿಮೆ, ಶೌಚಾಲಯವಿಲ್ಲದಿರುವುದು, 15 ವರ್ಷದೊಳಗಿನ ಬಾಲೆಯರಿಂದ ಶ್ರಮದ ಕೆಲಸಗಳು, ಅಗ್ನಿ ದುರಂತಗಳು, ಸಾವುಗಳು, ಸುಟ್ಟ ಗಾಯಗಳು, ಕಾಯಿಲೆಗಳು, ಪರಿಹಾರವಿಲ್ಲದಿರುವುದು, ಕಾರ್ಮಿಕರಿಂದಲೇ ದಂಡ ವಸೂಲಿ ಮತ್ತು ವೇತನ ತಾರತಮ್ಯದಂಥಹ ಅನೇಕ ಅಸಮಾನತೆಯ ದುಡಿಮೆಯ ವಾತಾವರಣದಿಂದ ನೊಂದುಬೆಂದ ಮಹಿಳೆಯರು1820ರಲ್ಲಿ ಮ್ಯಾಸೆಚುಸೆಟ್ಸ್‌ನಲ್ಲಿ ಮುಷ್ಕರ ಹೂಡಿದರು. 1833ರಲ್ಲಿ ಇಂಗ್ಲೆಂಡಿನ ಡರ್ಬಿ ಸಿಲ್ಕ್, ಪ್ಯಾಕ್ಟರಿಯ 2000 ಮಹಿಳಾ ಕಾರ್ಮಿಕರು ಸೇರಿ ಸಂಘಟನೆಯೊಂದನ್ನು ಮಾಡಿದರು. ಇದರಿಂದಾಗಿ ಕಾರ್ಖಾನೆಯ ಮಾಲೀಕರು, ಸುಧಾರಣೆ ಮಾರ್ಗವನ್ನು ತೆಗೆದುಕೊಳ್ಳಲೇ ಬೇಕಾಯಿತು. ಈ ಎಲ್ಲ ಬೆಳವಣಿಗೆಗಳಿಂದಾಗಿ, ಮಹಿಳೆಯರು ದುಡಿಮೆಯ ಅವಧಿಯನ್ನು ಕಡಿತಗೊಳಿಸುವುದು; ದಿನವೊಂದಕ್ಕೆ 10–12 ಗಂಟೆ ಕೆಲಸವನ್ನು ಪುರುಷ ಕಾರ್ಮಿಕರಿಗಿರುವಂತೆ 7–8 ಗಂಟೆಗಳ ಕೆಲಸ ಅವಧಿಯಾಗಿಸಿದರು. ಆದರೆ ಕಡಿಮೆ ಕೆಲಸದ ಅವಧಿಗೆ ಕಡಿಮೆ ಸಂಬಳವೆಂಬ ಹುನ್ನಾರವನ್ನು ಹೆಣೆದರು. ಹುಸಿನೆಪಗಳಿಂದ ಸಂಬಳದಲ್ಲಿ ಇನ್ನೂ ಕಡಿತ ಮಾಡಲಾರಂಭಿಸಿದರು. ಅದೇ ವೇಳೆಯಲ್ಲಿ ಪುರುಷ ಕಾರ್ಮಿಕರ ಎಂದಿನಂತೆ 7–8 ಗಂಟೆಗಳ ಕೆಲಸದ ಅವಧಿಗೆ ಸಮಾನ ವೇತನ ಮುಂದುವರೆದೇ ಇತ್ತು. ಇದರಿಂದಾಗಿ ಕಡಿಮೆ ಅವಧಿಗೆ ಕಡಿಮೆ ವೇತನದ ಅಸಮಾನ ವೇತನಪದ್ಧತಿಯನ್ನು ಮಹಿಳಾ ಕಾರ್ಮಿಕರು ಒಪ್ಪಿಕೊಳ್ಳುವ ಸಂದಿಗ್ಧತೆಯನ್ನು ನಿರ್ಮಾಣ ಮಾಡಲಾಯಿತು.

ಭಾರತದ ಸ್ಯಾಟಲೈಟ್ ಮ್ಯಾನ್ ಬಾಹ್ಯಾಕಾಶ ವಿಜ್ಞಾನಿ ಯು.ಆರ್.ರಾವ್ : (10.03.1932–24.07.2017)

– ಸತ್ಯಮಂಗಲ ಮಹದೇವ

ಯು.ಆರ್. ರಾವ್ ಅವರು 1932 ರಲ್ಲಿ ಉಡುಪಿ ಜಿಲ್ಲೆಯ ಹಳ್ಳಿಯೊಂದರಲ್ಲಿ ಜನಿಸಿದರು. ಭೌತಶಾಸ್ತ್ರಜ್ಞರಾಗಿ ತಮ್ಮ ವೃತ್ತಿಜೀವನ ಪ್ರಾರಂಭಿಸಿದರು. ಭಾರತದ ಬಾಹ್ಯಾಕಾಶ ಕಾರ್ಯಕ್ರಮದ ಪಿತಾಮಹ ಎಂದು ಪ್ರಖ್ಯಾತರಾದ ಇವರು ಅಮೆರಿಕಾದಲ್ಲಿಯೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು ಮತ್ತು ನಾಸಾದ ಪ್ರವರ್ತಕ ಮತ್ತು ಎಕ್ಸ್‌ಪ್ಲೋರರ್ ಬಾಹ್ಯಾಕಾಶ ಶೋಧಕಗಳಲ್ಲಿ ಪ್ರಯೋಗಗಳನ್ನು ನಡೆಸಿದರು. 1966ರಲ್ಲಿ ಭಾರತಕ್ಕೆ ಮರಳಿದ ಪ್ರೊ. ರಾವ್ ಅವರು 1972 ರಲ್ಲಿ ಭಾರತದ ಉಪಗ್ರಹ ಕಾರ್ಯಕ್ರಮವನ್ನು ಮುನ್ನಡೆಸುವ ಮೊದಲು ಬಾಹ್ಯಾಕಾಶ ವಿಜ್ಞಾನಕ್ಕಾಗಿ ಭಾರತದ ಪ್ರಮುಖ ಸಂಸ್ಥೆಯಾದ ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿಯಲ್ಲಿ ಉನ್ನತ–ಶಕ್ತಿಯ ಖಗೋಳವಿಜ್ಞಾನ ಕಾರ್ಯವನ್ನು ಪ್ರಾರಂಭಿಸಿದರು. 1984 ರಿಂದ 1994 ರವರೆಗೆ ಪ್ರೊ. ರಾವ್ ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 2013ರಲ್ಲಿ ಪಿಎಸ್‌ಎಲ್‌ವಿ ಭಾರತದ ಮೊದಲ ಅನ್ಯಗ್ರಹ ಮಿಷನ್ ಮಂಗಳಯಾನ ಪ್ರಾರಂಭಿಸಿತು. ಡಾ. ಯು.ಆರ್. ರಾವ್ ಅವರನ್ನು ಭಾರತದ ಸ್ಯಾಟಲೈಟ್ ಮ್ಯಾನ್ ಎಂದೇ ಪ್ರಖ್ಯಾತರು. ಭಾರತೀಯ ಬಾಹ್ಯಾಕಾಶ ವಿಜ್ಞಾನಿ ಮತ್ತು ಇಸ್ರೋ ಅಧ್ಯಕ್ಷರಾಗಿದ್ದ ರಾವ್ ಅವರು 1975ರಲ್ಲಿ ಭಾರತದ ಮೊದಲ ಉಪಗ್ರಹ – 'ಆರ್ಯಭಟ' ಉಡಾವಣೆಯ ಮೇಲ್ವಿಚಾರಣೆ ಹೊಣೆ ಹೊತ್ತಿದ್ದರು. ಯು.ಆರ್. ರಾಮಚಂದ್ರರಾವ್ ಅವರ 89ನೇ ಹುಟ್ಟುಹಬ್ಬದ ಪ್ರಯುಕ್ತ ಡೂಡಲ್ ರಚಿಸುವ ಮೂಲಕ ಗೂಗಲ್ ಅವರನ್ನು ಗೌರವಿಸಿದೆ.





ಕನ್ನಡ... ಕನ್ನಡಿಗ... ಕರ್ನಾಟಕ

ಸಂಗೀತ ವಿದ್ವನ್ಮಣಿ : ಗಂಗೂಬಾಯಿ ಹಾನಗಲ್ : (1913ರ ಮಾರ್ಚ್, 5–2009ರ ಜುಲೈ, 21)

– ಮಹೇಶ್

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.



ತಂದೆ ಚಿಕ್ಕೂರಾವ್ ನಾಡಗೀರ, ತಾಯಿ ಅಂಬಾಬಾಯಿ ದಂಪತಿಗಳಿಗೆ ಗಂಗೂಬಾಯಿ ಹಾನಗಲ್ ಅವರು ಮಗಳಾಗಿ ಜನಿಸಿದರು. 'ಗಂಗೂಬಾಯಿ ಹಾನಗಲ್, ಎರಡುಬಾರಿ ಹೆಸರನ್ನು ಬದಲಾಯಿಸಿಕೊಂಡರು. ಮೂಲ ಹೆಸರು, 'ಗಾಂಧಾರಿ ಹಾನಗಲ್,' ಎಂದಿತ್ತು. ಸಂಗೀತವಲಯದಲ್ಲಿ ಪ್ರಸಿದ್ಧರಾದಂತೆ, ಅವರ ಪರಿಚಯ 'ಗಂಗೂಬಾಯಿ ಹುಬ್ಳೀಕರ,' ಎಂದಾಯಿತು. ಗಂಗೂಬಾಯಿಯವರು ಧಾರವಾಡದ ಆಲೂರು ವೆಂಕಟರಾಯರು ಸ್ಥಾಪಿಸಿದ ರಾಷ್ಟ್ರೀಯ ಶಾಲೆಯಲ್ಲಿ ಐದನೆಯ ತರಗತಿವರೆಗೆ ಓದಿದರು. 1924ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ, ಗಂಗೂಬಾಯಿಯವರು ಮಹಾತ್ಮಾ ಗಾಂಧೀಜಿ ಅವರೆದುರಿಗೆ "ಸ್ವಾಗತವು ಸ್ವಾಗತವು ಸಕಲ ಜನ ಸಂಕುಲಕೆ" ಎಂದು ಸ್ವಾಗತಗೀತೆಯನ್ನು ಹಾಡಿ ಗಾಂಧೀಜಿ ಅವರ ಹಾಗೂ ಸಭಿಕರ ಮೆಚ್ಚುಗೆ ಗಳಿಸಿದ್ದರು. ಸಂಗೀತಯಾತ್ರೆ ಉತ್ಸಾಹದಿಂದಲೇ ಸಾಗಿತಾದರೂ, ಜೀವನಯಾತ್ರೆಯಲ್ಲಿ ಅನೇಕ ಎಡರು ತೊಡರುಗಳು ಎದುರಾದವು. ಗಂಗೂಬಾಯಿಯವರು ಸಂಗೀತ ಕಚೇರಿಗಳನ್ನು ಮಾಡುತ್ತಾ ಭಾರತದ ಉದ್ದಗಲದಲ್ಲೆಲ್ಲ ಸುತ್ತಿದ್ದಾರೆ. ಎಲ್ಲೆಡೆಗೂ ಶ್ರೋತೃಗಳ ಮನಸ್ಸನ್ನು ಗೆದ್ದಿದ್ದಾರೆ. ಅಲ್ಲದೆ 1958ರಲ್ಲಿ ನೇಪಾಳ,1961ರಲ್ಲಿ ಪಾಕಿಸ್ತಾನ, 1979ರಲ್ಲಿ ಅಮೇರಿಕಾ ಮತ್ತು ಕೆನಡಾ ಹಾಗು 1984ರಲ್ಲಿ ಜರ್ಮನಿ ಮತ್ತು ಫ್ರಾನ್ಸ್ ದೇಶಗಳಿಗೂ ಪ್ರಯಾಣಿಸಿ ಭಾರತೀಯ ಸಂಗೀತದ ಸವಿಯನ್ನು ಉಣಬಡಿಸಿದ್ದಾರೆ.ಗುರುಗಳಾದ ಸವಾಯಿ ಗಂಧರ್ವರ ಹೆಸರಿನಲ್ಲಿ ಕುಂದಗೋಳದಲ್ಲಿ ಪ್ರತಿವರ್ಷ "ಸಂಗೀತೋತ್ಸವ" ನಡೆಸುತ್ತಿದ್ದರು. ಇವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಡಾಕ್ಟರೇಟ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ದೆಹಲಿ ವಿಶ್ವವಿದ್ಯಾಲಯದ ಡಾಕ್ಟರೇಟ್, ಗುಲಬರ್ಗಾ ವಿಶ್ವವಿದ್ಯಾಲಯದ ಡಾಕ್ಟರೇಟ್ ಹಾಗೂ ಪ್ರಯಾಗ ಸಂಗೀತ ಸಮಿತಿಯ ಗಂಧರ್ವ ಮಹಾವಿದ್ಯಾಲಯದ ಮಹಾಮಹೋಪಾಧ್ಯಾಯ ಪದವಿಗಳಿಂದ ಪುರಸ್ಕೃತರಾಗಿದ್ದಾರೆ.

ರುಕ್ಮಿಣಿದೇವಿ ಅರುಂಡೇಲ್ : (29.02.1904–24.02.1986)

ಪ್ರೊ. ಲೀಲಾ ವಾಸುದೇವ್

ಭರತನ 'ನಾಟ್ಯಶಾಸ್ತ್ರ' ಅತ್ಯಂತ ಪ್ರಾಚೀನವಾದದ್ದು. ಇದು ಲಲಿತಕಲೆಗಳ ಒಂದು ವಿಶ್ವಕೋಶದಂತಿದೆ. ಭರತನ ನಾಟ್ಯಶಾಸ್ತ್ರದಲ್ಲಿ 108 ನಾಟ್ಯ ವಿಧಿಗಳು ವಿವರಿಸಲ್ಪಟ್ಟಿದೆ. ಇದು ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಿದೆ. ಇದು ಕೇವಲ ಮನೋರಂಜನೆಯ ಮಾಧ್ಯಮವಲ್ಲ. ಧರ್ಮ ಮತ್ತು ದರ್ಶನಗಳು ಭಾರತೀಯ ನೃತ್ಯ ಕಲೆಯಲ್ಲಿ ಹಾಸುಹೊಕ್ಕಾಗಿವೆ. ಅಭಿನಯ, ವೇಷ ಭೂಷಣ, ಮಾತು, ಸಂಗೀತ, ಹಸ್ತ ಮುದ್ರಿಕೆಗಳು ಸೇರಿದ ಈ ನಾಟ್ಯ ಪ್ರಕಾರ ವಿಶಿಷ್ಟವಾದುದ್ದಾಗಿದೆ. ಈ ನಾಟ್ಯ ಪ್ರಕಾರದಲ್ಲಿ "ಬ್ಯಾಲೆ' ಎಂಬ ನೂತನ ನೃತ್ಯ ವಿಧಾನಗಳನ್ನು ಸೇರಿಸಿ ಜಗದ್ವಿಖ್ಯಾತಗೊಳಿಸಿದವರು ರುಕ್ಮಿಣಿದೇವಿ ಅರುಂಡೇಲ್ ಅವರಾಗಿದ್ದಾರೆ. ಮಧುರೆಯ ನಿವಾಸಿಗಳಾಗಿದ್ದ ನೀಲಕಂಠ ಶಾಸ್ತ್ರಿ ಮತ್ತು ಸೀತಮ್ಮಾಳ್ ಅವರ ಸುಪುತ್ರಿಯೇ ರುಕ್ಮಿಣೀದೇವಿ. ತಾಯಿಗೆ ಸಂಗೀತದ ಒಲವು, ತಂದೆ ದೊಡ್ಡ ವಿದ್ವಾಂಸರು ಹಾಗೂ ಇಂಜಿನಿಯರ್. ಇವರು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಇವರನ್ನು ಅವರ ಮಿತ್ರಬಳಗ 1901ರಲ್ಲಿ ಥಿಯೊಸೊಫಿಕಲ್ ಸೊಸೈಟಿಗೆ ಪರಿಚಯಿಸಿದರು. ಇವರು ಆ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಅವಿರತವಾಗಿ ತೊಡಗಿಸಿಕೊಂಡರು. ನಿವೃತ್ತಿಯ ನಂತರ ಚನ್ನೈ ಥಿಯೊಸಾಫಿಕಲ್ ಸೊಸೈಟಿ ಅಡಿಯಾರ್‌ಗೆ ಸ್ಥಳಾಂತರಗೊಂಡರು. ರುಕ್ಮಿಣಿದೇವಿ ಅವರು ತಂದೆಯ ಜೊತೆಯಲ್ಲಿಯೇ ಥಿಯೊಸಾಫಿಕಲ್ ಸೊಸೈಟಿಯ ಚಟುವಟಿಕೆಗಳಲ್ಲಿ ಬಾಲ್ಯದಿಂದಲೇ ಭಾಗಿಯಾಗುತ್ತಲೇ ಸಾಗಿದರು. ಅಲ್ಲಿ ಸಂಸ್ಕೃತಿ, ರಂಗಕಲೆ, ಸಂಗೀತ ಮತ್ತು ನೃತ್ಯಕಲೆಗಳ ಗಾಢ ಪ್ರಭಾವಕ್ಕೊಳಗಾದರು. ಹಾಗಾಗಿ ಥಿಯೊಸಾಫಿಕಲ್ ಸೊಸೈಟಿಯ ಡಾ. ಜಾರ್ಜ್ ಅರುಂಡೇಲ್ ಮತ್ತು ಅವರ ಆಪ್ತ ಸಹಚರರಾಗಿದ್ದ ಅನಿಬೆಸೆಂಟ್ ಅವರ ಜೊತೆ ನಿಕಟ ಸಂಪರ್ಕ ಬೆಳೆಯಿತು. ಅರುಂಡೇಲ್ ಅವರು ವಾರಣಾಸಿಯ ಸೆಂಟ್ರಲ್ ಹಿಂದೂ ಕಾಲೇಜಿನ ಪ್ರಾಂಶುಪಾಲರಾದ ನಂತರ ಇಬ್ಬರ ಸ್ನೇಹ ಗಾಢವಾಯಿತು. ಅದು ಪ್ರೀತಿ–ಪ್ರೇಮದಕಡೆಗೆ ಮುಂದುವರೆದಿತ್ತು. ಹದಿನಾರರ ಹರಯದ ರುಕ್ಮಿಣಿದೇವಿ ನಲವತ್ತೆರಡರ ಬ್ರಿಟನ್‌ನ ಡಾ. ಜಾರ್ಜ್ ಅರುಂಡೇಲ್ ಅವರನ್ನು 1920ರಲ್ಲಿ ವಿವಾಹವಾದರು. ವಿವಾಹದ



ನಂತರ ಅರುಂಡೇಲ್ ದಂಪತಿಗಳು ಪ್ರಪಂಚ ಪರ್ಯಟನೆ ಮಾಡಿದರು. ಶಿಕ್ಷಣ ತಜ್ಞರಾದ ಮರಿಯಾ ಮಾಂಟಿಸ್ಸರಿ ಮತ್ತು ಕವಿ ಜೇಮ್ಸ್ ಕಸಿನ್ಸ್ ಅವರನ್ನು ಭೇಟಿಮಾಡಿ ಸ್ನೇಹ ಬೆಳಸಿಕೊಂಡರು. ರುಕ್ಮಿಣಿದೇವಿ ಅರುಂಡೇಲ್ ಅವರು 1923ರಲ್ಲಿ ಯುವ ಬ್ರಹ್ಮವಿದ್ಯಾವಾದಿಗಳ ಅಖಿಲ ಭಾರತ ಒಕ್ಕೂಟದ ಅಧ್ಯಕ್ಷರಾಗಿದ್ದರು. 1928ರಲ್ಲಿ ಅಖಿಲ ವಿಶ್ವ ಒಕ್ಕೂಟದ ಅಧ್ಯಕ್ಷರಾಗಿದ್ದರು. ಅರುಂಡೇಲ್ ದಂಪತಿಗಳು ಬಾಂಬೆ ಪ್ರವಾಸದಲ್ಲಿ ರಷ್ಯಾದ ಪ್ರಸಿದ್ಧ 'ಬ್ಯಾಲೆ ನರ್ತಕಿ' ಅನ್ನಾ ಪಾವಲೋವ ಅವರ ಪ್ರದರ್ಶನವನ್ನು ವೀಕ್ಷಿಸಿದರು. ಮುಂದಿನ ಪ್ರದರ್ಶನಕ್ಕಾಗಿ ಅನ್ನ ಪಾವಲೋವ ಆಸ್ಟ್ರೇಲಿಯಾಗೆ ಪ್ರಯಾಣ ಮಾಡುತ್ತಿದ್ದುದರಿಂದ ಮತ್ತೆ ಅವರೀರ್ವರ ಭೇಟಿಯ ಸಂದರ್ಭ ಒದಗಿಬಂದಿತ್ತು. 'ಬ್ಯಾಲೆ' ನೃತ್ಯಪ್ರಕಾರದಲ್ಲಿ ಆಸಕ್ತರಾದ ರುಕ್ಮಿಣಿದೇವಿ ಅವರು ತಕ್ಷಣವೇ ಅನ್ನ ಪಾವಲೋವ ಅವರ ಪ್ರಮುಖ ಶಿಷ್ಯರೊಬ್ಬರಿಂದ ನೃತ್ಯ ಕಲಿಯಲು ಪ್ರಾರಂಭಮಾಡಿದರು. ಅನ್ನಾ ಪಾವಲೋವ ಅವರ ಅಣತಿಯ ಮೇರೆಗೆ ರುಕ್ಮಿಣಿದೇವಿ ಭಾರತೀಯ ನೃತ್ಯ ರೂಪಕಗಳನ್ನು ಹೊರತರುವ ಕಾರ್ಯಕ್ಕೆ ತೊಡಗಿಸಿಕೊಂಡರು. ಭಾರತದಲ್ಲಿ 'ಬ್ಯಾಲೆ'ಯನ್ನು ಆರಂಭಿಸಿ ಅದಕ್ಕೆ ಅಂತರ ರಾಷ್ಟ್ರೀಯ ಮಾನ್ಯತೆ ಮತ್ತು ಪ್ರಖ್ಯಾತಿಯನ್ನು ತಂದವರು ರುಕ್ಮಿಣಿದೇವಿ ಅವರಾಗಿದ್ದಾರೆ. ಅರುಂಡೇಲ್ ಭಾರತೀಯ ಕಥಾವಸ್ತುವುಳ್ಳ ಬ್ಯಾಲೆಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ಭಾರತದ ಮಹಾಕಾವ್ಯವಾದ ರಾಮಾಯಣದಿಂದ ಆಯ್ದ ಆರು ಪ್ರಸಂಗಗಳ ಇವರ ಬ್ಯಾಲೆ ಸರಣಿಗಳು ಸುವಿಖ್ಯಾತವಾಗಿವೆ

ಕನಕದಾಸರು (1508 – 1606)

– ಪ್ರೊ. ಬಿ. ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನಕದಾಸರ ಕೀರ್ತನೆಗಳು

ಅವರ ಗೀತೆಗಳಲ್ಲಿ ಪರಿಪಕ್ವವಾದ ಪ್ರಪಂಚಾನುಭವ ಉತ್ತಮ ವಿವೇಕ ಕಂಡುಬರುತ್ತದೆ. ಸಮಾಜ ವಿಮರ್ಶೆ ಮತ್ತು ಜನಜೀವನಕ್ಕೆ ಮೀಸಲಾದ ಎಷ್ಟೋ ಕೀರ್ತನೆಗಳಲ್ಲಿ ಕನಕದಾಸರು ಸಮಾಜದ ಕುಂದುಕೊರತೆಗಳನ್ನು ಮುಚ್ಚುಮರೆ ಇಲ್ಲದೆ ನುಡಿದಿದ್ದಾರೆ. ಕನಕದಾಸರ ಕಳಕಳಿ ನೈಜ, ಮಾತು–ಹರಿತ, ನಿರೀಕ್ಷಣೆ ತೀವ್ರ ಎಂಬುದು ಅವರ ಕೀರ್ತನೆಗಳನ್ನು ಓದಿದ ಯಾರಿಗಾದರೂ ಮನದಟ್ಟಾಗದಿರದು. ಕುಲದ ವಿಚಾರದಲ್ಲಿ ಅವರ ಮಾತು ತೀವ್ರ ಹರಿತವಾಗಿದೆ. "ಕುಲ ಕುಲ ಕುಲವೆನ್ನುತಿಹರು। ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ". ಕುಲಕ್ಕೆ "ಮಗನಿಂದ ಮಾತ್ರವೇ ಗತಿ" ಎಂಬಲ್ಲಿಯೂ ಅವರ ಮಾತು ಖಂಡಿತವಾಗಿದೆ.

ಮಗನಿಂದ ಮುಕ್ತಿಯುಂಟೆ ಜಗದೊಳು
ನಿಗಮಾಂತಸಾರ ಮುಕ್ತಿಯಲ್ಲದೆಲ
ತ್ರಿಗುಣ ರಹಿತ ಪರಮಾತ್ಮನ ಧ್ಯಾನದಿ
ಹಗಲಿರುಳು ನಿತ್ಯಾನಂದದಿ
ತೆಗೆದ ಪ್ರಪಂಚ ವಾಸನೆಯ ಸುಟ್ಟವರಿಗೆ
ಮಗನಿದ್ದರೇನು ಇಲ್ಲದಿದ್ದರೇನು

"ಮೋಹನ ತರಂಗಿಣಿಯಲ್ಲಿ ವಿಜಯನಗರ ಕಾಲದ ಸುಖ ಸಂತೋಷಗಳ ಚಿತ್ರ ಹೆಚ್ಚಾಗಿದ್ದರೆ, ಕೀರ್ತನೆಗಳಲ್ಲಿ ಲೋಪದೋಷಗಳ ಚಿತ್ರವಿದೆ" – ರಂ.ಶ್ರೀ. ಅವರು ನುಡಿದಿದ್ದಾರೆ. ಹಲವು ದೈವದ ಹುಚ್ಚು, ಅವಕ್ಕೆ ಸಂಬಂಧಿಸಿದ ಮೂಢ ಆಚರಣೆಗಳು, ಪ್ರಾಣಿ ಬಲಿ ಪದ್ಧತಿ ಇವೆಲ್ಲ ಕನಕದಾಸರ ವಿಡಂಬನೆಗೆ ಗುರಿಯಾಗಿವೆ.

ಅಂತರಂಗದ ಆಳವನ್ನೂ, ಭಕ್ತಿ ನಿರ್ಭರತೆಯನ್ನೂ ತಿಳಿಸುವ ಕೀರ್ತನೆಗಳು ಕನ್ನಡ ನಾಡಿನ ಅಪೂರ್ವವಾದ ಭಾವಗೀತೆಗಳಾಗಿವೆ. ಕನಕದಾಸರ "ತನು ನಿನ್ನದು, ಜೀವನ ನಿನ್ನದು", "ತಲ್ಲಣಿಸದಿರು ಕಂಡ್ಯಾ ತಾಳು ಮನವೆ", "ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ", "ನಿನ್ನಿಂದ ನಾ ಜನಿಸಿ ಬಂದೆನೇ" ಈ ಗೀತೆಗಳು ಭಾವಗೀತೆ ಹಾಗೂ ಭಕ್ತಿಯ ಸಾಮರಸ್ಯದ ಕುರುಹುಗಳಾಗಿವೆ. ಅಲ್ಲದೆ ಕೃಷ್ಣ ಗೋಪಿಯರನ್ನು ಕುರಿತಾದ ಕೀರ್ತನೆಗಳು ವರ್ಣನೆ, ಶೈಲಿ, ನಾದ ಇವುಗಳಿಂದ ಮುಪ್ಪುರಿಗೊಂಡಿವೆ.


"ಪಂಚೇಂದ್ರಿಯಗಳೆಂಬ ಮಂಚಿಗೆಯ ಹಾಕಿರಯ್ಯ, ಚಂಚಲವೆಂಬ ಹಕ್ಕಿಯನ್ನು ಓಡಿಸಿರಯ್ಯ, ಉದಯ ಅಸ್ತಮಾನವೆಂಬ ಎರಡು ಕೊಳಗವ ಮಾಡಿ ಆಯುಷ್ಯದ ರಾಶಿಯನ್ನು ಅಳೆಯಿರಯ್ಯ" ಎಂಬ ಕೀರ್ತನೆಯಲ್ಲಿ ಕಲ್ಪಕತೆ, "ಬೊಂಬೆಯಾಟವನಾಡಿಸಿದೆ ಮಹಾಭಾರತದ" ಎಂಬ ಕೀರ್ತನೆಯಲ್ಲಿರುವ ಸಮಗ್ರ ರೂಪಕ, "ಹಲವು ಜನುಮದಿ ತಾಯಿ ಎನಗಿತ್ತ ಮೊಲೆ ಹಾಲು ನಲಿದುಂಬಾಗಿ ಹನಿ ನೆಲಕ್ಕೆ ಬಿದ್ದುದು ಕೂಡಿ ಅಳೆಯೆ ಕ್ಷೀರವೆಂಬುಧಿಗೆ ಇಮ್ಮಿಗಿಲೋ" ಎಂಬ ಭವ್ಯ ಕಲ್ಪನೆಗಳಲ್ಲಿ ಕನಕದಾಸರ ನವನೋದಯ ಪ್ರತಿಭೆಯನ್ನು ಕಾಣಬಹುದು. ಹೀಗೆಂದ ಮಾತ್ರಕ್ಕೆ ಕನಕದಾಸರ ಎಲ್ಲ ಕೀರ್ತನೆಗಳು ಉತ್ಕೃಷ್ಟವೆಂದಲ್ಲ. ಪುರಂದರದಾಸರು ಮುಂತಾದವರಲ್ಲಿ ಕಂಡಂತೆಯೇ ಇವರಲ್ಲಿಯೂ ಸಾಮಾನ್ಯ ಎಂಬಂಥ ಕೀರ್ತನೆಗಳಿವೆ. ಆದರೂ ಅವರ ವಾಣಿಯಲ್ಲಿ ಸಹಜ ದೇಸಿಯ ಸವಿತಿರುಳು ಮೈಗೊಂಡಿವೆ. ಅವರು ಮಹಾಭಕ್ತನಾದಂತೆ ಮಹಾಕವಿಯ ಸತ್ವ ಉಳ್ಳವನು, ಅವನ ಜೀವನವೇ ಮಹಾಕೃತಿಯಾಗಿತ್ತು. ಅವನ ಕೃತಿಗಳಲ್ಲಿಯೂ ಮಹೋನ್ನತಿ ಬೆಳಗಿದೆ. ಪುರಂದರದಾಸರಂತೆ ಅಥವ ಅವರಿಗಿಂತಲೂ ವಿಭಿನ್ನರಾಗಿ ಕನಕದಾಸರು ಮತ್ತು ಅವರ ಜೀವನ ಸಾಹಿತ್ಯಗಳಲ್ಲಿಯ ಸಿದ್ಧಿಯಿಂದ ಕನ್ನಡಿಗರ ಚಿರಂತನವಾದ ಸಂಸ್ಕೃತಿ ಪ್ರದೀಪಗಳಲ್ಲಿ ಒಂದಾಗಿದ್ದಾರೆ.

ನುಡಿನಮನ : ಡಾ. ಎನ್.ಎಸ್. ಲಕ್ಷ್ಮಿ ನಾರಾಯಣ ಭಟ್ಟ (29.10.1929 – 06.03.2021)

– ಮಹೇಶ್



ಕನ್ನಡ ಸಾಹಿತ್ಯ ಲೋಕದ ಸರಳ ಸಜ್ಜನ, ಸಾಹಿತಿ 'ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರಾಗಿದ್ದಾರೆ. ಸಾಹಿತ್ಯ ವಿಮರ್ಶೆ, ಅನುವಾದ, ಕಾವ್ಯ, ಮಕ್ಕಳ ಗೀತೆಗಳು, ನಾಟಕ, ಜೀವನ ಚರಿತ್ರೆ ಹೀಗೆ ಕನ್ನಡ ಭಾಷಾ ಕ್ಷೇತ್ರವನ್ನು ವಿಸ್ತರಿಸಿದ್ದಾರೆ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ 'ಎಂ.ಎ. ಆನರ್ಸ್ ಪದವಿ', ನಂತರ 'ತೀನಂಶ್ರೀ' ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡರು. ಬೆಂಗಳೂರು ವಿಶ್ವವಿಧ್ಯಾಲಯದಲ್ಲಿ 'ಅಧ್ಯಾಪಕ', 'ರೀಡರ್', 'ಪ್ರಾಧ್ಯಾಪಕ', 'ನಿರ್ದೇಶಕ'ರಾಗಿ ಸೇವೆ ಸಲ್ಲಿಸಿದ್ದಾರೆ. 'ಆಧುನಿಕ ಕನ್ನಡ ಕಾವ್ಯ' ಕುರಿತಾದ ಪ್ರಬಂಧಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ 'ಪಿಎಚ್.ಡಿ' ದೊರೆತಿದೆ. 'ತೀನಂಶ್ರೀ', 'ಸಿಡಿಎಸ್', 'ಡಿಎಲ್‌ನ್', 'ಶ್ರೀಕಂಠ ಶಾಸ್ತ್ರಿ' ಮೊದಲಾದ ಶ್ರೇಷ್ಠ ಆಚಾರ್ಯರ ಚಿಂತನಾಧಾರೆಯಿಂದ ಪ್ರಭಾವಿತರಾಗಿದ್ದ ಶ್ರೀಯುತರು 'ಹಳಗನ್ನಡ ಕಾವ್ಯ'ಗಳನ್ನು 'ನವೀನ ಸಾಹಿತ್ಯ'ದೊಂದಿಗೆ ಹೆಣೆದರು. 'ಶಿಶುಸಾಹಿತ್ಯ' ಅವರಿಗೆ ಬಹು–ಪ್ರಿಯವಾದ ಪ್ರಕಾರಗಳಲ್ಲಿ ಒಂದು. ಜಗನ್ನಾಥ ವಿಜಯ, ಮುದ್ರಾಮಂಜೂಷ ಕಾವ್ಯಗಳನ್ನು ಮಕ್ಕಳಿಗಾಗಿ ಬರೆದರು. 'ಕನ್ನಡ ಮಾತು' ಮತ್ತು ಕನ್ನಡ ಸಾಹಿತ್ಯ ಚರಿತ್ರೆ ಎಂಬ ಅಪೂರ್ವ ಸಂಪುಟವನ್ನು ರಚಿಸಿದರು. 'ಭಾರತೀಯ ಗ್ರಂಥ ಸಂಪಾದನಾ ಪರಿಚಯ'ವೆಂಬ ಅನುವಾದ ಗ್ರಂಥ ಇಂದಿಗೂ ಗ್ರಂಥಾಲಯ ಸಂಶೋಧಕರಿಗೆ ಉಪಯುಕ್ತವಾದ ಹೊತ್ತಿಗೆಯಾಗಿದೆ. ಭಟ್ಟರು 'ಶೇಕ್ಸ್ ಪಿಯರ್', 'ಎಲಿಯಟ್' ಕವಿಗಳ ಕೃತಿಗಳನ್ನು ಕನ್ನಡೀಕರಿಸಿದ್ದಾರೆ. ಇವರಿಗೆ 'ಶಿವರಾಮ ಕಾರಂತ ಪ್ರಶಸ್ತಿ', 'ರಾಜ್ಯೋತ್ಸವ ಪ್ರಶಸ್ತಿ', 'ಮಾಸ್ತಿ ಪ್ರಶಸ್ತಿ', 'ವರ್ಧಮಾನ ಪ್ರಶಸ್ತಿ' ಇನ್ನೂ ಮುಂತಾದ ಪ್ರಶಸ್ತಿ ಗೌರವಗಳು ಸಂದಿವೆ.




ಹೆಮ್ಮೆಯ ಕನ್ನಡಿಗ : ನ್ಯಾಯಮೂರ್ತಿ ರಾಮಾಜೋಯಿಸ್

(27.07.1931 – 16.02.2021)

– ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ



ನ್ಯಾಯಮೂರ್ತಿ, ರಾಜ್ಯಪಾಲ, ಮತ್ತು ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ ಶ್ರೀ ರಾಮಾ ಜೋಯಿಸ್ ಅವರು ವೇದ, ಉಪನಿಷತ್, ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ವಿಜ್ಞಾನೇಶ್ವರನ ಮಿತಾಕ್ಷರದಲ್ಲಿ ಭಾರತೀಯ ನ್ಯಾಯ ಪದ್ಧತಿಯ ವಿವರಗಳಿವೆ ಎಂದು ಜಗತ್ತಿಗೆ ತೋರಿಸಿಕೊಟ್ಟವರಾಗಿದ್ದಾರೆ. ನಮ್ಮ ಕಾನೂನು ಶಿಕ್ಷಣದಲ್ಲಿ ರೋಮನ್ ಕಾಲದ ಕಾನೂನು ಪದ್ಧತಿಯನ್ನು ಮಾತ್ರ ಹೇಳಿಕೊಡಲಾಗುತ್ತಿದೆ. ಆದರೆ ನಮ್ಮ ಪೂರ್ವಜರು ಅನುಸರಿಸುತ್ತಿದ್ದ ನ್ಯಾಯಪದ್ಧತಿಯನ್ನು ಹೇಳಿಕೊಡುತ್ತಿಲ್ಲ. ಹಿಂದೆಯೇ ನಮ್ಮಲ್ಲಿ ಮಹಿಳೆಯರಿಗೆ ಆಸ್ತಿ ಹಕ್ಕು ನೀಡಲಾಗಿತ್ತು ಎಂದು ಪ್ರತಿಪಾದಿಸಿ ವಿಶೇಷ ಅಧ್ಯಯನ ನಡೆಯುವಂತೆ ಮಾಡಿದ್ದರು.

ಅಲ್ಲದೆ ಶಿಕ್ಷಣ ಮೂಲಭೂತ ಹಕ್ಕಾಗಬೇಕೆಂದು ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ಮುಂದೆ ವಾದಿಸಿ ಸಂವಿಧಾನಕ್ಕೆ ತಿದ್ದುಪಡಿ ಬರುವಂತೆ ಮಾಡಿದರು. ಸರ್ಕಾರದ ಆಡಳಿತದ ವಿಷಯದಲ್ಲಿ ಅವರು ಪರಿಣತಿ ಪಡೆದಿದ್ದರು. ಬೆಂಗಳೂರು ಮಹಾನಗರ ಪಾಲಿಕೆ ಸಿಬ್ಬಂದಿ ಅವರಿಗೆ ಬಡ್ತಿ ನೀಡುವ ವಿಚಾರದಲ್ಲಿ ವಿಳಂಬ ಮಾಡಿದಾಗ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ನ್ಯಾಯಾಲಯದ ಮುಂದೆ ಕೈಕಟ್ಟಿ ನಿಲ್ಲುವಂತೆ ಮಾಡಿದ್ದರು.

ನ್ಯಾಯಮೂರ್ತಿ ರಾಮಾಜೋಯಿಸ್ ಅವರು ನ್ಯಾಯಾಧೀಶರಾಗಿ, ಬರಹಗಾರರಾಗಿ, ರಾಜಕೀಯ ಮುತ್ಸದ್ಧಿಯಾಗಿ ಸಲ್ಲಿಸಿದ ಸೇವೆ ಅಪಾರ. ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವನ್ನು ಹೊಂದಿದ್ದರು. ಅವರ ಬಹುತೇಕ ತೀರ್ಪುಗಳು ಉಲ್ಲೇಖಾರ್ಹ, ಕಾನೂನು ಸಂಬಂಧಿತ ಹಲವು ಪುಸ್ತಕಗಳನ್ನು ಬರೆದಿರುವ ಅವರು, ರಾಜ್ಯಸಭಾ ಸದಸ್ಯರಾಗಿದ್ದಾಗ ಸಂಸತ್ತಿನಲ್ಲಿರುವ ಎಲ್ಲ ಸಂಸ್ಕೃತ ಶ್ಲೋಕ ಹಾಗೂ ಬರಹಗಳನ್ನು ಭಾಷಾಂತರಿಸಿ, ಆ ಶ್ಲೋಕಗಳ ಭಾವಾರ್ಥಗಳು ಜನಸಾಮಾನ್ಯರಿಗೆ ತಲುಪುವಂತೆ ಮಾಡಿ ಮೆಚ್ಚುಗೆಗೂ ಪಾತ್ರರಾಗಿದ್ದರು.

ಶಿವಮೊಗ್ಗದ ಆರಗ ಗ್ರಾಮದಲ್ಲಿ ಜನಿಸಿದ ಅವರ ಪೂರ್ಣ ಹೆಸರು ಮಂಡಗದ್ದೆ ರಾಮಾ ಜೋಯಿಸ್. ಇವರ ತಂದೆ ನರಸಿಂಹ ಜೋಯಿಸ್ ಹಾಗೂ ತಾಯಿ ಲಕ್ಷ್ಮೀದೇವೀರಮ್ಮ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನು ಪೂರೈಸಿದ್ದರು. 1959ರಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ್ದ ಅವರು, ವೆಂಕಟರಂಗ ಅಯ್ಯಂಗಾರ್ ಅವರ ಜತೆ ಕೆಲಸ ಮಾಡಿದ್ದರು. ಆ ವೇಳೆ ಹಲವು ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡಿದ್ದರು. 1975ರಲ್ಲಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದರ ವಿರುದ್ಧ ತೀವ್ರವಾಗಿ ಪ್ರತಿಭಟನೆ ನಡೆಸಿ ಜೈಲುವಾಸ ಅನುಭವಿಸಿದ್ದರು, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಮಾಜಿ ಉಪ ಪ್ರಧಾನಿ ಲಾಲ್‌ಕೃಷ್ಣ ಆಡ್ವಾಣಿ, ಮಧು ದಂಡವತೆ ಮುಂತಾದವರೊಂದಿಗೆ ತುರ್ತು ಪರಿಸ್ಥಿತಿ ಸಮಯದಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಜೈಲುವಾಸ ಅನುಭವಿಸಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಕ್ರಿಯ ಸದಸ್ಯರಾಗಿದ್ದರು. ತುರ್ತು ಪರಿಸ್ಥಿತಿ ಅಂತ್ಯಗೊಂಡು ಜೈಲಿನಿಂದ ಬಿಡುಗಡೆಯಾದ ವರ್ಷದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ತಮ್ಮ ಕರ್ತವ್ಯದ ಅವಧಿಯಲ್ಲಿ ಹಲವು ಬಾರಿ ಪದ ನಿಮಿತ್ತ ಮುಖ್ಯ ನ್ಯಾಯಮೂರ್ತಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. 1992ರ ಮೇ 3 ರಂದು ಪಂಜಾಬ್ ಹಾಗೂ ಹರ್ಯಾಣ: ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡ ಅವರು ಕೇವಲ ನಾಲ್ಕು ತಿಂಗಳಿನಲ್ಲಿ ನಿವೃತ್ತರಾದರು. ಇದಾದ ಬಳಿಕ ಹಲವು ಕಾಲೇಜುಗಳಲ್ಲಿ ಕಾನೂನು ಪಾಠ ಮಾಡುವ ಪ್ರಾಧ್ಯಾಪಕರಾಗಿ, ಸುಪ್ರೀಂ ಕೋರ್ಟ್‌ನ ನ್ಯಾಯವಾದಿಯಾಗಿ ಸೇವೆ ಸಲ್ಲಿಸಿದರು.

ಭಾರತೀಯ ಜನತಾ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಅವರು 2002ರಲ್ಲಿ ಕೇಂದ್ರ ಸರ್ಕಾರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರವಿದ್ದಾಗ ಜೋಯಿಸ್ ಅವರನ್ನು ಜಾರ್ಖಂಡ್‌ನ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗಿತ್ತು. ಅಲ್ಲಿ ಒಂದು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇದಾದ ಬಳಿಕ 2003ರಲ್ಲಿ ಬಿಹಾರದ ರಾಜ್ಯಪಾಲರಾಗಿ 2004ರ ಅಕ್ಟೋಬರ್‌ವರೆಗೆ ಸೇವೆ ಸಲ್ಲಿಸಿದರು. 2008ರಲ್ಲಿ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದ ಅವರು 2014ರಲ್ಲಿ ರಾಜ್ಯಸಭೆಯಿಂದ ನಿವೃತ್ತರಾದರು. ಈ ಅವಧಿಯಲ್ಲಿ ಸಂಸತ್ ಕಲಾಪದಲ್ಲಿ ಅವರ ಭಾಗವಹಿಸುವಿಕೆ, ಹಾಜರಾತಿ ಹಾಗೂ ಸಂಸತ್ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮೆಚ್ಚುಗೆಗೆ ಪಾತ್ರವಾಗಿದ್ದರು. 'ವಿಮಲಾ' ಅವರನ್ನು ವಿವಾಹವಾಗಿರುವ ರಾಮಜೋಯಿಸರಿಗೆ ಒಬ್ಬ ಗಂಡು ಮಗ ಹಾಗೂ ಓರ್ವ ಹೆಣ್ಣು ಮಗಳು ಇದ್ದಾರೆ. ಇಬ್ಬರೂ ಕೂಡ ಬೆಂಗಳೂರಿನಲ್ಲಿ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತುರ್ತು ಪರಿಸ್ಥಿತಿಯ ಜೈಲುವಾಸಕ್ಕೆ ಸಂಬಂಧಿಸಿ 'ಹಿಸ್ಟಾರಿಕ್ ಲೀಗಲ್ ಬ್ಯಾಟಲ್ ಆಫ್ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಶ್ಯಾಮನಂದನ್ ಮಿಶ್ರಾ, ಮಧು ದಂಡವತೆ' ಎಂಬ ಕೃತಿಯನ್ನೂ ಜೋಯಿಸ್ ಅವರು ರಚಿಸಿದ್ದಾರೆ. ಕುವೆಂಪು ವಿಶ್ವವಿದ್ಯಾಲಯವು 'ಡಾಕ್ಟರ್ ಆಫ್ ಲಾ' ಇವರಿಗೆ ಪ್ರದಾನ ಮಾಡಿ ಗೌರವಿಸಿತ್ತು.

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕಸ್ತೂರ್‌ಬಾ ಅವರು 1869ರ ಏಪ್ರಿಲ್‌ನಲ್ಲಿ ಪೋರಬಂದರಿನಲ್ಲಿ ಹುಟ್ಟಿದರು. ಆ ಕಾಲದ ಪ್ರಚಲಿತ ರೂಢಿಯಂತೆ ಅವರಿಗೆ ಬಾಲ್ಯದಲ್ಲಿ ಓದು ಬರಹ ಶಿಕ್ಷಣ ಸಿಕ್ಕಿರಲಿಲ್ಲ. ಆದರೆ ಮನೆಗೆಲಸದ ಶಿಕ್ಷಣ ಮಾತ್ರ ಚನ್ನಾಗಿ ಸಿಕ್ಕಿತ್ತು. ಮೇಲಾಗಿ ವೈಷ್ಣವ ಪರಿವಾರದ ಸುಸಂಸ್ಕಾರಗಳೂ ಅವರಿಗೆ ದೊರೆತಿದ್ದವು. ಆದರಿಂದ ಅವರಲ್ಲಿ ಸಂಕಲ್ಪ ಶಕ್ತಿ ಹಾಗೂ ಸಂಯಮಶಕ್ತಿ ವಿಕಾಸ ಹೊಂದಿದ್ದವು. ಆರನೇ ವರ್ಷದಲ್ಲಿಯೇ ಮೋಹನದಾಸ ಗಾಂಧಿ ಅವರೊಡನೆ ಅವರ ವಿವಾಹ ನಿಶ್ಚಯವಾಗಿತ್ತು. ಮತ್ತು 13ನೇ ವರ್ಷದಲ್ಲಿ ಲಗ್ನವಾಯಿತು. ವಿವಾಹಿತ ಜೀವನದ ಪ್ರಾಥಮಿಕ ವರ್ಷಗಳನ್ನು ಕುರಿತು ಗಾಂಧಿ ಅವರು ಹೀಗೆ ಬರೆದಿದ್ದಾರೆ. "ನಾನು ಕಸ್ತೂರ್‌ಬಾ ಅವರಿಗೆ ಒತ್ತಾಯದಿಂದ ಕಲಿಸ ಬಯಸುತ್ತಿದ್ದೆ. ಅದು ರಾತ್ರಿಯ ಏಕಾಂತದಲ್ಲಿ ಮಾತ್ರ ಸಾಧ್ಯವಿತ್ತು. ಮನೆಯ ಹಿರಿಯರ ಮುಂದೆ ಹೆಂಡತಿಯ ಕಡೆಗೆ ನೋಡಲಿಕ್ಕೂ ಶಕ್ಯವಿರಲಿಲ್ಲ. ಮಾತಾಡುವುದಂತೂ ದೂರವೇ ಆಗಿತ್ತು. ಮುಖದ ಮೇಲೆ ಸೆರಗನ್ನು ಹಾಕಿಕೊಳ್ಳುವ ನಿರರ್ಥಕವಾದ ಕಾಡು ಪದ್ಧತಿ ಬೇರೆ. ಹೀಗಾಗಿ ಅವಳಿಗೆ ಕಲಿಸಲಿಕ್ಕೆ ತುಂಬಾ ಅನಾನುಕೂಲವಾಗುತ್ತಿತ್ತು. ಇಷ್ಟಿದ್ದೂ ನನ್ನ ಪ್ರೇಮವು ವಿಷಯವಾಸನೆಯಿಂದ ದೂಷಿತವಾಗಿರದಿದ್ದರೆ ಇಂದು ಅವಳು ಒಬ್ಬ ವಿದುಷಿಯಾಗಿರಬಹುದಾಗಿತ್ತು.

1888ರಲ್ಲಿ ಗಾಂಧಿ ಅವರು ಇಂಗ್ಲೆಂಡಿಗೆ ಹೋದರು. ಅಷ್ಟರಲ್ಲಿ ಕಸ್ತೂರ್‌ಬಾ ಒಂದು ಗಂಡು ಮಗುವಿಗೆ ಜನ್ಮನೀಡಿದ್ದರು.




ಇಂಗ್ಲೆಂಡಿಗೆ ಹೋಗುವಾಗ ಗಾಂಧಿ ಅವರಿಗೆ ಕಸ್ತೂರ್‌ಬಾ ಸಲಹೆ ಇಲ್ಲವೆ ಸಮ್ಮತಿ ತೆಗೆದುಕೊಳ್ಳುವ ಅವಶ್ಯಕತೆಯೂ ಅನಿಸಲಿಲ್ಲ ಎಂದು ತೋರುತ್ತದೆ. ಇಂಗ್ಲೆಂಡಿನಿಂದ ತಿರುಗಿ ಬಂದ ತರುವಾಯವೂ ಸಹ ಕಸ್ತೂರ್‌ಬಾರೊಡನೆ ಗಾಂಧಿ ಅವರ ವ್ಯವಹಾರ ಪದ್ಧತಿಯಲ್ಲಿ ಏನೊಂದೂ ವ್ಯತ್ಯಾಸವಾಗಲಿಲ್ಲ. ಅವರು ಪ್ರತಿಯೊಂದು ರೀತಿಯಲ್ಲಿ ಕಸ್ತೂರ್‌ಬಾ ಅವರು ಶಿಕ್ಷಕರಾಗಲು ಪ್ರಯತ್ನಿಸುತ್ತಿದ್ದರು. ಒಮ್ಮೆಯಂತೂ ಕಸ್ತೂರ್‌ಬಾ ಓದುಬರಹ ಕಲಿಯಲಿಕ್ಕೆ ಉದಾಸೀನತೆ ಮಾಡುವುದು ಕಂಡು ಬೇಸತ್ತು ಅವರನ್ನು ತವರು ಮನೆಗೂ ಅಟ್ಟಿಬಿಟ್ಟಿದ್ದರು. ಅವರನ್ನು ತಿರುಗಿ ಕರೆಸಿಕೊಳ್ಳಬೇಕಾದರೆ ತುಂಬಾ ಕಷ್ಟವಾಯಿತು. ಗಾಂಧಿ ಅವರಿಗೆ ವಕೀಲಿ ನಡೆಸುವುದು ತುಂಬಾ ಕಷ್ಟವಾಯಿತು. ಕೊನೆಯಲ್ಲಿ ನೌಕರಿ ಹಾಗೂ ವಕೀಲಿ ಹುಡುಕುತ್ತಾ ಅವರು ದಕ್ಷಿಣ ಆಫ್ರಿಕಾಗೆ ಹೋಗಬೇಕಾಯಿತು. ಮುಂದೆ ಕಸ್ತೂರ್‌ಬಾ ಮತ್ತು ಮಕ್ಕಳನ್ನೂ ಅಲ್ಲಿಗೆ ಕರೆದೊಯ್ಯುವ ಪ್ರಸಂಗ ಬಂತು. ಆಗ ಗಾಂಧಿ ಅವರು ಕಸ್ತೂರ್‌ಬಾರಿಗೆ ಪಾರಸಿ ಜನರ ಪೋಷಾಕನ್ನು, ಕಾಲುಚೀಲ ಹಾಗೂ ಬೂಟುಗಳನ್ನು ಧರಿಸ ಹಚ್ಚಿದರು.

ಮುಂದುವರಿಯುವುದು....

ಸಂಗ್ರಹ : ವಿ.ಎನ್. ತಿಪ್ಪನಗೌಡ
ಉಪಾಧ್ಯಕ್ಷರು, ಗಾಂಧಿ ಭವನ

ಅಲೆಕ್ಸಾಂಡರ್ ಗ್ರಹಾಂ ಬೆಲ್ (ಮಾರ್ಚ್ 03.03 1847 – 02.08.1922)



ದೂರವಾಣಿಯ ಆವಿಷ್ಕಾರಕ, ವಿಜ್ಞಾನಿ, ಎಂಜಿನಿಯರ್ ಮತ್ತು ಹೊಸತನದ ಪ್ರವರ್ತಕ ಅಲೆಕ್ಸಾಂಡರ್ ಗ್ರಹಾಂ ಬೆಲ್. ಅವರ ತಾಯಿ ಹಾಗೂ ಹೆಂಡತಿ ಕಿವುಡರಾಗಿದ್ದೇ ಬೆಲ್‌ನ ಜೀವಮಾನದ ಕಾರ್ಯದ ಮೇಲೆ ಆಳವಾದ ಪ್ರಭಾವ ಬೀರಿತ್ತು. ಕೇಳುವಿಕೆ ಮತ್ತು ವಾಕ್ ಶಕ್ತಿಯ ಕುರಿತಾದ ಅವರ ಸಂಶೋಧನೆಯು ಕೇಳುವಿಕೆಯ ಉಪಕರಣಗಳಿಗಾಗಿ ಪ್ರಯೋಗವನ್ನು ಕೈಗೊಳ್ಳಲು ಕಾರಣವಾದವು. ಇದು ಅಂತಿಮವಾಗಿ, 1876ರಲ್ಲಿ ದೂರವಾಣಿಗೆ ಸಂಬಂಧಿಸಿದಂತೆ U.S. ಸ್ವಾಮ್ಯದ ಹಕ್ಕುಪತ್ರವನ್ನು ಮೊದಲಿಗೆ ಸ್ವೀಕರಿಸುವಲ್ಲಿ ಅದ್ವಿತೀಯವಾದುದಾಗಿವೆ. ದ್ಯುತಿ ದೂರಸಂಪರ್ಕಗಳು, ಹೈಡ್ರೋಫಾಯಿಲ್‌ಗಳು ಹಾಗೂ ವಾಯುಯಾನ ವಿಜ್ಞಾನದಲ್ಲಿನ ಪರಿವರ್ತನಾಶೀಲ ಕೆಲಸಗಳನ್ನು ಒಳಗೊಂಡಂತೆ, ಇನ್ನೂ ಅನೇಕ ಆವಿಷ್ಕಾರಗಳಿಗೆ ಇದು ಬುನಾದಿ ಹಾಕಿತು. 1888ರ ನ್ಯಾಷನಲ್ ಜಿಯಾಗ್ರಫಿಕ್ ಸೊಸೈಟಿಯ ಸಂಸ್ಥಾಪಕ ಸದಸ್ಯರಲ್ಲಿ ಅಲೆಕ್ಸಾಂಡರ್ ಗ್ರಹಾಂ ಬೆಲ್ ಅವರೂ ಒಬ್ಬರಾಗಿದ್ದಾರೆ.



ಇತಿಹಾಸದಲ್ಲಿ ಈ ದಿನ

1912ರಲ್ಲಿ ಖಾಸಗಿ ವಿಮಾನದ ಮೂಲಕ ಪ್ಯಾರಾಚೂಟ್ ಧರಿಸಿ ಹಾರಿದ ಮತ್ತು ಜಿಗಿದ ಕ್ಯಾಪ್ಟನ್ ಅಲ್ಬರ್ಟ್ ಬೆರ್ರಿಯವರೇ ಮೊದಲಿಗರಾಗಿದ್ದಾರೆ. ಅಮೆರಿಕದ ಮಿಸ್ಸೌರಿಯಲ್ಲಿ ಈ ಸಾಹಸ ನಡೆಯಿತು. 1500 ಅಡಿ ಎತ್ತರದಿಂದ ಪ್ಯಾರಾಚೂಟ್ ಕಟ್ಟಿಕೊಂಡು ಜಿಗಿದಿದ್ದನು. ಜಿಗಿತದ ವೇಗವು ಗಂಟೆಗೆ ಐವತ್ತು ಕಿ.ಮೀ. ಆಗಿತ್ತು. ಪ್ಯಾರಾಚೂಟ್ ಕಟ್ಟಿಕೊಂಡು ಜಿಗಿದಿದ್ದು ಇದೇ ಮೊದಲಾದರೂ 1783ರಲ್ಲಿ ಎರಡು ದೊಡ್ಡ ಬಲೂನ್ ಕಟ್ಟಿಕೊಂಡು ಫ್ರೆಂಚ್‌ನ ಸಾಹಸಿಯೊಬ್ಬ ಮರದಿಂದ ಜಿಗಿದಿದ್ದನು ಎಂಬುದೊಂದು ದಾಖಲೆ ಇದೆ.

ಸೌಜನ್ಯ : ಕನ್ನಡಪ್ರಭ – 01.03.2021
ಸಂಗ್ರಹ : ಡಾ. ವಿ. ಪ್ರಶಾಂತ, ಸಂ. ಗಾಂಧಿ ಭವನ



ರೈತ ಚಳುವಳಿಯ ರೂವಾರಿ ಸಮಾಜವಾದಿ ಧುರೀಣ

ಪ್ರೊ. ಎಂ.ಡಿ. ನಂಜುಂಡಸ್ವಾಮಿ : (13 ಫೆಬ್ರವರಿ 1936 – 3 ಫೆಬ್ರವರಿ 2004)

– ಅಖಿಲಾ ವಿದ್ಯಾಸಂದ್ರ

ಪ್ರೊ.ಎಂ.ಡಿ.ಎನ್., ಎಂದೇ ಖ್ಯಾತರಾದ ಪ್ರೊಫೆಸರ್ ಅವರು ಕರ್ನಾಟಕ ರಾಜ್ಯ ರೈತ ಸಂಘದ ರೂವಾರಿಗಳಾಗಿದ್ದಾರೆ. ಮೈಸೂರಿನ ಎಂ.ಎನ್.ಮಹಂತ ದೇವರು ಇವರ ತಂದೆ ಮತ್ತು ರಾಜಮ್ಮಣ್ಣಿ ಅವರು ಇವರ ತಾಯಿಯವರಾಗಿದ್ದಾರೆ. ಇವರು ಮೈಸೂರಿನಲ್ಲಿ ಎಲ್. ಎಲ್.ಬಿ., ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಲ್.ಎಲ್. ಎಂ. ತದ ನಂತರ ನೆದರ್‌ಲ್ಯಾಂಡ್‌ನ ಹೇಗ್ ಅಕಾಡೆಮಿ ಆಫ್ ಇಂಟರ್ ನ್ಯಾಷನಲ್‌ನಲ್ಲಿ ಉನ್ನತ ಅಧ್ಯಯನ, ಜರ್ಮನಿಯಲ್ಲಿ ಪಿ.ಎಚ್‌ಡಿ. ಅಧ್ಯಯನ ಮುಗಿಸಿದರೂ, ಪದವಿ ತಿರಸ್ಕರಿಸಿ ತಾಯ್ನಾಡಿಗೆ ವಾಪಸಾಗಿದ್ದರು. ಬೆಂಗಳೂರಿನಲ್ಲಿ ಬಿ.ಎಂ.ಎಸ್. ಹಾಗೂ ರೇಣುಕಾಚಾರ್ಯ ಕಾಲೇಜು ಮತ್ತು ಮೈಸೂರಿನ ಶಾರದಾ ವಿಲಾಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಬದುಕನ್ನು ಆರಂಭಿಸಿದರು. ಆದರೆ ಇವರ ಮನಸ್ಸಲ್ಲಿ ಜಯಪ್ರಕಾಶ್ ನಾರಾಯಣ್ ಮತ್ತು ಲೋಹಿಯಾ ಅವರ ಚಿಂತನೆಗಳೇ ಇವರನ್ನು ಸಮಾಜವಾದದ ಕಡೆಗೆ ಸೆಳೆದಿತ್ತು. ಕಿಷನ್ ಪಟ್ನಾಯಕ್ ಅವರ 'ಮ್ಯಾನ್ ಕೈಂಡ್' ಪತ್ರಿಕೆಯಂತೆಯೇ ಕನ್ನಡ ಭಾಷೆಯಲ್ಲಿ 'ಮಾನವ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಆ ವೇಳೆಗೆ ನರಗುಂದ, ನವಿಲುಗುಂದಗಳಲ್ಲಿ ನಡೆದ ಗೋಲೀಬಾರ್‌ನಿಂದಾದ ರೈತರ ಹತ್ಯಾಕಾಂಡ ಇವರನ್ನು ತಲ್ಲಣಗೊಳಿಸಿತ್ತು. ಅನ್ನ ಕೊಡುವ ರೈತ ನ್ಯಾಯ ಕೇಳಿದರೆ ಸರ್ಕಾರ ಗುಂಡು ಹಾರಿಸಿದ್ದು, ಇವರನ್ನು ಹೋರಾಟಕ್ಕೆ ಪ್ರೇರೇಪಿಸಿತು. ಕಬ್ಬು ಬೆಳೆಗಾರರ ಮೇಲಿನ ನಿರ್ಬಂದಗಳು, ಸಕ್ಕರೆ ಕಾರ್ಖಾನೆಗಳ ಮೇಲಾಟಗಳು, ಲೆವಿ ಪದ್ಧತಿ, ಕೃಷಿಗೆ ನೀರು ಸಕಾಲದಲ್ಲಿ ಬಿಡದೆ ಇರುವ ಸಂಕಷ್ಟಗಳು ಇವರ ಕರುಳು ಚುರುಕ್ಕೆನಿಸುತ್ತಿತ್ತು. ಉತ್ತರ ಭಾರತದಲ್ಲಿ ಎದ್ದ ಯುವಜನರ ಕ್ರಾಂತಿಯ ಕೂಗು, ಕಾಂಗ್ರೆಸ್ ಸರ್ಕಾರ ಹೇರಿದ ತುರ್ತು ಪರಿಸ್ಥಿತಿ, ವಾಕ್ ಸ್ವಾತಂತ್ರ್ಯ ರದ್ಧತಿ, ಜಯಪ್ರಕಾಶ್ ನಾರಾಯಣ್ ಅವರ ಕರೆ, ಇವರನ್ನು "ಸಮಾಜವಾದಿ ಯುವಜನ ಸಭಾ", ಕರ್ನಾಟಕದಲ್ಲಿ ಕಟ್ಟಲು ಪ್ರೇರೇಪಿಸಿತು. ಕಡಿದಾಳ ಶಾಮಣ್ಣ, ರಾಮದಾಸ್, ಎನ್.ಡಿ. ಸುಂದರೇಶ್, ತೇಜಸ್ವಿ, ಪ್ರೊ. ಲಂಕೇಶ್, ಪ್ರೊ. ಚಂಪಾ, ಪ್ರೊ. ಕೃಷ್ಣಪ್ಪ ಇವರೊಡಗೂಡಿ ಜೆ.ಪಿ. ಚಳುವಳಿಯ ನವ ನಿರ್ಮಾಣ ಸಮಿತಿ ರಚಿಸಿದರು. ಕರ್ನಾಟಕದಾದ್ಯಂತ ಯುವಜನರು, ಹಿರಿಯ ಸಮಾಜವಾದಿಗಳ ನೇತೃತ್ವದಲ್ಲಿ ತುರ್ತುಪರಿಸ್ಥಿತಿ ವಿರುದ್ಧ ಜನಜಾಗೃತಿ ಮೂಡಿಸಿದರು.

1980ರಲ್ಲಿ ಕರ್ನಾಟಕ ರಾಜ್ಯ ರೈತ ಮತ್ತು ರೈತ ಕಾರ್ಮಿಕರ ಸಂಘ ಸ್ಥಾಪಿಸಿದರು. ಕೃಷಿ ಬಿಕ್ಕಟ್ಟುಗಳ ಕುರಿತಾಗಿ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ, ರಸ್ತೆ ತಡೆ ಚಳುವಳಿ, ಹೆಚ್.ಎಸ್. ರುದ್ರಪ್ಪ, ಎನ್.ಡಿ. ಸುಂದರೇಶ್, ಕಡಿದಾಳ್ ಶಾಮಣ್ಣರೊಂದಿಗೆ ರೈತರ ಬೃಹತ್ ಸಮಾವೇಶ ಆಯೋಜನೆ, ಸರ್ಕಾರದೊಂದಿಗೆ ಮಾತುಕತೆ, ರೈತ ಹೋರಾಟಕ್ಕೆ ದೊರೆತ ಅಭೂತಪೂರ್ವ ಬೆಂಬಲ, ಹುಬ್ಬಳ್ಳಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಅಧಿಕೃತ ಘೋಷಣೆ ರಾಜ್ಯಾದ್ಯಂತ ಕಚೇರಿ ಪಿಕೆಟಿಂಗ್, ಮರುಜಪ್ತಿ, ಅಧಿಕಾರಿಗಳ ಮನೆ ಜಪ್ತಿ ಚಳುವಳಿ, ಬೆಂಗಳೂರಿನಲ್ಲಿ ರೈತರ ರ್‍ಯಾಲಿ, ರಾಜ್ಯದ ಎಲ್ಲೆಡೆಯಿಂದ ಬೆಂಗಳೂರಿಗೆ ರೈತರ ಚಲೋ, ಪಾದಯಾತ್ರೆ, ಜೈಲ್ ಬರೋ ಚಳುವಳಿ, ಮಹಿಳಾ ದೌರ್ಜನ್ಯದ ವಿರುದ್ಧ ಹಳಿಯಾಳದಲ್ಲಿ ಮಹಿಳಾ ಸಮಾವೇಶ, ಹೋರಾಟದ ಬದುಕಲ್ಲೇ 1987ರಲ್ಲಿ 'ಕನ್ನಡ ದೇಶ ಪಕ್ಷ ಸ್ಥಾಪನೆ' ಮತ್ತು ಎಸ್.ಎಲ್.ಆರ್.ಸಿ & ರಾಮಮನೋಹರ ಲೋಹಿಯಾ ಕಾನೂನು ಕಾಲೇಜು ಆರಂಭಿಸಿದರು. 1989ರಲ್ಲಿ ವಿಧಾನಸಭೆ ಸದಸ್ಯರಾಗಿ ಆಯ್ಕೆಯಾಗಿ ವಿಧಾನಸಭೆಯಲ್ಲಿ ರೈತರ ಧ್ವನಿ ಮೊಳಗಿಸಿದರು. ವಲಯವಾರು ಭದ್ರಾ ನೀರು ಬಿಡುಗಡೆ ವಿರೋಧಿಸಿ ಬೃಹತ್ ಪ್ರತಿಭಟನೆ, ರಸ್ತೆ ತಡೆ ಚಳುವಳಿ ರೈತರಿಗೆ ರೈತ ಸಂಘದ ಹಕ್ಕು ಪತ್ರ ವಿತರಣೆ, 1989–90ರಲ್ಲಿ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರೊಂದಿಗೆ ಪಾನ ನಿಷೇಧ ಪಾದಯಾತ್ರೆ, ಅಬಕಾರಿ ಹರಾಜು ವಿರೋಧಿಸಿ ಪ್ರತಿಭಟನೆ, ಗೊಬ್ಬರ ಬೆಲೆ ಏರಿಕೆ ಪೇಟೆಂಟ್ ವಿರುದ್ಧ ಪ್ರತಿಭಟನೆ, ದೆಹಲಿಯ ಬೋಟ್ ಕ್ಲಬ್‌ನಲ್ಲಿ ರಾಷ್ಟ್ರೀಯ ರೈತ ಸಂಘದ ಮಹೇಂದ್ರಸಿಂಗ್ ಟಿಕಾಯತ್ ನೇತೃತ್ವದಲ್ಲಿ ರೈತ ಪ್ರತಿಭಟನೆಯಲ್ಲಿ ಭಾಗಿ, ಬಳ್ಳಾರಿಯಲ್ಲಿ ಕಾರ್ಗಿಲ್ ಕಂಪನಿ ಮೇಲೆ ಮತ್ತು ಕೆಂಟಕಿ ಫ್ರೈಡ್ ಚಿಕನ್ ಸೆಂಟರ್ ಮೇಲೆ ಧಾಳಿ, ಒಂದು ತಿಂಗಳ ಸೆರೆವಾಸ, ಸ್ವದೇಶಿ ಕೃಷಿ ಪದ್ಧತಿ, ಕೃಷಿ ನೀತಿ ಪ್ರತಿಪಾದನೆ. ತೃತೀಯ ಜಗತ್ತಿನ ರೈತ ಒಕ್ಕೂಟ ರಚನೆಯಲ್ಲಿ ಪಾತ್ರ, ಜಪಾನ್, ಚೈನಾ, ಕೊರಿಯಾ ದೇಶದ ರೈತ ಸಮಾವೇಶದಲ್ಲಿ ಭಾಗಿ, ಜಿ–8 ರಾಷ್ಟ್ರಗಳ ಸಭೆಗೆ ಮುತ್ತಿಗೆ, ಡಬ್ಲ್ಯೂಟಿಓ, ಗ್ಯಾಟ್ ಒಪ್ಪಂದ, ಮುಕ್ತ ಆಮದು ನೀತಿ ವಿರುದ್ಧ ಕನ್ಯಾಕುಮಾರಿಯಿಂದ ಮುಂಬೈ ವರೆಗೆ ಬಂಡಿಯಾತ್ರೆ, ನೀರಾ ಚಳುವಳಿ, ಮಾನ್ಸಾಂಟೋ ಬೀಜ ಕಂಪನಿ ಮೇಲೆ ದಾಳಿ, ಅಂದಿನ ಪ್ರಧಾನಿ ವಿ.ಪಿ. ಸಿಂಗ್ ಅವರೊಂದಿಗೆ ಮಾತುಕತೆ, ಹೀಗೆ ನೂರಾರು ಚಳುವಳಿಗಳನ್ನು ರೂಪಿಸಿ, ಧ್ವನಿಯಿಲ್ಲದ ಅನ್ನದಾತನ ಧ್ವನಿ, ವಿಧಾನಸೌಧದಲ್ಲಿ, ಪಾರ್ಲಿಮೆಂಟಿನಲ್ಲಿ ಮೊಳಗುವಂತೆ ಮಾಡಿದರು. ಪ್ರೊಫೆಸರ್ ಅವರ ರೈತರ ಸ್ವಾಭಿಮಾನಿ ಆಂದೋಲನದಿಂದಾಗಿ ಕರ್ನಾಟಕದಲ್ಲಿ ಅನೇಕ ಸಾಮಾಜಿಕ–ರಾಜಕೀಯ–ಆರ್ಥಿಕ ಬದಲಾವಣೆಗಳಾಗಿವೆ.

ಕರ್ನಾಟಕ ಕಟ್ಟಿದ ಕೃಷ್ಣರಾಜ

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸಂಪರ್ಕಾಭಿವೃದ್ಧಿ

ಕಾವೇರಿ ನದಿಗೆ ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರ ಮತ್ತು ಶರಾವತಿ ನದಿಯ ವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪಿಸುವ ಮೂಲಕ ಏಷ್ಯಾ ಖಂಡದಲ್ಲೇ ಪ್ರಥಮ ಬಾರಿಗೆ ಜಲವಿದ್ಯುತ್ ಯೋಜನೆ ಆರಂಭಿಸಿದ ಹೆಮ್ಮೆ ಒಡೆಯರ್ ಅವರಿಗೆ ಸಲ್ಲುತ್ತದೆ. ಇದರಿಂದ ಕೋಲಾರ ಚಿನ್ನದ ಗಣಿಗೆ ಮತ್ತು ಬೆಂಗಳೂರು, ಮೈಸೂರು ಮತ್ತಿತರ ನಗರಗಳಿಗೆ ವಿದ್ಯುತ್ ಪೂರೈಸಲಾಯಿತು. ಪ್ರಜೆಗಳು "ಕೃಷ್ಣರಾಜ ಭೂಪ ಮನೆಮನೆಯ ದೀಪ" ಎಂದು ಹಾಡಿ ಹೊಗಳಿದರು. ಮೈಸೂರು ನಗರವೂ ಸೇರಿದಂತೆ ರಾಜ್ಯದ ವಿವಿಧ ನಗರಗಳ ಸಂಪರ್ಕಕ್ಕೆ 200 ಕಿ.ಮೀ. ರಸ್ತೆಗಳನ್ನು ಮತ್ತು ಸೇತುವೆಗಳನ್ನು ನಿರ್ಮಿಸಿದರು. ಸಂಸ್ಥಾನದ ವ್ಯಾಪ್ತಿಗೊಳಪಟ್ಟ ರೈಲುಮಾರ್ಗಗಳ ನಿರ್ವಹಣೆಗಾಗಿ "ಮೈಸೂರು ಸ್ಟೇಟ್ ರೈಲ್ವೇಸ್" ಎಂಬ ಇಲಾಖೆಯನ್ನು ಸ್ಥಾಪಿಸಿದರು. ಬೆಂಗಳೂರು, ಮೈಸೂರು, ಚಿಕ್ಕಬಳ್ಳಾಪುರ, ಶಿವಮೊಗ್ಗಾ, ಚಾಮರಾಜನಗರ, ಚಿತ್ರದುರ್ಗ, ಹರಿಹರ, ಅರಸೀಕೆರೆಗಳಿಗೆ ರೈಲುಮಾರ್ಗಗಳು ನಿರ್ಮಾಣವಾದವು.

ಸಾಂಸ್ಕೃತಿಕ ಅನನ್ಯತೆ

ಮೈಸೂರು ಲಲಿತಕಲೆಗಳ ಬೀಡು. ಈ ಬೀಡನ್ನು ವಿಶ್ವವಿಖ್ಯಾತಗೊಳಿಸಿದ ಶಿಲ್ಪಿ ನಾಲ್ವಡಿಯವರಾಗಿದ್ದಾರೆ. ಬ್ರಿಟಿಷ್ ವಾಸ್ತುಶಿಲ್ಪಿ ಹೆಚ್. ಇರ್ವಿನ್ ಅವರ ನೇತೃತ್ವದಲ್ಲಿ ಇಂಡೋ ಸಾರ್ಸನಿಕ್ ಶೈಲಿಯಲ್ಲಿ ಮೈಸೂರು, ಬೆಂಗಳೂರು ಅರಮನೆ, ಜಗನ್ಮೋಹನ ಅರಮನೆ, ಲಲಿತಮಹಲ್, ಜಯಲಕ್ಷ್ಮಿ ಮಹಲ್, ಚೆಲುವಾಂಬ ಮಹಲ್, ಇನ್ನಿತರೆ ಸರ್ಕಾರಿ ಕಟ್ಟಡಗಳನ್ನು ಕಲಾತ್ಮಕವಾಗಿ ಕಟ್ಟಿಸಿದರು. ಸ್ವತಃ ಸಂಗೀತಗಾರರಾದ ನಾಲ್ವಡಿಯವರು, ಸಂಗೀತ ವಾದ್ಯಗಳನ್ನು ನುಡಿಸುವುದರಲ್ಲೂ ಪರಿಣಿತಿಯನ್ನು ಪಡೆದಿದ್ದರು. ನಂದಿಬೆಟ್ಟವನ್ನು ಪ್ರವಾಸಿಕೇಂದ್ರವನ್ನಾಗಿ, ಲಾಲ್‌ಬಾಗ್, ಕಬ್ಬನ್ ಪಾರ್ಕ್‌ಗಳ ಅಭಿವೃದ್ಧಿಯೊಂದಿಗೆ ಬೃಂದಾವನ, ಪಕ್ಷಿಧಾಮ, ಕರ್ಜನ್ ಪಾರ್ಕ್, ಕೋರ್ಡನ್ ಪಾರ್ಕ್, ಲೇಕ್ ವ್ಯೂ ಮುಂತಾದ ಉದ್ಯಾನವನವನ್ನು ನಿರ್ಮಿಸಿ, ಮೈಸೂರು ರಾಜ್ಯವನ್ನು 'ಸುಂದರ ಹಸಿರು ನಗರ'ವಾಗಿಸಿದ್ದರು. ಕನ್ನಡ, ಭಾಷೆಯಾಗಿ–ಸಾಹಿತ್ಯವಾಗಿ ಅಭಿವೃದ್ಧಿಹೊಂದಲು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಿದರು.ಮೈಸೂರು ಶೈಲಿ ಚಿತ್ರಕಲೆ, ಮೈಸೂರು ಶೈಲಿ ಭರತನಾಟ್ಯ, ಕರ್ನಾಟಕ ಸಂಗೀತದ ಬೆಳವಣಿಗೆಗೆ ಇವರು ಪ್ರೋತ್ಸಾಹಕೊಟ್ಟಿದ್ದರಿಂದ ಕರ್ನಾಟಕದ ಸಾಂಸ್ಕೃತಿಕಲೋಕ ಭಾರತದಲ್ಲೇ ಪ್ರಖ್ಯಾತಿ ಪಡೆದ ವಿಶಿಷ್ಟ ಪರಂಪರೆಯಾಗಿ ಬೆಳೆದು ಬಂದಿತ್ತು. ಇದೇ ಸಂದರ್ಭದಲ್ಲಿ 1990ರಲ್ಲಿ 'ಸ್ಟಾರ್' ಪತ್ರಿಕೆ, ಡಿವಿಜಿ ಅವರ ಕರ್ನಾಟಕ ಅರ್ಥಸಾಧಕ ಪತ್ರಿಕೆ, ಇಂಡಿಯನ್ ರಿವ್ಯೂ ಆಫ್ ರಿವ್ಯೂಸ್ ಪತ್ರಿಕೆಯನ್ನೂ, ತಿ.ತಾ. ಶರ್ಮರವರು ವಿಶ್ವ ಕರ್ನಾಟಕ, ನಂತರ ತಾಯಿನಾಡು, ಜನವಾಣಿ, ಪ್ರಜಾಮತ ಪತ್ರಿಕೆಗಳು ಪ್ರಾರಂಭವಾಗಿದ್ದು. ಆರ್. ನರಸಿಂಹಾಚಾರ್ಯರು ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳನ್ನು ರಚಿಸಿ, ಒಡೆಯರ್ ಅವರಿಗೆ ಅರ್ಪಿಸಿದರು. ಬಿ.ಎಂ.ಶ್ರೀ., ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿವಿಜಿ, ಪಂಜೆ ಮಂಗೇಶರಾಯರು ಕನ್ನಡ ಸಾಹಿತ್ಯವನ್ನು ಕಟ್ಟಿ ಬೆಳೆಸಿದರು. ಕನ್ನಡದ ಕಾದಂಬರಿಗಳ ಉಗಮ ಕಾಲವೆಂದೇ ಹೇಳುವ ಕಾದಂಬರಿಗಳಾದ ಇಂದಿರಾಬಾಯಿ, ವಾಗ್ದೇವಿ, ಇಂದಿರಾ, ಯದುಮಹಾರಾಜ, ಮಾಡಿದ್ದುಣ್ಣೋ ಮಹಾರಾಯ ಹಾಗೂ ಶೈವಲಿನಿ, ಕುಮುದಿನಿ ಕಥೆಗಳು ಹೊಸ ಆಯಾಮವನ್ನು ಕನ್ನಡ ಸಾಹಿತ್ಯಕ್ಕೆ ದೊರಕಿಸಿಕೊಟ್ಟವು. ಪ್ರಖ್ಯಾತ ನೃತ್ಯಗಾರ್ತಿ, ಜಟ್ಟಿತಾಯಮ್ಮ, ಬೆಂಗಳೂರಿನ ನಾಗರತ್ನ, ಪುಟ್ಟದೇವಮ್ಮ, ಚಿಕ್ಕದೇವಮ್ಮ, ಕೋಲಾರದ ವಿದ್ವಾನ್ ಕಿಟ್ಟಪ್ಪರವರುಗಳಿಗೆ ರಾಜಾಶ್ರಯ ದೊರಕಿತ್ತು.



ನಾಲ್ವಡಿಯವರ ಆಡಳಿತವನ್ನು ಮೆಚ್ಚಿ ಮಹಾತ್ಮ ಗಾಂಧೀಜಿ ಅವರು ಮೈಸೂರು ರಾಜ್ಯವನ್ನು "ರಾಮರಾಜ್ಯ"ವೆಂದೂ, ಒಡೆಯರ್ ಅವರನ್ನು 'ರಾಜರ್ಷಿ' ಎಂದು ಕೊಂಡಾಡಿದ್ದರು. ಭಾರತದ ಸ್ವಾತಂತ್ರ್ಯ ಚಳುವಳಿಯ ಕಾವು ಮೈಸೂರು ರಾಜ್ಯದ ಮೇಲೂ ಹಬ್ಬಿತ್ತು. ಗಣಪತಿ ಗಲಭೆ, ಪ್ರಥಮ ಮಹಾಯುದ್ಧ, ಬರಗಾಲ ಪರಿಸ್ಥಿತಿ, ಶಿವಪುರದ ಧ್ವಜ ಸತ್ಯಾಗ್ರಹ, ಅರಣ್ಯ ಚಳುವಳಿ, ವಿದುರಾಶ್ವದ ಗೋಲಿಬಾರ್ ಪ್ರಕರಣ, ಒಡೆಯರ್ ಅವರ ಮನಃಶಾಂತಿಯನ್ನು ಕದಡಿತ್ತು. ಇದರೊಂದಿಗೆ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರ ಅಕಾಲಿಕ ಮರಣದಿಂದ ತೀವ್ರ ಅಘಾತಗೊಂಡಿದ್ದ ಒಡೆಯರ್ ಅವರು 3ನೇ ಆಗಸ್ಟ್ 1940ರಂದು ಹೃದಯಘಾತಕ್ಕೆ ಒಳಗಾಗಿ ಚರಿತ್ರೆಗೆ ಸೇರಿದರು. ಹೀಗೆ ಮೈಸೂರು ರಾಜ್ಯವು ಒಡೆಯರ್ ಅವರ ಜನಪರತೆಯಿಂದಾಗಿ, ಸಂವಿಧಾನಾತ್ಮಕ ರೀತಿಯ ಆಡಳಿತಕ್ಕೊಳಪಟ್ಟು ಆಧುನಿಕ ಕರ್ನಾಟಕವಾಗಲು ಸಜ್ಜುಗೊಂಡಿದ್ದು ಜನತೆಯ ಸ್ಮೃತಿಪಟಲದಲ್ಲಿ ಸದಾ ಹಸಿರಾಗಿದೆ.



ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ರಾಜಕಾರಣದ ಆಧ್ಯಾತ್ಮೀಕರಣ

ಗಾಂಧೀಜಿ ಅವರು ಆಧುನಿಕ ಭಾರತದ ರಾಜಕಾರಣಕ್ಕೆ ಮೌಲಿಕ ಪರಿಭಾಷೆಯನ್ನೇ ನೀಡಿದರು. ಅವನ್ನು ಹೀಗೆ ಹೇಳಬಹುದು–

* ಹಿಂದೂ ಮಹಾಸಭಾ ಪ್ರತಿಪಾದಿಸುತ್ತಿದ್ದ 'ಸಾಂಸ್ಕೃತಿಕ ರಾಷ್ಟ್ರೀಯತೆ' ಮತ್ತು ಮಹಮದ್ ಅಲಿ ಜಿನ್ನಾ ಹೇಳುತ್ತಿದ್ದ 'ಧಾರ್ಮಿಕ ರಾಷ್ಟ್ರೀಯತೆ'ಗೆ ಬದಲಾಗಿ 'ನಾಗರಿಕ ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ಮುಂಚೂಣಿಗೆ ತಂದಿದ್ದು ಗಾಂಧೀಜಿ ಅವರ ಮಹತ್ತರ ಕೊಡುಗೆಯಾಗಿದೆ.
* ವಿಕೇಂದ್ರೀಕೃತ ಸಂಸದೀಯ ಸ್ವರಾಜ್ಯದ ಸ್ಥಾಪನೆ.
* ಭಾರತೀಯ ಆಯಾಮವುಳ್ಳ ಮಾನವ ಹಕ್ಕುಗಳು.
* ಆರ್ಥಿಕ ಪ್ರಗತಿಯ ಜೊತೆಯಲ್ಲೇ ರಾಜಕೀಯ ಸ್ವಾತಂತ್ರ್ಯ ಸಾಗಬೇಕು.

ನಮ್ಮ ರಾಜಕಾರಣದಲ್ಲಿರುವ ಹಿಂಸೆಯು ಕ್ರಮೇಣ ಕಡಿಮೆಯಾಗಬೇಕು ಎನ್ನುತ್ತಿದ್ದ ಗಾಂಧೀಜಿ, ಈ ನಿಟ್ಟಿನಲ್ಲಿ ಮಾಡಿದ ಪ್ರತಿಪಾದನೆಗಳು ಹೀಗಿವೆ–

* ಸ್ಥಳೀಯ ಹಂತದವರೆಗೂ ಸಾಂವಿಧಾನಿಕ ಸರಕಾರ ರಚನೆ.
* ನಿಷ್ಪಕ್ಷಪಾತವಾಗಿ ಕೆಲಸ ಮಾಡುವ, ರಚನಾತ್ಮಕ ವ್ಯಕ್ತಿಗಳ ಪಡೆ.
* ಕೆಲವು ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ ನಾಗರಿಕ ಅಸಹಕಾರ.
* ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣಾ ವ್ಯವಸ್ಥೆಯಡಿ ಸೇವಾ ಮನೋಭಾವದೊಂದಿಗೆ ಪಕ್ಷ ರಾಜಕಾರಣ.

ರಾಜಕೀಯವನ್ನು ಆಧ್ಯಾತ್ಮೀಕರಿಸಿದ ಗಾಂಧೀಜಿ, ಈ ಬಗ್ಗೆ ಆಡುತ್ತಿದ್ದ ಮನೋಜ್ಞವಾದ ಮಾತುಗಳು ಹೀಗಿವೆ:

* ನನ್ನ ಪಾಲಿಗೆ ದೇವರೆಂದರೆ ಸತ್ಯ ಮತ್ತು ಪ್ರೀತಿ; ದೇವರೆಂದರೆ ನ್ಯಾಯ–ನೀತಿ; ದೇವರೆಂದರೆ, ನಿರ್ಭೀತಿಯ ಸ್ಥಿತಿ.
* ರಾಜಕಾರಣದಲ್ಲಿರುವ ನನ್ನ ಸ್ನೇಹಿತರು ರಾಜಕೀಯದ ನನ್ನ ಕಲ್ಪನೆಯಿಂದ ಹತಾಶರಾಗಿದ್ದು, ಇದು ನನ್ನ ಧರ್ಮದಿಂದ ಒಡಮೂಡಿದೆ ಎನ್ನುತ್ತಾರೆ. ಅವರ ಮಾತು ಸರಿಯಾಗಿಯೇ ಇದೆ. ಏಕೆಂದರೆ, ಧರ್ಮವೇ ನನ್ನ ಪ್ರತಿಯೊಂದೂ ಚಟುವಟಿಕೆಗಳ ಮೂಲವಾಗಿದೆ. ಯಾವುದೇ ಒಬ್ಬ ಧಾರ್ಮಿಕ ವ್ಯಕ್ತಿಯ ಸಮಸ್ತ ಚಟುವಟಿಕೆಗಳೂ ಅವನ ಧರ್ಮದ ಅಂತರಂಗದಿಂದಲೇ ಹುಟ್ಟಬೇಕು. ಏಕೆಂದರೆ, 'ಧರ್ಮ'ವೆಂದರೆ, ಆ ದೇವರಿಗೆ ತಲೆಬಾಗುವುದೇ ಆಗಿದೆ. ಇಷ್ಟೇ ಅಲ್ಲ, ನಿಮ್ಮ ಕಣಕಣವನ್ನೂ ಆ ದೇವರೇ ಆಳುತ್ತಿರುತ್ತಾನೆ.
* ಇನ್ನೊಬ್ಬರಿಗೆ ನ್ಯಾಯವನ್ನು ಒದಗಿಸುವ ಮೂಲಕ ನಾವು ನ್ಯಾಯವನ್ನು ಪಡೆಯಬಹುದು ಎನ್ನುವುದು ನನ್ನ ಅನುಭವದಿಂದ ದೃಢಪಟ್ಟಿದೆ.
* ನಿರ್ಭೀತಿಯೇ ಆಧ್ಯಾತ್ಮಿಕತೆಯ ಮೊಟ್ಟಮೊದಲ ಗುಣ. ಹೇಡಿಗಳು ಎಂದಿಗೂ ನೈತಿಕತೆಯನ್ನು ಹೊಂದಿರಲಾರರು. ಎಲ್ಲಿ ಭಯವಿರುತ್ತದೋ ಅಲ್ಲಿ ಧರ್ಮವಿರುವುದಿಲ್ಲ.
* ನಾವು ಮಾಡಿದ ತಪ್ಪುಗಳನ್ನು ದೊಡ್ಡದಾಗಿ ಬಿಂಬಿಸಿಕೊಳ್ಳಬೇಕು; ಹಾಗೆಯೇ, ಇತರರು ಮಾಡಿದ ತಪ್ಪುಗಳನ್ನು ಆದಷ್ಟೂ ಮರೆತುಬಿಡಬೇಕು. ಆತ್ಮ ಶುದ್ಧೀಕರಣಕ್ಕೆ ಇದಕ್ಕಿಂತ ಅತ್ಯುತ್ತಮ ಮಾರ್ಗವಿಲ್ಲ– ಇದೇ ಬದುಕಿನ ಸುವರ್ಣ ನಿಯಮ.
* ಸೋಲಾಗಲಿ, ಗೆಲುವಾಗಲಿ ನಮ್ಮ ಕೈಯಲ್ಲಿಲ್ಲ. ಅವೆಲ್ಲವೂ ಇರುವುದು ಆ ಭಗವಂತನ ಕೈಯಲ್ಲಷ್ಟೆ. ಹೀಗಾಗಿ ನಮ್ಮನ್ನು ನಾವು ಅವನಿಗೆ ಅರ್ಪಿಸಿಕೊಳ್ಳೋಣ. ಏಕೆಂದರೆ, ಎಲ್ಲವನ್ನೂ ಆತನ ಇಚ್ಛೆಯೇ ನಿರ್ಧರಿಸುತ್ತದೆ.
* ನಾನೊಬ್ಬ ಸಂತನಾಗಿದ್ದು, ರಾಜಕಾರಣದಲ್ಲಿ ನಾನು ಅಪ್ರಸ್ತುತವಾಗುತ್ತಿದ್ದೇನೆ ಎಂದು ಉಳಿದವರು ನನ್ನ ಬಗ್ಗೆ ಹೇಳುತ್ತಾರೆ. ಆದರೆ, 'ನಾನೊಬ್ಬ ರಾಜಕಾರಣಿಯಾಗಿದ್ದು, ಸಂತನಾಗಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದೇನೆ' ಎಂದು ನಾನು ಅವರಿಗೆಲ್ಲ ಹೇಳುತ್ತೇನೆ.

ಗಾಂಧೀಜಿ, ಭಾರತದ ಬಗ್ಗೆ ತಮ್ಮದೇ ಆದ ಕಲ್ಪನೆಯನ್ನು ಹೊಂದಿದ್ದರು. ಅದು ಕೆಳಕಂಡಂತಿದೆ–

* ನನ್ನ ಕನಸಿನ ಭಾರತದಲ್ಲಿ ಕಡುಬಡವರಿಗೆ ಕೂಡ ಇದು ನಮ್ಮ ದೇಶವೆನ್ನುವ ಭಾವನೆ ಇರಬೇಕು. ಜೊತೆಗೆ, ಇಲ್ಲಿ ಮೇಲ್ವರ್ಗ, ಕೆಳವರ್ಗ ಎನ್ನುವ ತಾರತಮ್ಯ ಇರಬಾರದು. ಇಲ್ಲಿ ಎಲ್ಲ ಸಮುದಾಯಗಳೂ ಪರಸ್ಪರ ಸೌಹಾರ್ದದಿಂದ ಬದುಕಬೇಕು. ಇಂಥ ಭಾರತದಲ್ಲಿ ಅಸ್ಪೃಶ್ಯತೆಗಾಗಲಿ, ಕುಡಿತಕ್ಕಾಗಲಿ ಕಿಂಚಿತ್ತೂ ಆಸ್ಪದವಿರಬಾರದು. ಪುರುಷರಂತೆಯೇ ಮಹಿಳೆಯರಿಗೂ ಎಲ್ಲಾ ಹಕ್ಕುಗಳೂ ಇರಬೇಕು. ಜಗತ್ತಿನೊಂದಿಗೆ ನಾವು ಸದಾ ಶಾಂತಿಯಿಂದ ಇರಬೇಕು..."

ಹೀಗೆ ಗಾಂಧೀಜಿ ಅವರು ತಮ್ಮ ಹತ್ಯೆಗೂ ಕೇವಲ ಮೂರು ದಿನಗಳ ಹಿಂದೆ 'ಹರಿಜನ' ಪತ್ರಿಕೆಯಲ್ಲಿ "ನಾವು ರಾಜಕೀಯ ಸ್ವಾತಂತ್ರ್ಯವನ್ನೇನೋ ಪಡೆದುಕೊಂಡಿದ್ದೇವೆ. ಆದರೆ ನಾವಿನ್ನೂ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕಾಗಿದೆ," ಎಂದು ಬರೆದಿದ್ದರು.

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಎಷ್ಟಾದರೂ ಹಣ ಕೊಡಲು, ಯಾವುದೇ ಅಪರಾಧ ಮಾಡಲು ಸಿದ್ಧನಾಗುತ್ತಾನೆ. ಹೀಗಾಗಿ ಜಗತ್ತಿನಾದ್ಯಂತ, ನಮ್ಮ ದೇಶವೂ ಸೇರಿದಂತೆ ಯುವಜನ ಹೆರಾಯಿನ್‌ನ ಮೋಹಜಾಲಕ್ಕೆ ಬಲಿಯಾಗಿ, ನಿರ್ವಿಯರಾಗುತ್ತಿದ್ದಾರೆ. ಕುಟ್ಟೆ ಹಿಡಿದ ಮರದಂತಾಗಿದ್ದಾರೆ. ಅವರು ನೈತಿಕ ಅಧಃಪತನ ಹೊಂದಿ ಸೈತಾನರಾಗುತ್ತಿದ್ದಾರೆ. ದೊಡ್ಡ ನಗರಗಳಲ್ಲಿ ಹೆರಾಯಿನ್-ಬ್ರೌನ್‌ಶುಗರನ್ನು ಸಾಗಿಸಿ, ಮಾರಾಟ ಮಾಡುವವರ ದೊಡ್ಡ ಪಡೆಗಳೇ ಹುಟ್ಟಿಕೊಂಡಿವೆ. ಕೋಟ್ಯಂತರ ರೂಪಾಯಿಗಳ ಈ ವ್ಯವಹಾರ ದುರಾಸೆಯ ಸಮಾಜ ವಿರೋಧಿ ಜನರ ಪಾಲಿಗೆ ಕಾಮಧೇನುವಾಗಿದೆ. ಎಲ್ಲ ದೇಶಗಳ ಸರ್ಕಾರಗಳು ಈ ದುರ್ವ್ಯವಹಾರವನ್ನು ತಡೆಗಟ್ಟಲು ಬಹುಮಟ್ಟಿಗೆ ವಿಫಲವಾಗಿವೆ. ಆಗೊಮ್ಮೆ ಈಗೊಮ್ಮೆ ದಾಳಿಮಾಡಿ ವಶಪಡಿಸಿಕೊಳ್ಳುವ ಮಾದಕ ವಸ್ತುಗಳ ಪ್ರಮಾಣ, ಒಟ್ಟು ಪ್ರಮಾಣದ ಒಂದು ಹನಿಯಷ್ಟು, ಇರಾನ್, ಮಲೇಶಿಯಾದಂತಹ ದೇಶಗಳಲ್ಲಿ ಹತ್ತು ಗ್ರಾಂ ಹೆರಾಯಿನ್ ಅನ್ನು ಹೊಂದಿರುವ ವ್ಯಕ್ತಿಯನ್ನು ವಿಚಾರಣೆ ಇಲ್ಲದೆ ನೇರವಾಗಿ ನೇಣು ಹಾಕುವಂತಹ ಉಗ್ರ ಶಾಸನವಿದ್ದರೂ, ಅದು ಹೆರಾಯಿನ್ ಸಾಗಾಟ- ಮಾರಾಟವನ್ನು ತಡೆಯಲು ಯಶಸ್ವಿಯಾಗಿಲ್ಲದಿರುವಾಗ, 1985ರ ನಮ್ಮ ದೇಶದ ಕಾಯಿದೆ ಈ ಅಪರಾಧಕ್ಕೆ ವಿಧಿಸುವ ಶಿಕ್ಷೆ ಕೆಲವು ಸಾವಿರ ರೂಪಾಯಿಗಳು ಮತ್ತು ಕೆಲವು ವರ್ಷಗಳ ಕಾರಾಗೃಹವಾಸ ಮಾತ್ರ ಬೊಂಬಾಯಿ ನಗರ ಒಂದರಲ್ಲೇ ಹೆರಾಯಿನ್ ವ್ಯವಹಾರ ಒಂದು ವರ್ಷಕ್ಕೆ 150ರಿಂದ 200 ಕೋಟಿ ರೂಪಾಯಿಗಳಿಗೂ ಹೆಚ್ಚು ಎಂದು ಒಂದು ಅಂದಾಜು. ಅಂದರೆ ಇಡೀ ದೇಶದಲ್ಲಿ ಅದರ ಪ್ರಮಾಣ ನಿಮ್ಮ ಊಹೆಗೇ ಬಿಟ್ಟಿದ್ದು. 1990ರಲ್ಲಿ ಮಾದಕ ವಸ್ತುಗಳ ಹತೋಟಿ ಕಾಯಿದೆಗೆ ತಿದ್ದುಪಡಿತಂದು, ತಪ್ಪಿತಸ್ಥರಿಗೆ ಹತ್ತು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ, ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆಯಾದರೂ, ಈ ಕಾನೂನಿನ 'ಹಿಡಿತ' ಪರಿಣಾಮಕಾರಿಯಾಗಿಲ್ಲ

ಸೇವನೆಯ ಪರಿಣಾಮ : ಹೆರಾಯಿನ್ ಅನ್ನು ಸೂಜಿಮದ್ದಿನ ರೂಪದಲ್ಲಿ, ಬ್ರೌನ್‌ಶುಗರ್ ಅನ್ನು ಹೊಗೆ ಬತ್ತಿಯೊಂದಿಗೆ ಸೇದಿದಾಗ ಅಫೀಮು ಮಿದುಳಿನ ನರಮಂಡಲವನ್ನು ಸೇರಿ ಅದರ ಮೇಲೆ ಪ್ರಭಾವ ಬೀರುತ್ತದೆ. ಯಾವುದೇ ನೋವಿನ ಸಂವೇದನೆ ಇರದು. ಜೋಂಪು, ವಾಸ್ತವ ಕಟುಸತ್ಯ ಮರೆಯಾಗುತ್ತದೆ. ಏನೋ ಒಂದು ಬಗೆಯ ಹಿತ, ಮೈ ಬಿಸಿಯಾಗುವಿಕೆ, ಮನಸ್ಸಿನ ಬೇಸರ ಹೋಗಿ 'ನಾನು ಬಹಳ ಚೆನ್ನಾಗಿದ್ದೇನೆ' ಎಂಬ ಭ್ರಮೆ ಇತ್ಯಾದಿ ಪರಿಣಾಮಗಳು ವ್ಯಕ್ತಿಗೆ ಇಷ್ಟವಾಗುತ್ತವೆ. ನಂತರ ನಿದ್ರೆ, ಚಿತ್ರ ವಿಚಿತ್ರ ಕನಸುಗಳೂ ಬೀಳುವಂತಾಗುತ್ತದೆ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಹಾರವನ್ನು ಬುದ್ಧಿವಂತಿಕೆಯಿಂದ ಸೇವಿಸಿ

ಆಹಾರ ಸೇವಿಸುವಾಗ ಏನು ತಿನ್ನಬೇಕೆನ್ನುವುದು ನಮಗೆ ತಿಳಿದಿರುತ್ತದೆ. ಆದರೆ ಕೆಲವು ಸತ್ವಯುತ ಆಹಾರವೇ ಕೊಬ್ಬಿನಂಶವನ್ನು ಹೊಂದಿದ್ದು ಉರಿಯೂತವನ್ನು ಪ್ರಾಯೋಜಿಸುವುದೆಂದು ನಮಗೆ ತಿಳಿದಿರುವುದಿಲ್ಲ. ಅಧಿಕವಾಗುತ್ತಿರುವ ಕೊಲೆಸ್ಟರಾಲ್‌ನ ಜೊತೆಯಲ್ಲಿಯೇ ಸ್ಯಾಚುರೇಟೆಡ್ ಕೊಬ್ಬು ಕೂಡ ಉರಿಯೂತವನ್ನು ಅಧಿಕ ಮಾಡುವ ಸಾಧ್ಯತೆ ಇದೆ. ಇದಕ್ಕೆ ಕಾರಣವೆಂದರೆ ಡೈರಿ ಆಹಾರಗಳು ಮತ್ತು ಕೆಲವು ಮಾಂಸಾಹಾರಗಳು ಆರ್ಕಿಡೋನಿಕ್ ಆಸಿಡ್ ಹೊಂದಿದ್ದು ಅವುಗಳಿಂದ ದೇಹವು ಉರಿಯೂತ ಪ್ರೋಟಿನ್‌ಗಳನ್ನು ಸೃಷ್ಟಿಸಲು ಬಳಸಿಕೊಳ್ಳುವ ಒಮೆಗಾ 6 ಫ್ಯಾಟಿ ಆಸಿಡ್ ಇರುತ್ತವೆ. ಸಾಮಾನ್ಯವಾಗಿ ಸ್ಯಾಚುರೇಟೆಡ್ ಕೊಬ್ಬು ಅಧಿಕವಾಗಿರುವ ಆಹಾರವನ್ನು ಸೇವಿಸುವ ಜನರಲ್ಲಿ ಸೊಂಟದ ಸುತ್ತಲೂ ಕೊಬ್ಬು ತುಂಬುತ್ತದೆ. ಪ್ರಯೋಗಾಲಯದಲ್ಲಿ ಪ್ರಾಣಿಗಳ ಮೇಲೆ ನಡೆದಿರುವ ಅಧ್ಯಯನದಲ್ಲಿ ಈ ಹೊಟ್ಟೆಯ ಸುತ್ತಲಿನ ಕೊಬ್ಬು ಅತ್ಯಧಿಕ ಪ್ರಮಾಣದಲ್ಲಿ ಉರಿಯೂತವನ್ನು ಸೃಷ್ಟಿಸುತ್ತದೆ ಎನ್ನುವುದು ತಿಳಿದು ಬಂದಿದೆ. ಅತ್ಯಧಿಕ ತೂಕವುಳ್ಳ ಮಂದಿ ಒಮೆಗಾ 3 ಫ್ಯಾಟಿ ಆಸಿಡ್‌ಗಳನ್ನು ಸೇವಿಸಿದಲ್ಲಿ ಉರಿಯೂತವನ್ನು ಪ್ರಾಯೋಜಿಸುವ ಮಟ್ಟವು ಕಡಿಮೆಯಾಗುತ್ತದೆ ಎನ್ನುವುದು ತಿಳಿದು ಬಂದಿದೆ. ಹಣ್ಣುಗಳು ಮತ್ತು ತರಕಾರಿಗಳಲ್ಲಿ ಉರಿಯೂತ ಕಡಿಮೆ ಮಾಡುವ ಆಂಟಿ ಆಕ್ಸಿಡಂಟ್‌ಗಳೇ ತುಂಬಿಕೊಂಡಿರುತ್ತವೆ. ಈ ರೋಗದ ವಿರುದ್ಧ ಹೋರಾಡುವ ಸ್ವತಂತ್ರ ಕಣಗಳು ಪ್ರಾಕೃತಿಕವಾಗಿ ಮಾಲಿಕ್ಯುಲ್‌ಗಳ ಪರಿಣಾಮವನ್ನು ತಟಸ್ಥಗೊಳಿಸುತ್ತವೆ. ದೇಹವು ಗಾಯವೊಂದಕ್ಕೆ ಪ್ರತಿಕ್ರಿಯಿಸುವಂತೆ, ಉರಿಯೂತ ಸೃಷ್ಟಿಸಿ ಸಮಸ್ಯೆಯ ವಿರುದ್ಧ ಕೆಲಸ ಮಾಡುತ್ತದೆ. ಕೋಶಗಳನ್ನು ರಕ್ಷಿಸಲು ಕೆಲವೇ ಆಂಟಿ ಆಕ್ಸಿಡಂಟ್ ಲಭ್ಯವಿರುವ ಸಮಯದಲ್ಲಿ ಹೆಚ್ಚು ಉರಿಯೂತಕ್ಕೆ ಕಾರಣವಾಗಬಹುದು. ದಿನಕ್ಕೆ ಎರಡು ಬಾರಿ ಹಣ್ಣು ಮತ್ತು ತರಕಾರಿ ಸೇವಿಸುವ ಮಂದಿ ತಮ್ಮ ದೇಹದಲ್ಲಿ ಸಿ ರಿಯಾಕ್ಟಿವ್ ಪ್ರೊಟಿನ್ ಪ್ರಮಾಣವನ್ನು ನಾಲ್ಕೇ ವಾರಗಳಲ್ಲಿ ಮೂರನೇ ಒಂದರಷ್ಟು ಕಡಿಮೆ ಮಾಡಿಕೊಳ್ಳುತ್ತಾರೆ. ಬಹುತೇಕ ಉರಿಯೂತ ಹೋರಾಟ ಶಕ್ತಿಯು ಆಂಟಿ ಆಕ್ಸಿಡಂಟ್ ಅಧಿಕವಾಗಿರುವ ಕ್ಯಾರೋಟಿನೈಡ್‌ಗಳಾದ ಕ್ಯಾರೆಟ್, ಟೊಮ್ಯಾಟೋ ಮತ್ತು ಕೆಂಪು ಕ್ಯಾಪ್ಸಿಕಂಗಳಿಂದ ಸಿಗುತ್ತದೆ. ನಿಮ್ಮ ಬಾಯನ್ನು ಶುಚಿಯಾಗಿಟ್ಟುಕೊಳ್ಳುವುದೂ ಕೂಡ ಅಷ್ಟೇ ಅವಶ್ಯಕವಾಗಿದೆ. ಬಾಯಿಯ ವಸಡಿನ ಉರಿಯೂತದ ಪ್ರಮಾಣವನ್ನು ಅಧಿಕಗೊಳಿಸುತ್ತದೆ. ಅಲ್ಲದೆ ಹೃದಯ ರೋಗ ಮತ್ತು ಮಧುಮೇಹದ ಪ್ರಮಾಣವನ್ನು ಏರಿಸುತ್ತದೆ.

ಮುಂದುವರಿಯುವುದು...



ಬೇಸಿಗೆಯ ಬಿರು ಬಿಸಿಲಿನಿಂದ ಬರುವ ಸಾಮಾನ್ಯ ಕಾಯಿಲೆಗಳು ಹಾಗೂ ಪರಿಹಾರಗಳು

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಶಿವರಾತ್ರಿ ಬಂತೆಂದರೆ ಶಿವ ಶಿವ ಅನ್ನುವಷ್ಟು ಬಿಸಿಲಿನ ಝಳ ಇರುತ್ತದೆ. ಇದು ನಮ್ಮ ಹಳ್ಳಿಗರ ನುಡಿ. ಬೇಸಿಗೆಯಲ್ಲಿ ದೇಹ ನಿರ್ಜಲೀಕರಣ ಹೊಂದುವುದು, ಸುಸ್ತಾಗುವುದು, ಚರ್ಮ ಸುಕ್ಕುಗಟ್ಟುವುದು, ಉರಿಮೂತ್ರ, ಮಲಬದ್ಧತೆ, ತಲೆನೋವು, ತಲೆಸುತ್ತು, ವಾಂತಿ ಆಗುವುದು, ಕಣ್ಣು ಮತ್ತು ಪಾದದಲ್ಲಿ ಉರಿ ಬರುವುದು, ಸನ್ ಸ್ಟ್ರೋಕ್, ಅತಿ ಬಿಸಿಲಿಗೆ ಮೈಯೊಡ್ಡಿದರೆ ಜೀವಕ್ಕೆ ಅಪಾಯ ತರುವಂತಹ ಮಟ್ಟ ಮುಟ್ಟಬಹುದು.

ಪರಿಹಾರ / ಉಪಾಯಗಳು

1. ಹೊರವಲಯದಲ್ಲಿ ಕೆಲಸ ಮಾಡುವವರು ಬೆಳಿಗ್ಗೆ ಬೇಗ ಎದ್ದು ಕೆಲಸ ಮುಗಿಸಿಕೊಂಡು ಬರುವುದು. ಯಥೇಚ್ಛವಾಗಿ ನೀರು ಕುಡಿಯಬೇಕು, ಸೌತೆಕಾಯಿ ರಸ, ಸೋರೆಕಾಯಿ ರಸ, ಎಳನೀರು, ಮಜ್ಜಿಗೆ ಧಾರಾಳವಾಗಿ ಸೇವಿಸುವುದು.
3. ಬಿಸಿನೀರಿನ ಸ್ನಾನ ಬಿಟ್ಟು, ತಣ್ಣೀರಿನ ಸ್ನಾನ ದೇಹಕ್ಕೆ ಆಹ್ಲಾದಕರವಾಗಿರುತ್ತದೆ.
4. ಹಣ್ಣಿನ ರಸಗಳನ್ನು ಯಥೇಚ್ಛವಾಗಿ ಸೇವಿಸಿ. ಅದರಲ್ಲೂ ಕಲ್ಲಂಗಡಿ, ಕರಬೂಜ, ದ್ರಾಕ್ಷಿ, ಮೋಸಂಬಿ ಒಳ್ಳೆಯದು.
5. ಬಿಸಿಲಿನಲ್ಲಿ ಹೊರಹೋಗುವಾಗ ತಲೆಯ ಮೇಲೆ ತಂಪಾದ ವಸ್ತ್ರ ಅಥವಾ ಕೊಡೆಯನ್ನು ಉಪಯೋಗಿಸುವುದು.
6. ಬಿಸಿಲಿನಿಂದ ಮನೆಯೊಳಗೆ ಬಂದ ಕೂಡಲೇ ಕೈಕಾಲು ತೊಳೆದುಕೊಂಡು ಬೆಲ್ಲ ಸೇರಿಸಿ ನೀರು ಕುಡಿಯಿರಿ.
7. ನಿತ್ಯ ಅಥವಾ ವಾರಕ್ಕೆ ಎರಡು ಸಲ ಮೈಗೆ ತೆಂಗಿನ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವುದು
8. ಮೈಗೆ ಮಣ್ಣಿನ ಸ್ನಾನ, ದೇಹಕ್ಕೆ ತಂಪು ಕೊಡುತ್ತದೆ.
9. ನೀರಡಿಕೆಗಾಗಿ ಕಾಯಬೇಡಿ ಗಂಟೆಗೊಮ್ಮೆ ನೀರು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ.
10. ಕಣ್ಣು ಉರಿ ಇದ್ದರೆ ಕಣ್ಣುಮುಚ್ಚಿಕೊಂಡು ಕಣ್ಣಿನ ಮೇಲೆ ವೃತ್ತಾಕಾರದಲ್ಲಿ ಹೆಚ್ಚಿದ ಸೌತೆಕಾಯಿಯನ್ನು ಇಟ್ಟುಕೊಳ್ಳುವುದು.
11. ಮಾಂಸಾಹಾರ, ಅತಿಯಾದ ಖಾರದ ಆಹಾರ, ಬಿಸಿ ಪಾನೀಯಗಳನ್ನು ಕಡಿಮೆ ಮಾಡಿ.
12. ಬೆವರು ತರಿಸುವ ವ್ಯಾಯಾಮಗಳಿಗಿಂತ ಯೋಗ ಪ್ರಾಣಾಯಾಮಗಳು ಬಹಳ ಅನುಕೂಲ. ಇದರಿಂದ ದೇಹಕ್ಕೆ ದಣಿ ವಾಗುವುದಿಲ್ಲ.
13. ಅಸ್ತಮಾ ಹಾಗೂ ಹೃದಯ ತೊಂದರೆ ಇರುವವರು ತಣ್ಣೀರಿನ ಎದೆ ಪಟ್ಟಿಯನ್ನು (cold chest pack) ದಿನಕ್ಕೆ 20 ನಿಮಿಷ ಎರಡು ಬಾರಿ ಹಾಕಿಕೊಳ್ಳಬೇಕು.
14. ಅಲೋವೆರಾ ಜ್ಯೂಸ್ (ಲೋಳೆರಸ) 50ml ಸೇವಿಸಿ ಇದು ಜೀರ್ಣಕ್ರಿಯೆಗೆ ಒಳ್ಳೆಯದು, ವಾರಕ್ಕೊಮ್ಮೆ ಲೋಳೆರಸ ಮೈಗೆ ಹಚ್ಚಿಕೊಂಡು 30 ನಿಮಿಷ ಬಿಟ್ಟು ಸ್ನಾನ ಮಾಡಿದರೆ ದೇಹ ತಂಪಾಗಿರುತ್ತದೆ. ಆಹಾರದಲ್ಲಿ ಹಸಿ ತರಕಾರಿ, ಮೊಳಕೆ ಕಾಳುಗಳು ಇರಲಿ, ರಾತ್ರಿ ಬೇಗ ಮಲಗಿ ಬೇಗ ಏಳುವ ಅಭ್ಯಾಸ ಇಟ್ಟುಕೊಳ್ಳಿ.
15. ಹತ್ತಿ ಬಟ್ಟೆಗಳನ್ನು ಉಪಯೋಗಿಸಿ. ಬೇಸಿಗೆಯಲ್ಲಿ ಸೊಳ್ಳೆಗಳ ಕಾಟದಿಂದ ಪಾರಾಗಲು ಕಾಲಿಗೆ ಮತ್ತು ಕೈಗೆ ಬೇವಿನ ಎಣ್ಣೆ ಹಚ್ಚುವುದು ಸೂಕ್ತ.

ಈ ರೀತಿಯ ಅಭ್ಯಾಸಗಳಿಂದ ಕೆಲಸದ ಜೊತೆಗೆ ಆರೋಗ್ಯವನ್ನು ಸಹ ಕಾಪಾಡಿ ಕೊಂಡಂತಾಗುತ್ತದೆ.

ವಾಯುಪಡೆಯಲ್ಲಿ ಸಾಹಸಿ ತರುಣಿಯರು

ಡಾ. ವಿ. ಪ್ರಶಾಂತ, ರಾ.ಯು.ಯೋ.



ಕಾರ್ಗಿಲ್ ಯುದ್ಧಭೂಮಿ ಹೊಕ್ಕ ಭಾರತದ ಪ್ರಥಮ ಪೈಲಟ್ ಗುಂಜನ್ ಸೆಕ್ಸೇನಾ ಅವರ ಸಾಧನೆಗೆ ಚಾರಿತ್ರಿಕ ಮಹತ್ವವಿದೆ. ಯುದ್ಧಭೂಮಿ ಪ್ರವೇಶಿಸಿದ ಮೊದಲ ಪೈಲೆಟ್ ಎನ್ನುವ ಸಾಧನೆಯಾಚೆಗೂ ಗುಂಜಾನ್ ಹಾಗೂ ಅವರ ಸಹವರ್ತಿ ಹೆಣ್ಣು ಮಕ್ಕಳ ಸಾಧನೆ "ವಾಯುಪಡೆಗೆ ಮಹಿಳೆಯರ ಹೆಜ್ಜೆ ಇಟ್ಟ ಹಿರಿಮೆ" ಬಂದಿದೆ. ವಾಯುಪಡೆಯಲ್ಲಿ ಮೊದಲ ಬಾರಿಗೆ ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸಿದ ಈ ಸಾಹಸಿಗಳು ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಸಮಾನ ಅವಕಾಶ ಇರಬೇಕೆನ್ನುವ ಅಗತ್ಯವನ್ನು ಒತ್ತಿ ಹೇಳುತ್ತಾರೆ. 1992ರಲ್ಲಿ 'ನಿಮ್ಮ ಕನಸುಗಳಿಗೆ ರೆಕ್ಕೆ ಕಟ್ಟುವೆವು' ಎಂಬ ಘೋಷವಾಕ್ಯದೊಡನೆ ವಾಯುಪಡೆಯಲ್ಲಿ ಮಹಿಳೆಯರಿಗೆ ಸೇವೆಸಲ್ಲಿಸುವ ಅವಕಾಶ ನೀಡಲಾಯಿತು. ಧೈರ್ಯದಿಂದ ಪ್ರವೇಶಿಸಿದ ಮೊದಲ ತಂಡದಲ್ಲಿದ್ದ ಚಂಡೀಘಡದ ಫ್ಲೈಟ್ ಕೆಡೆಟ್ ಹರಿತಾ ಕೌರ್ ಡಿಯೋಲ್, ಬೆಂಗಳೂರಿನ ಯಲಹಂಕ ಏರ್‌ಪೋರ್ಸ್ ವಾಯುಪಡೆಯ 'ಆವ್ರೋ' ಬೃಹತ್ ಸಾರಿಗೆ ವಿಮಾನವನ್ನು ಹಾರಿಸಿದ ವಾಯುಪಡೆಯ ಮೊಟ್ಟಮೊದಲ ಮಹಿಳಾ ಪೈಲೆಟ್ ಆಗಿದ್ದಾರೆ. ಆಕೆಯ ಬ್ಯಾಚ್‌ಮೇಟ್‌ಗಳಾಗಿದ್ದ ಅರ್ಚನಾ ಕಪೂರ್, ಬಿಂದು ಸೆಬಾಸ್ಟಿಯನ್ ಏಕಾಂಗಿಗಳಾಗಿ ಆವ್ರೋ ವಿಮಾನವನ್ನು ಚಲಾಯಿಸಿದ್ದರು. ಪ್ರಥಮ ತಂಡದಲ್ಲಿದ್ದ ಬಾಕಿ ನಾಲ್ವರು ತರುಣಿಯರೆಂದರೆ ಭೂಪಾಲದ ಪ್ರಿಯಾ ನಲಗುಂದ್‌ವಾರ್, ಮುಂಬಯಿಯ ಪಮೇಲಾ ರಾಡ್ರಿಕ್ಸ್, ದಿಲ್ಲಿಯ ಅನಿತಾ ಸಿನ್ಹ ಮತ್ತು ಕೇರಳದ ಪ್ರಿಯಾ ಪಾಲ್ ಅವರಾಗಿದ್ದಾರೆ. ಹೆಲಿಕಾಪ್ಟರ್ ಪೈಲೆಟ್‌ಗಳಾದ ಜೆರಿಲ್ ದತ್ತಾ, ಸಿಮ್ರನ್ ಪಾಲ್ ಇದೇ ತಂಡದಲ್ಲಿದ್ದರು. ಒಟ್ಟು 9 ಜನರ ಮಹಿಳಾ ತಂಡ ಇತಿಹಾಸ ನಿರ್ಮಾಣ ಮಾಡಿದರು. ಹೀಗೆ ಇವರು ವಾಯುಪಡೆಯಲ್ಲಿ ಪಾದಾರ್ಪಣೆ ಮಾಡಿ ಎಲ್ಲಾ ಕ್ಷೇತ್ರವೂ ಮಹಿಳೆಯರಿಗೆ ಮುಕ್ತ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಪ್ರಸ್ತುತ ವಾಯುಪಡೆಯಲ್ಲಿ 1650ಕ್ಕೂ ಹೆಚ್ಚು ಮಹಿಳೆಯರಿದ್ದಾರೆ. 2016ರಲ್ಲಿ ಫ್ಲೈಯಿಂಗ್ ಆಫೀಸರ್‌ಗಳಾದ ಅವನಿ ಚತುರ್ವೇದಿ, ಭಾವನಾ ಕಾಂತ್ ಮತ್ತು ಮೋಹನ ಸಿಂಗ್ ಭಾರತದ ಜೆಟ್ ಫೈಟರ್‌ನ ಮೊಟ್ಟಮೊದಲ ಮಹಿಳಾ ಪೈಲಟ್‌ಗಳಾಗಿದ್ದಾರೆ.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

When Downs had finished, Johnson said firmly, "Wil, give that serum!" Dr Edgar Leifer, Dr. Gasals' physician, and the medical staff at Columbia-Presbyterian Hospital had also been holding repeated conferences. This word tipped the balance in favour of using the antiserum. That night, the anti-serum began flowing, drop by drop, into Jordi Casals' veins. In the morning, there was little change. All through the day, the scientists at Yale and Columbia wondered if they had done the right thing.

The next morning, Sonja Buck ley examined the tissue cultures which she had infected with serum from Jordi Casals. Every cell carpet was ravaged by the Lassa virus. He had the disease. That morning, he took a definite turn for the better. His temperature fell. After June 26, there was no fever. The relief at Yale and Columbia was immense. Dr Robert Shope, one of the Yale experts visiting Casals, used an expression Casals will always remember: "Jordi, we were very frightened." Scientists don't use those words often. ON HEARING the news about Casals, the New York office of the US Public Health Service telephoned John Frame. They were worried. It was one thing for a mission nurse to get Lassa fever in Africa, quite another when the disease was contracted in the United States. Would the Lassa virus now move out of the hospital and into the streets? Dr Frame shared this concern, and together they improvised a procedure to be put into effect at international airports. Travellers returning from Nigeria would be questioned extensively. If there was any indication whatsoever of illness, they would be required to get in touch with Frame for a thorough examination. The Centre for Disease Control of the Public Health Service in Atlanta joined in the alert. A new Rs 1.9 crore "hot" laboratory had just been completed there, and Lassa virus became its first assignment. Dr Shope shipped a live virus from Yale by special messenger with a note warning Atlanta of its long life and potency. In the new facility, specimens were untouched by human hands. Conveyor belts brought them into the laboratory through long tunnels and fed them into airtight "isolators"—large steel tanks with thick glass windows for visibility. In the windows were portholes opening into arm-length rubber gloves. The scientists placed their arms in the gloves to work on animal or tissue cultures inside the isolators.

The building had special air-locks and filters. Anyone entering the inner chamber to work on material in the isolators had to change his clothes in a special room, disposable garments and, on leaving, have a shower and stand in front of ultraviolet light. No materials came out of the building without being sterilized or incinerated. Yale, redoubling its safety measures, continued its own studies.

To be continued......

ಪುಸ್ತಕ ಪರಿಚಯ : ಜಲಯುದ್ಧ (ಕಾದಂಬರಿ)



– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ಜಾಣಗೆರೆ ವೆಂಕಟರಾಮಯ್ಯ

ಪತ್ರಿಕೆ, ಸಾಹಿತ್ಯ, ಸಂಸ್ಕೃತಿ, ಕೃಷಿ ಮತ್ತು ಕನ್ನಡಪರ ಹೋರಾಟಗಳಲ್ಲಿ ಸರ್ವಾಂಗೀಣವಾಗಿ ತೊಡಗಿಸಿಕೊಂಡವರು. ಹಿರಿಯರೂ, ನೇರ, ದಿಟ್ಟ ವ್ಯಕ್ತಿತ್ವದ ಶ್ರೀಯುತ ಜಾಣಗೆರೆ ವೆಂಕಟರಾಮಯ್ಯ ಅವರಾಗಿದ್ದಾರೆ. ಬಹುಮುಖಿ ನೆಲೆಯಲ್ಲಿ ಗುರ್ತಿಸಿಕೊಂಡಿರುವ ಶ್ರೀಯುತ ಜಾಣಗೆರೆ ಅವರು ಕತೆ, ಕಾದಂಬರಿ, ಇತಿಹಾಸ, ಪ್ರವಾಸ ಕಥನ, ವಿಚಾರ ಮಂಥನ ಹೀಗೆ ಹಲವು ಸಾಹಿತ್ಯ ಪ್ರಕಾರಗಳ ಬರವಣಿಗೆಯಲ್ಲಿ ಹೆಸರಾದವರು. ಶಶಿ ಪಬ್ಲಿಕೇಷನ್ ಅವರು ಪ್ರಕಟಿಸಿರುವ ಇವರ 'ಜಲಯುದ್ಧ' ಕಾದಂಬರಿಯು ಒಳಿತು–ಕೆಡುಕುಗಳ ನಡುವಿನ ಸಂಘರ್ಷದ ಕಥೆಯಿಂದ ಕೂಡಿದೆ. ಮತ್ತು ಅಪಮೌಲ್ಯಗಳ ನಡುವೆ ಮಾನವೀಯತೆ, ಸ್ವಾರ್ಥಗಳ ನಡುವೆ ನಿರಂತರ ಕದನದ ಚಿತ್ರಣವಿದೆ. ವಿಚಾರವಾದಿಗಳಾದ ಡಾ. ಬಂಜಗೆರೆ ಜಯಪ್ರಕಾಶ್ ಅವರು ಮುನ್ನುಡಿಯಲ್ಲಿ ಈ ಕಾದಂಬರಿಯನ್ನು ವಿಶ್ಲೇಷಿಸಿದ್ದಾರೆ. ಹಣ, ಅಧಿಕಾರ, ಸುಖ, ಸೌಭಾಗ್ಯಗಳನ್ನು ಪಡೆಯುವುದಕ್ಕೆ ನೀತಿ–ಅನೀತಿಗಳ ನಡುವೆ ನಡೆಯುವ ತಾರತಮ್ಯ ಭಾವಗಳ ಸೃಷ್ಟಿಯಾಗುವುದನ್ನು ಈ ಕಾದಂಬರಿಯಲ್ಲಿ ಮಿಳಿತವಾಗಿದೆ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಅಂತರ ರಾಜ್ಯ ಜಲವಿವಾದಗಳು ಜೀವಂತವಾಗಿರುವುದನ್ನು ಈ ಕಾದಂಬರಿಯು ವಿವರವಾಗಿ ತಿಳಿಸುತ್ತದೆ. ಕೃಷ್ಣಾ, ಕಾವೇರಿ, ಮಹದಾಯಿ, ಹೀಗೆ ನದಿಗಳ ಜೊತೆ ಕನ್ನಡಿಗರ ಬದುಕು ಬೆಸೆದುಕೊಂಡಿರುವ ಬಗೆಯನ್ನು 'ಜಲಯುದ್ಧ' ಕಾದಂಬರಿ ಕರ್ನಾಟಕದ ವಿವಿಧ ವಿಷಯ–ವಿಚಾರಗಳ ಚರ್ಚೆಯಿಂದ ಕೂಡಿದೆ. ಈ ಕಾದಂಬರಿಯ ಮುಖೇನ ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿ, ನೆಲೆ–ಜಲದ ಸ್ವಾರಸ್ಯಕರ ಘಟನೆಗಳಿಂದ ಕಾದಂಬರಿ ಓದಿಸಿಕೊಂಡು ಹೋಗುವ ಗದ್ಯ ಬರವಣಿಗೆ ಪ್ರಿಯವಾಗುತ್ತದೆ. ಕನ್ನಡ ಸಾಹಿತ್ಯ ಲೋಕಕ್ಕೆ ಸೃಜನಶೀಲ ಕೃತಿಯೊಂದನ್ನು ಶ್ರೀಯುತ ಜಾಣಗೆರೆ ಅವರು ನೀಡಿದ್ದಾರೆ. ಅವರಿಗೆ ಗಾಂಧೀ ಭವನದ ಪರವಾಗಿ ಅಭಿನಂದನೆಗಳು.

ಗಾಂಧಿ ಭವನದಿಂದ ಪ್ರಕಟವಾಗುತ್ತಿರುವ ಬಾಪು ಸಂಚಿಕೆಯಲ್ಲಿನ ಅತ್ಯಮೂಲ್ಯವಾದ ಮಾಹಿತಿಯುಳ್ಳ ಲೇಖನಗಳು ಮಾರ್ಗದರ್ಶಕವಾದುದು, ಓದಲೇಬೇಕಾದವು ಉಪಯುಕ್ತವಾದುದಾಗಿದೆ. ನಮ್ಮ ಭಾರತದ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೆ ಅಮರರಾದಂತಹ ಮಹಾಪುರುಷರ ಪರಿಚಯವುಳ್ಳ ಲೇಖನ, ಮಹಾತ್ಮ ಗಾಂಧಿ ಅವರ ತತ್ವ ಸಿದ್ಧಾಂತ ಅವರ ಜೀವನಾನುಭವದ ಸಾರವನ್ನು ಸಮಾಜದ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಾದ ಪರಿಸ್ಥಿತಿ ಇಂದಿನ ಪೀಳಿಗೆಗೆ ಅನಿವಾರ್ಯವಾಗಿದೆ. ಸಂಚಿಕೆಯು ಓದಿನ ಆಸಕ್ತಿಯನ್ನು ಇಮ್ಮಡಿಗೊಳಿಸುತ್ತದೆ. ಸಂಪಾದಕರಾದ ಇಂದಿರಾ ಕೃಷ್ಣಪ್ಪ ಅವರಿಗೆ ಅಭಿನಂದನೆಗಳು.

ಎಂ.ಕೆ. ಗೋವಿಂದರಾಜು, ಮತ್ತಿಕೆರೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಮಾಸಿಕದಲ್ಲಿ ಆಹಾರ ಪದ್ಧತಿ, ಪ್ರಕೃತಿ ಚಿಕಿತ್ಸೆಯ ಕುರಿತಾದ ಲೇಖನಗಳು ಉಪಯುಕ್ತವಾದುದಾಗಿವೆ. ಪಂಡಿತ್ ಭೀಮಸೇನ ಜೋಷಿ, ಸುಭಾಷ್‌ಚಂದ್ರ ಬೋಸ್, ದ.ರಾ. ಬೇಂದ್ರೆ ಅವರ ಲೇಖನಗಳು ಸೊಗಸಾಗಿ ಮೂಡಿಬಂದಿದೆ.

ಡಾ. ವಿ.ಎಸ್. ಪಾರ್ವತಿ

ಇತಿಹಾಸದಲ್ಲಿ ಈ ದಿನ ಮೊದಲ ವಿಜ್ಞಾನ ಪತ್ರಿಕೆ ಆರಂಭ

ಜಗತ್ತಿನ ಅತಿ ಹಳೆಯ ವಿಜ್ಞಾನ ಸಂಸ್ಥೆ ಇಂಗ್ಲೆಂಡಿನ ರಾಯಲ್ ಸೊಸೈಟಿ. ಇದು ತನ್ನ ಶಾಖೆಯನ್ನು ಭಾರತವೂ ಸೇರಿದಂತೆ ಎಲ್ಲಾ ಕಾಮನ್‌ವೆಲ್ತ್ ದೇಶಗಳಲ್ಲಿಯೂ ಹೊಂದಿದೆ. 1660ರಲ್ಲಿ ಲಂಡನ್‌ನಲ್ಲಿ ಆರಂಭವಾದ ಈ ಸಂಸ್ಥೆ 1665, ಮಾರ್ಚ್ 03ರ ಈ ದಿನ ತನ್ನ ಮೊದಲ ವಿಜ್ಞಾನ ಪತ್ರಿಕೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಹೊರತಂದಿತ್ತು. ಇದು ಇಂದಿಗೂ ಅತಿ ಹೆಚ್ಚು ಕಾಲ ಪ್ರಕಟವಾದ ಮತ್ತು ಅತಿ ಹಳೆಯ ಪತ್ರಿಕೆ ಎನ್ನುವ ಖ್ಯಾತಿಯನ್ನು ಹೊಂದಿದೆ. ಹೆನ್ರಿ ಓಲ್ಡೆನ್‌ಬರ್ಗ್ ಇದರ ಸಂಸ್ಥಾಪಕ ಸಂಪಾದಕರಾಗಿ ಪ್ರಾರಂಭದ ದಿನಗಳಲ್ಲಿ ಸಂಚಿಕೆ ಹೊರ ತಂದಿದ್ದರು.

ಸೌಜನ್ಯ : ಕನ್ನಡ ಪ್ರಭ ದಿ.06.03.2021

ಬಾಪು ಪ್ರಪಂಚ ಪ್ರತಿಯೊಂದು ಸಂಚಿಕೆಯಲ್ಲೂ ವಿಭಿನ್ನ ವಸ್ತುವಿಷಯಗಳನ್ನು ಸಮಯೋಚಿತವಾಗಿ ಪ್ರಕಟವಾಗುತ್ತಿದೆ. ಫೆಬ್ರವರಿ ತಿಂಗಳ ಸಂಚಿಕೆ ಸುಂದರವಾಗಿ ಮೂಡಿಬಂದಿದ್ದು, ಇಲ್ಲಿ ವಿಶೇಷವಾಗಿ ಆಯಾ ಕಾಲಘಟ್ಟದ ಲೇಖಕರ ಪರಿಚಯಿಸುತ್ತದೆ. ಪತ್ರಿಕೆ ಒಂದು ನಿರ್ದಿಷ್ಟ ವಿಷಯಕ್ಕೆ ಸೀಮಿತಗೊಳ್ಳದೆ, ಪ್ರತಿ ಸಂಚಿಕೆಯಲ್ಲಿ ವಿಶೇಷ, ವಿಭಿನ್ನತೆಗಳಿಂದ ಕೂಡಿದ ಲೇಖನಗಳು ಪ್ರಕಟವಾಗುತ್ತಿದೆ. ಜನರಿಗೆ ಉಪಯುಕ್ತ ಮಾಹಿತಿಗಳು ಪತ್ರಿಕೆಯಲ್ಲಿ ದೊರಕುತ್ತವೆ.

ಮಹೇಶ್, ಬೆಂಗಳೂರು

ಡಾ. ಎಚ್.ಎಸ್. ದೊರೆಸ್ವಾಮಿ ಅವರ 'ಸರ್ವಾಧಿಕಾರಿಗಳಿಗೆ ತಕ್ಕಶಾಸ್ತಿ' ಲೇಖನವು ಜಯಪ್ರಕಾಶ್ ನಾರಾಯಣ, ಅವರ ಸಮಾಜವಾದಿ ಹೋರಾಟ ಮತ್ತು ಸೆರಮನೆಯಲ್ಲಿ ಸಾಮಾಜಿಕ ಹೋರಾಟಗಾರರ ಸಂಗಾತಿತನ, ಆಗಿನ ಪ್ರಧಾನಿ ಇಂದಿರಾಗಾಂಧಿ ಅವರು ಹೇರಿದ ತುರ್ತು ಪರಿಸ್ಥಿತಿ, ವಿವಿಧ ವಿಷಯಗಳನ್ನು ಸವಿವರವಾಗಿ ತಿಳಿಸಿದ್ದಾರೆ. ರಾಜಕೀಯ ವಿಚಾರಧಾರೆಗಳಲ್ಲಿ ಭಿನ್ನತೆ ಹೊಂದಿದ್ದ ಇಂದಿರಾ ಮತ್ತು ಜೆ.ಪಿ ಅವರ ನಡುವಿನ ಸೈದ್ಧಾಂತಿಕ ವಿರೋಧಾಭಾಸಗಳನ್ನು ತಿಳಿಸಿದ್ದಾರೆ.

ಹರೂರು ರವಿ, ಚನ್ನಪಟ್ಟಣ

ಬಾಪು ಪ್ರಪಂಚ ಪತ್ರಿಕೆಯಲ್ಲಿನ ಕೆರಗೋಡು ಪ್ರಸನ್ನ ಕುಮಾರ್ ಅವರ ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ, ಸುಮಂಗಲ ಎಸ್. ಮುಮ್ಮಿಗಟ್ಟಿ ಅವರ ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು ಲೇಖನವು ಸಹೃದಯರಿಗೆ ಪರಿಣಾಮಕಾರಿಯಾದ ಅನುಭವವನ್ನು ಕಟ್ಟಿಕೊಡುತ್ತವೆ. ಈ ಇಬ್ಬರ ಲೇಖಕರಿಗೂ ವಂದನೆಗಳು.

ಡಾ. ಚನ್ನವೀರೇಗೌಡ ವಿವೇಕಾನಂದ ಕಾಲೇಜು

ಪ್ರೊ. ಲೀಲಾ ವಾಸುದೇವ್ ಅವರು ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮದಿನದ ಅಂಗವಾಗಿ ಬರೆದ ಲೇಖನ ಸ್ವಾತಂತ್ರ್ಯ ಸಂಗ್ರಾಮದ ಧ್ಯೇಯ, ದಿಟ್ಟ ಮನೋಭಾವವನ್ನು ತಿಳಿಸುತ್ತದೆ. ಸ್ವತಂತ್ರ ಸಂಗ್ರಾಮದ ಸಂದರ್ಭದಲ್ಲಿನ ಹೋರಾಟದವನ್ನು ಏಕಾಂಗಿಯಾಗಿ ನೇತಾಜಿ ಹೇಗೆ ಮಾಡಿದ್ದರು, ಭಾರತೀಯ ರಾಷ್ಟ್ರೀಯ ಸೇನೆಯ ಸ್ಥಾಪನೆಯ ವಿಚಾರಗಳನ್ನು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಇಂಥ ಲೇಖನ ಪ್ರಕಟಿಸಿದ ಗಾಂಧಿ ಭವನಕ್ಕೆ ಹಾಗೂ ಲೇಖಕರಿಗೆ ವಂದನೆಗಳು.

ಸಹನ ಮಹಂತೇಶ್, ದೊಡ್ಡಬಳ್ಳಾಪುರ

ಬಾಪು ಪ್ರಪಂಚದ ಫೆಬ್ರವರಿ ಸಂಚಿಕೆಯಲ್ಲಿ ಮಹಾನ್ ಸಾಹಿತಿಯ ದ.ರಾ. ಬೇಂದ್ರೆ ಅವರ ಕುರಿತಾದ ಲೇಖನವು ಬಹು ಸೊಗಸಾಗಿ ಮೂಡಿ ಬಂದಿದೆ.

ಸತ್ಯಮಂಗಲ ಮಹದೇವ

ಅಕ್ಷರದವ್ವ : ಸಾವಿತ್ರಿ ಬಾಪುಲೆ ಅವರ ಲೇಖನ ಉತ್ತಮವಾಗಿದೆ. ಇದನ್ನು ದಯಮಾಡಿ ಸಂಕ್ಷಿಪ್ತವಾಗಿ ಮುಂದುವರೆಸಿ.

ಗಿರಿಜಾ ಹೆಗ್ಡೆ

ವೇಮಗಲ್ ಸೋಮಶೇಖರ್ ಅವರು ಬರೆದಿರುವ ಗಾಂಧಿ ಮತ್ತು ದಲಿತರ ದೇವಸ್ಥಾನ ಪ್ರವೇಶ ಲೇಖನವು ತುಂಬಾ ಉತ್ತಮವಾಗಿದೆ.

ತೇಜಸ್ ಹೆಚ್.

ಬಾಬು ಪ್ರಪಂಚ ಪತ್ರಿಕೆಯಲ್ಲಿ ಲೇಖಕಿ ಇಂದಿರಾ ಕೃಷ್ಣಪ್ಪ ಇವರು ಪ್ರಕಟಿಸುತ್ತಿರುವ ಅಂಬೇಡ್ಕರ್ ಮತ್ತು ಸಂವಿಧಾನ ಲೇಖನವು ವಿದ್ಯಾರ್ಥಿಗಳಿಗೆ ಅತ್ಯಂತ ಮಹತ್ವಪೂರ್ಣವಾಗಿದೆ .

ಕೆ .ಸುರೇಶ್

Statement About Ownership and other particulars of Bapu Prapancha, Bengaluru as required under Rule of the registration of Newspapers (Press & Registration Book 1867)

1.	Place of Publication	Bengaluru
2.	Periodically Publication	Monthly
3.	Printer's Name	Creativegeekz
	Nationality	Indian
	Address	# 58, Yadhava College Road, Madhavanagara,
	Bengaluru - 560001	
		Ph : 080 40927049
4.	Publisher's Name	Indira Krishnappa
	Nationality	Indian
	Address	Karnataka Gandhi Smaraka Nidhi, Gandhi Bhavana, Kumarapark East, Bengaluru - 560001
5.	Editor in Chief	Dr. Wooday P. Krishna
	Address	Karnataka Gandhi Smaraka Nidhi, Gandhi Bhavana, Kumarapark East, Bengaluru - 560001
6.	Name & Address of individuals who own the Newspaper	Karnataka Gandhi Smaraka Nidhi, Gandhi Bhavana, Kumarapark East, Bengaluru - 560001

I Indira Krishnappa hereby declare that the particulars given above are true to the best of my knowledge and belief

Indira Krishnappa
Pulisher

Date 15.3.2021

ಗಾಂಧಿ ಭವನದ ಕಾರ್ಯಕ್ರಮಗಳು



ಕಸ್ತೂರ ಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅರಸೀಕೆರೆಯಲ್ಲಿ ದಿ. 16.02.2021 ರಂದು ಮದ್ಯ ವ್ಯಸನಮುಕ್ತ ಮತ್ತು ಮೌಲ್ಯಯುತ ಸಮಾಜಕ್ಕಾಗಿ ಯುವಜನತೆ ಹಾಗೂ ಶ್ರೀಮತಿ ಯಶೋಧರಮ್ಮ ದಾಸಪ್ಪ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು, ಶಾಸಕರಾದ ಶ್ರೀ ಕೆ. ಎಂ ಶಿವಲಿಂಗೇಗೌಡ ಅವರು ವಹಿಸಿದ್ದರು. ಕ.ಗಾಂ.ಸ್ಮಾ.ನಿಧಿ ಅಧ್ಯಕ್ಷರಾದ ಡಾ. ವೂಡೇ ಪಿ ಕೃಷ್ಣ ಅವರು ವ್ಯಸನ ಮುಕ್ತ ಸಮಾಜಕ್ಕೆ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಕೊಡುಗೆ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಶ್ರೀಮತಿ ಸುನಂದಾ ಜಯರಾಂ ರೈತಮುಖಂಡರು ಇವರಿಗೆ ಯಶೋಧರಮ್ಮ ದಾಸಪ್ಪ ಪ್ರಶಸ್ತಿಯನ್ನು ಹೆಚ್ಚುವರಿ ಪ್ರಾದೇಶಿಕ ಆಯುಕ್ತರಾದ ಶ್ರೀಮತಿ ಕೆ. ಎಂ ಗಾಯತ್ರಿ ಪ್ರದಾನ ಮಾಡಿದರು. ಕಸ್ತೂರಬಾ ಗಾಂಧೀ ಆಶ್ರಮದ ಟ್ರಸ್ಟಿ ಪ್ರೊ. ಜಿ.ಬಿ ಶಿವರಾಜು ಉಪಸ್ಥಿತರಿದ್ದರು.



ವಿವೇಕಾನಂದ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ದಿ.18–2–2021 ರಂದು ಗಾಂಧೀ ಅಧ್ಯಯನ ಕೇಂದ್ರವನ್ನು ಆರಂಭಿಸಲಾಯಿತು ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ ಕೃಷ್ಣ ಅವರು ಉದ್ಘಾಟಿಸಿದರು. ಜನತಾ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಡಾ ಸಿ ಎಸ್ ಮಂಜೇಗೌಡ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಪಂಕಜ ಮತ್ತು ಪ್ರಾಂಶುಪಾಲರಾದ ಡಾ. ಬಿ. ಎಸ್ ಚನ್ನವೀರೇಗೌಡ ಅವರು ಉಪಪ್ರಾಂಶುಪಾಲರಾದ ಪ್ರೊ. ಕೆ.ಪಿ ಪುಷ್ಪಲತಾ ಅವರು ಉಪಸ್ಥಿತರಿದ್ದರು.





ಭಾರತೀ ಬೈಲು ಮೂಡಿಗೆರೆಯಲ್ಲಿ ಕಸ್ತೂರಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅರಸೀಕೆರೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಲಿ, ಕ.ಗಾಂ.ಸ್ಮಾ.ನಿಧಿ, ರಾಷ್ಟ್ರೀಯ ಸೇವಾ ಯೋಜನೆ ಇವರ ಸಂಯುಕ್ತ ಆಶ್ರಯದಲ್ಲಿ ದಿ. 21 ಮತ್ತು 22 ನೇ ಫೆಬ್ರವರಿ 2021 ರಂದು ಮದ್ಯ ವ್ಯಸನಮುಕ್ತ ಮತ್ತು ಮೌಲ್ಯಯುತ ಸಮಾಜಕ್ಕಾಗಿ ಯುವಜನತೆ, ಗಾಂಧಿ ತತ್ವ ಪ್ರಣೀತ ಶಿಬಿರ ಹಾಗೂ ಮಾತೃದಿವಸ ಆಚರಣೆಯಲ್ಲಿ ಕ.ಗಾಂ.ಸ್ಮಾ.ನಿಧಿ. ಉಪಾಧ್ಯಕ್ಷರಾದ ಎನ್ ಆರ್ ವಿಶುಕುಮಾರ್ ಅವರು ಉದ್ಘಾಟಿಸಿದರು, ಅಧ್ಯಕ್ಷರಾದ ನಾಡೋಜ ಡಾ. ವೂಡೇ ಪಿ ಕೃಷ್ಣ ಅವರು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕಸ್ತೂರಬಾ ಗಾಂಧೀರಾಷ್ಟ್ರೀಯ ಟ್ರಸ್ಟ್ ನ ಪ್ರತಿನಿಧಿ ಡಾ. ಉಷಾ ಅಬ್ರಾಲ್ ಮತ್ತು ಸರೋಜ ತುಳಸೀದಾಸಪ್ಪ ಮತ್ತೆಲ್ಲಾ ಗಣ್ಯರು ಉಪಸ್ಥಿತರಿದ್ದರು.



ಡಾ. ಗಣನಾಥಶೆಟ್ಟಿ ಎಕ್ಕಾರು ರಾಷ್ಟ್ರೀಯ ಸೇವಾ ಯೋಜನೆ, ಜಂಟಿ ಕಾರ್ಯದರ್ಶಿ ಅವರು ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾವಣೆಗೊಂಡ ಸಂದರ್ಭದಲ್ಲಿ ದಿ.02–03–2021 ರಂದು ಬೀಳ್ಕೊಡುಗೆ ಕಾರ್ಯಕ್ರಮ ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಡಾ. ಪುಟ್ಟಸ್ವಾಮಿ, ಸಾಹಿತಿಗಳು, ಹೆಚ್.ಬಿ. ದಿನೇಶ್, ಸದಸ್ಯರು, ಡಾ. ಪೂರ್ಣಿಮಾ ಜೋಗಿ, ಡಾ. ಎಸ್. ರಾಮಲಿಂಗೇಶ್ವರ ಹಾಗು ಗಾಂಧಿ ಭವನದ ಸಿಬ್ಬಂದಿಗಳು ಚಿತ್ರದಲ್ಲಿದ್ದಾರೆ.



ಮೈಸೂರಿನ ಫಿನಿಕ್ಸ್ ಇಂಟರ್ ನ್ಯಾಷನಲ್ ಅಕಾಡೆಮಿಯಲ್ಲಿ ದಿನಾಂಕ 6.3.2021 ರಂದು ಏರ್ಪಡಿಸಿದ್ದ "ವ್ಯಸನಮುಕ್ತ ಸಮಾಜಕ್ಕಾಗಿ ಯುವಜನರು ಮತ್ತು ಗಾಂಧಿ ವಿಚಾರಗಳು ಪ್ರಸ್ತುತತೆ" ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಪ್ರೊ. ಚಂದ್ರಶೇಖರಗೌಡ, ಡಾ. ಎಂ.ಎಸ್. ಶೇಖರ್, ಪ್ರೊ. ಪ್ರಸನ್ನಕುಮಾರ್, ಪ್ರೊ. ಜಿ.ಬಿ. ಶಿವರಾಜು, ಕಾಲೇಜಿನ ಪ್ರಾಚಾರ್ಯರು, ಮಧ್ಯಪಾನ ಸಂಯಮ ಮಂಡಳಿಯ ಕಾರ್ಯದರ್ಶಿ ಶ್ರೀ ಹೊನ್ನನರಸಯ್ಯ ಪ್ರೊ. ಸಿದ್ದಪ್ಪ ಮೊದಲಾದವರು ಇದ್ದಾರೆ.



ದಿ.02-03-2021 ರಂದು ಜಾಲಹಳ್ಳಿಯ ಸೆಂಟ್ ಕ್ಲಾರೆಟ್ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಚೆನ್ನಮ್ಮ ಹಳ್ಳಿಕೇರಿ, ನಾಡೋಜ ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಡಾ. ಎನ್. ಮಾದೇಶ್, ರೆ. ಫಾದರ್ ಅಬ್ರಹಂ ಪಿ.ಜೆ., ಗಿರಿಜಾ ಹೆಗಡೆ ಪ್ರೊ ಮರಿಯಾ ಡಿಸೋಜ, ಪ್ರೊ. ಆರ್. ಆನಂದ್, ಡಾ. ಸಿದ್ದಲಿಂಗಪ್ಪ ದೇಶ್‌ಮುಖ್, ಶಶಿಕಲಾ, ಸುರೇಶ್, ವಿಠ್ಠಲ ತಳವಾರ, ಚಿತ್ರದಲ್ಲಿದ್ದಾರೆ.





ಆನೇಕಲ್ ತಾಲೂಕಿನ ಸರ್ಜಾಪುರದ ಸರ್ದಾರ್ ವಲ್ಲಭಭಾಯ್ ಪಟೇಲ್ ಪ್ರೀ ಯೂನಿವರ್ಸಿಟಿ ಕಾಲೇಜು ಆವರಣದಲ್ಲಿ ದಿ. 05.03.2021ರಂದು ಶುಕ್ರವಾರ ಕ.ಗಾಂ.ಸ್ಮಾ.ನಿಧಿ, ರಾ.ಸೇ.ಯೋ, ಜಿಲ್ಲಾ ನೆಹರು ಯುವಕೇಂದ್ರ ಬೆಂಗಳೂರು ನಗರ ಜಿಲ್ಲೆ ಇವರ ಸಹಯೋಗದೊಂದಿಗೆ ಸ್ವಚ್ಛ ಗ್ರಾಮ ಹಸಿರು ಗ್ರಾಮ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಡಾ.ಗಣನಾಥ ಶೆಟ್ಟಿ ಎಕ್ಕಾರು, ರಾ.ಸೇ.ಯೋ., ಸಿ ಮಹದೇವಯ್ಯ, ಎಸ್.ವಿ.ರವೀಂದ್ರ, ಇಂದಿರಾ ಕೃಷ್ಣಪ್ಪ, ಡಾ. ಪೂರ್ಣಿಮಾ ಜೋಗಿ, ಹೆಚ್. ರವೀಂದ್ರ, ಎನ್.ಟಿ. ಶ್ರೀನಿವಾಸ್ ರೆಡ್ಡಿ , ಡಾ. ಪ್ರಶಾಂತ ಹಾಗೂ ಮತ್ತಿತರರು ಭಾಗವಹಿಸಿದ್ದರು.





ಗಾಂಧಿ ಭವನದಲ್ಲಿ ದಿ. 08.03.2021ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಸುಂಧರಾ ಭೂಪತಿ, ಇಂದಿರಾ ಕೃಷ್ಣಪ್ಪ, ಗೌರವ ಕಾರ್ಯದರ್ಶಿ, ಡಾ. ಪೂರ್ಣಿಮಾ ಜೋಗಿ ಸು ಶ್ರೀ ಚೆನ್ನಮ್ಮ ಹಳ್ಳಿಕೇರಿ ಮತ್ತು 5 ಕಾಲೇಜುಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರು, [illegible] ಕಾರ್ಯಕರ್ತರು ಇದ್ದಾರೆ.



ತಿಪಟೂರಿನಲ್ಲಿ ದಿ.09-03-2021 ರಂದು ವ್ಯಸನ ಮುಕ್ತ ಸಮಾಜಕ್ಕಾಗಿ ಯುವಜನತೆ ಮತ್ತು ಗಾಂಧಿ ವಿಚಾರಗಳ ಪ್ರಸ್ತುತತೆ ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ ಕೃಷ್ಣ, ಶ್ರೀ ಇಮ್ಮಡಿ ಕರಿಬಸವದೇಶಿಕೇಂದ್ರ ಮಹಾಸ್ವಾಮಿಗಳು, ಆರ್. ವಿವೇಕಾನಂದ, ಆರ್.ಜಿ. ಚಂದ್ರಶೇಖರ್, ಪ್ರೊ. ಜಿ.ಬಿ. ಶಿವರಾಜು, ಎ. ಹನುಮನರಸಯ್ಯ, ಪ್ರೊ. ಸಾವಿತ್ರಿ ಹೊಸಮನಿ, ಎಂ.ಬಿ. ಶಿವಕುಮಾರ್, ಹೆಚ್.ಎಸ್. ಸಿದ್ದರಾಮಯ್ಯ ಬಿ. ಪ್ರತಾಪಸಿಂಗ, ಎ.ಬಿ. ಮಹಾಲಿಂಗಯ್ಯ ಭಾಗವಹಿಸಿದ್ದರು

ಪತ್ರಿಕಾ ವರದಿಗಳು

ಸುನಂದಾಗೆ 'ಯಶೋಧರಮ್ಮ ದಾಸಪ್ಪ' ಪ್ರಶಸ್ತಿ



ಗಾಂಧೀಜಿ ಅಧ್ಯಯನದಿಂದ ಭಾರತದ ಚಿತ್ರಣ ತಿಳಿಯಬಹುದು




ಗಾಂಧೀಜಿಯವರು ತಿಳಿಸಿದ ವಿಚಾರಗಳಲ್ಲಿ ವಿಶ್ವಕಂಡ ಶ್ರೇಷ್ಠ ವ್ಯಕ್ತಿ. ಪಾರದರ್ಶಕ ಜೀವನ ನಡೆಸಿದವರು. ಸತ್ಯ, ಅಹಿಂಸೆ, ಸತ್ಯಾಗ್ರಹ, ಸರ್ವೋದಯ ತತ್ವಗಳನ್ನು ನೀಡಿದರು. ಬಹುಜನ ಹಿತಾಯ, ಬಹುಜನ ಸುಖಾಯ ಎಂಬುದು ಅವರ ಧ್ಯೇಯವಾಗಿತ್ತು. ಅವರವರ ವ್ಯಕ್ತಿಯಿಂದ ಬದುಕು ಹಕ್ಕು ಪಡೆದುಕೊಳ್ಳಬೇಕು. ಸಮಸಮಾಜ ... ನಿರ್ಮಾಣವಾ... ಎಂಬುದು ...

Mar 6, 2

ಹೊಸ ದಿಗಂತ

ಸಾಹಿತ್ಯಕ್ಕೆ ಜೈನ ಕವಿಗಳ ಕೊಡುಗೆ ಅಪಾರ | ಗಾಂಧಿ ಅಹಿಂಸಾತತ್ವಕ್ಕೆ ಪ್ರೇರಕ

ಧರ್ಮದಿಂದ ಮಾನವತೆಯ ಸಾಕ್ಷಾತ್ಕಾರ




ಪ್ರಜಾವಾಣಿ — 6th March 2021



'ಗಾಂಧಿ ತತ್ವಗಳಿಗೆ ಜೈನ ಧರ್ಮ ಪ್ರೇರಕ'

ಮಹಿಳೆಯರಿಗೆ ಆದ್ಯತೆ



ವಿಜಯವಾಣಿ



ಪ್ರಜಾವಾಣಿ — 10th March 2021

ಇಮ್ಮಡಿ ಕರಿಬಸವ ದೇಶಿಕೇಂದ್ರ ಸ್ವಾಮೀಜಿ ಒತ್ತಾಯ

ಮದ್ಯ ಮಾರಾಟ ನಿಷೇಧಿಸಿ



ಸಜ್ಜನಿಕೆಯ ಗುಣ ಮೈಗೂಡಿಸಿ



● ಪ್ರಜಾವಾಹಿನಿ-ಟಿ.ದಾಸರಹಳ್ಳಿ

ಜಾಲಹಳ್ಳಿಯ ಸೈಂಟ್ ಕ್ಲಾರೆಟ್ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರ ಹಾಗೂ(ಕರ್ನಾಟಕ ಗಾಂಧಿ ಸ್ಮಾರಕ ನಿಧಿ) ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ಗಾಂಧಿ ಅಧ್ಯಯನ ಕೇಂದ್ರವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಲಾಯಿತು.

ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಮಾತನಾಡಿ ಗಾಂಧೀಜಿ ಅವರ ಹೋರಾಟದ ದಿನಗಳು ಹಾಗೂ ಅವರ ಸರಳ ಸಜ್ಜನಿಕೆ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಖಾದಿ ಬಟ್ಟೆ ವಿಚಾರವನ್ನು ತಿಳಿಸುತ್ತಾ ಜೈ ಜಗತ್ತು, ಸ್ವರಾಜ್ಯ, ವಿಶ್ವಶಾಂತಿಯ ಮಂತ್ರವನ್ನು ಘೋಷಿಸಿದರು ಗಾಂಧೀಜಿಯವರ ತತ್ವಸಿದ್ಧಾಂತಗಳನ್ನು ನಾವು ರೂಢಿಸಿಕೊಂಡು ಬದುಕಬೇಕು. ಹಿಂಸಾ

ವಿಜಯವಾಣಿ

ವಿದ್ಯಾರ್ಥಿಗಳಿಗೆ ಸಲಹೆ » ಸರ್ಜಾಪುರದಲ್ಲಿ ಸ್ವಚ್ಛ ಗ್ರಾಮ-ಹಸಿರು ಗ್ರಾಮ ತರಬೇತಿ ಕಾರ್ಯಾಗಾರ

ಗಿಡ-ಮರ ಬೆಳೆಸಿ ಪ್ರಕೃತಿ ಸಂರಕ್ಷಣೆಗೆ ಆದ್ಯತೆ ನೀಡಿ



Bengaluru Edi

ಪ್ರಕೃತಿ ರಕ್ಷಣೆ ಕಾರ್ಯದಲ್ಲಿ ವಿದ್ಯಾರ್ಥಿ... ಪ್ರವೃತ್ತರಾಗಬೇಕು: ಡಾ.ಗಣನಾಥ ಶೆ...

ಆನೇಕಲ್: ಯುವಕ ಯುವತಿಯರು ತಮ್ಮ ವಿದ್ಯಾರ್ಥಿ ಜೀವ... ಮರಗಳನ್ನು ಬೆಳೆಸಿ, ಪೋಷಿಸುವ ಕಾರ್ಯಗಳನ್ನು ತಮ್ಮದ್ದಾಗ... ಗಳಂತೆ ಭಾವಿಸಿ ಪ್ರಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃ... ಎಂದು ರಾಷ್ಟ್ರೀಯ ಸೇವಾ ಯೋಜನಾ ರಾಜ್ಯ ಕೋಶ ಯುವ... ಮತ್ತು ಕ್ರೀಡಾ ಇಲಾಖೆಯ ನಿಕಟಪೂರ್ವ ಜಂಟಿ ಕಾರ್ಯದರ್ಶಿ... ಗಣನಾಥ ಶೆಟ್ಟಿ ಎಕ್ಕಾರು ಕರೆ ನೀಡಿದರು.





ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

The brown one frowned at his disapproval. "You are Toby! You got to forget dat African stuff! Make white folks mad and scare niggers." He looked round the room and picked up an oddly shaped wooden thing with a slender black neck. "Fiddle!" he exclaimed. In their privacy, Kunta decided to repeat the sound. "Fiddle ..." he said tentatively. The brown began pointing at other objects "Bucket... chair..."-and Kunta repeated the sounds. After they had gone through more than a score of words, the brown one grunted: "You ain't as dumb as you looks." The lessons continued. In time Kunta was able not only to understand, but also to make himself understood to the brown one, who wished to be called "fiddler." One day, special shoes were brought to Kunta by a black man called Gideon. One shoe's front half was stuffed with cotton. Kunta put them on. He felt stinging sensations in his right half-foot as he walked gingerly round his hut, but finally he put his full weight on it and did not feel undue pain. That same week the fiddler heard from Luther, the black driver, that the toubob doctor now owned Kunta. He carefully explained the news to Kunta. "Luther says the massa got a deed to you from his brother who had you at first. Niggers here claim he a good massa," the fiddler continued, 'an' I seen worse. But ain't none of 'em no good.' At about this time, Kunta began keeping a calendar by dropping pebbles into a gourd. He guessed he had spent 12 moons on the first tou bob farm, so he dropped 12 pebbles into the gourd. Then he dropped in six more, making a total of 18 moons that he had been in the land of the toubob. Adding the 18 moons to his 17 rains when he was taken from Juffure, Kunta figured that he was now in his nineteenth rain.

WAR AND PEACE

Soon afterwards Kunta was told by an old black man who worked in a small vegetable garden, "Massa put you to workin' with me, " He showed Kunta how to hoe the weeds and pick off tomato worms and potato bugs.

To be continued...

Chronology of events of personal & Public life of Mahatma Gandhi

(year wise - from 1869)

1894 April. While preparing Dada Abdulla's case, he strove for a compromise. At last Tyeb Sheth agreed. An arbitrator was appointed, the case was argued before him and Dada Abdulla won. At the close of one year he was again in Durban intending to leave speedily for India. At a social gathering to bid him farewell, he saw the Natal Mercury and discovered that Government was about to introduce a Bill to disenfranchise the Indians.

May 22. At a meeting of the leading Indian merchants, Gandhi proposed the formation of a permanent organization to watch the interest of the Indians and to oppose the colour bar against them.

June 25. At the residence of Sheth Abdulla, with Sheth Haji Muhammad, foremost Indian leader of Natal in the chair, a meeting of Indians was held and it was resolved to offer opposition to the Franchise Bill. Gandhi outlined his plan

July 5. Entered into correspondence with Dadabhai Naoroji and requested him to help the cause of Indian residents in South Africa.

July 7. But all this failed to stop the Bill which was passed. Gandhi advised the people to send a petition to the Pretoria Colonial Secretary. It was forwarded to Lord Ripon. The Bill failed to receive Royal assent and was withdrawn. But shortly afterwards another Bill was introduced and Indians of Natal were disfranchised.

August 22. Founded Natal Indian Congress took up the secretaryship of the organization.

September 3. Admitted to Natal Supreme Court despite opposition by Natal Law Society.

December 19. Gandhi's "open letter" to members of the Legislative Council and Assembly of Natal was published

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India, Collection by : Dr. Poornima Jogi, N.S.S.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು

1. ಆರೋಗ್ಯ ರಹಸ್ಯ 10–00
2. ಕರ್ನಾಟಕದಲ್ಲಿ ಗಾಂಧೀ 5–00
3. ರಾಮನಾಮ 6–00
4. ಗಾಂಧೀ ಬಳಗದ ವಿದೇಶಿಯರು 40–00
5. ಆರೋಗ್ಯ 8–00
6. ಪ್ರಾರ್ಥನೆ 40–00
7. ಸತ್ಯಾಗ್ರಹ 8–00
8. ಮಹಿಳೆಯರಿಗಾಗಿ 8–00
9. ಪಂಚಾಯತ್ ರಾಜ್ 12–00
10. ಆದರ್ಶಗಳು 12–00
11. ನಮ್ಮ ಗಾಂಧೀ ತಾತ 22–00
12. ದೇವನಗರಿಯಲ್ಲಿ ಗಾಂಧೀ ಧ್ವನಿ 2–00
13. ನಮ್ಮ ಗಾಂಧೀ ತಾತ 15–00
14. ಹೋರಾಟ ಶ್ರೀ 40–00
15. ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು 3–00
16. ಗಾಂಧೀಜಿ ಜೀವನ ಚರಿತ್ರೆ 25–00
17. ಕುವೆಂಪು ಕಂಡ ಗಾಂಧೀ 25–00
18. ಉಪ್ಪಿನ ಸತ್ಯಾಗ್ರಹ 5–00
19. ಹಿಂದ್ ಸ್ವರಾಜ್ 50–00
20. ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ 25–00
21. ನನ್ನ ಕನಸಿನ ಭಾರತ 30–00
22. ಹಿಂದೂ ಧರ್ಮ 25–00
23. ಮಹಿಳೆಯರು 63–00
24. ಸ್ವಾತಂತ್ರ್ಯ 42–00
25. ಅಸ್ಪೃಶ್ಯತೆ 45–00
26. ಒಳ್ಳೆಯ ಜೀವನ 60–00
27. ಗಾಂಧೀ ಮತ್ತು ಕರ್ನಾಟಕ 200–00
28. ಸತ್ಯ 38–00
29. ವಿದ್ಯಾರ್ಥಿಗಳಿಗಾಗಿ 30–00
30. ಸರ್ವೋದಯ 30–00
31. ಖಾದಿ ಗ್ರಾಮೋದ್ಯೋಗ 58–00
32. ನನ್ನ ಬಾಲ್ಯದ ನೆನಪುಗಳು 52–00
33. ಗ್ರಾಮರಾಜ್ಯ ಆಡಳಿತ 5–00
34. ನನ್ನ ಕನಸಿನ ಸ್ವರಾಜ್ಯ 42–00
35. ಹಾಸ್ಯ ಮತ್ತು ಗಾಂಧೀ 44–00
36. ನನ್ನ ಆದರ್ಶಗ್ರಾಮ 5–00
37. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ 48–00
38. ಸತ್ಯಾಗ್ರಹಿ 40–00
39. ಗ್ರಾಮದಾನ ಗ್ರಾಮ ಸ್ವರಾಜ್ಯ 25–00
40. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ
41. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ 5–00
42. ಸತ್ಯಾಗ್ರಹ 5–00
43. ಹಿಂದ್ ಸ್ವರಾಜ್ 5–00
44. ಆರೋಗ್ಯ 5–00
45. ಮಹಾತ್ಮ ಗಾಂಧಿ ಪ್ರಸ್ತುತತೆ 10–00
46. ಬಹುರೂಪಿ ಗಾಂಧಿ 35–00
47. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ 30–00
48. ಕೃತಯುಗಿ ವಿನೋಬಾ ಭಾವೆ 15–00
49. ಮೋಹನ ತರಂಗ 40–00
50. ನಮ್ಮ ಗಾಂಧಿ ತಾತ 22–00
51. ಗೀತಾ ಪ್ರವಚನ 80–00
52. ಜೆ.ಪಿ. ಜೀವನ ಹಾದಿ 45–00
53. ಗಣ್ಯರು ಕಂಡಂತೆ ಗಾಂಧಿ 20.0
54. ಗೀತಾಮಾತೆ 80.00
55. ಲೋಕ ಚಿಂತಕರು 145.00
56. ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ 38.00
57. ಮಹದೇವ ದೇಸಾಯಿ 63.00
58. ಸಮಾಜವಾದ : ಗಾಂಧೀ ದೃಷ್ಟಿಕೋನ 15.00
59. ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ 28.00
60. ಗಾಂಧೀ ಬಳಗದ ವಿದೇಶಿಯರು 89.00
61. ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ 33.00
62. ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ 80.00
63. ಹುಕ್ಕೇರಿಕರ ರಾಮರಾಯರು 110.00
64. ಮಹಿಳೆಯರು 63.00
65. ನನ್ನ ಬಾಲ್ಯದ ನೆನಪುಗಳು 52.00
66. ನಯೀ ತಾಲೀಂ 58
67. Nayi Talim 58.00
68. Temple & Mosque 10–00
69. Rastrapita Mahatma Gandhi 25–00
70. Swarajya of My Dreams 5–00
71. Gandhi My Grand Father 5–00
72. Grand Pa Gandhi 5–00
73. Relevance of Gandhi 20–00
74. Vinoba Sage of the Age 20.00
75. Kasturba 33.00
76. Mahatma Gandhi and his Foreign Associates 87

Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1.	Half Page (Black & White)	1,000.00
2.	Full Page (Black & White)	2,000.00
3.	Quarter Page	1,000
4.	2nd Cover Page	5,000.00
5.	3rd Back Cover Page	5,000.00
6.	Back Cover Page	10,000.00

ಚಂದಾದಾರರಾಗಲು, ಪುಸ್ತಕ ಖರೀದಿಸಲು, ಲೇಖನ ಹಾಗೂ ಜಾಹೀರಾತು ಪ್ರಕಟಿಸಲು

ಸಂಪರ್ಕಿಸಿ : ಯೋಗೀಶ್, ಸಹಾಯಕ ಕಾರ್ಯದರ್ಶಿ – 9738605799

ಚಂದ್ರಪ್ಪ, ಕಾರ್ಯನಿರ್ವಾಹಕ ಅಧಿಕಾರಿ – 7619134999, ನವೀನ್, ಸಹಾಯಕರು – 7892798344

RNI NO : KARBIL/2019/77950


If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ–ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026




ಎಂ ಕೆ ಇಂದಿರ : (05.01.1917 – 15.03.1994)

ಕನ್ನಡ ಸಾಹಿತ್ಯ ಕ್ಷೇತ್ರದ ಪ್ರಸಿದ್ದ ಲೇಖಕಿ, ಕಾದಂಬರಿಗಾರ್ತಿ ಎಂ.ಕೆ.ಇಂದಿರಾ ಅವರು ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಜನಿಸಿದವರಾಗಿದ್ದಾರೆ. ಪ್ರಾಥಮಿಕ ಶಾಲೆ ಶಿಕ್ಷಣ, 12ನೇ ವರ್ಷಕ್ಕೆ ವಿವಾಹದ ನಂತರವೇ ಇಂದಿರಾ ಅವರು ಬರೆಯಲು ಪ್ರಾರಂಭಿಸಿದ್ದರು. 1963ರಲ್ಲಿ ಬರೆದ "ತುಂಗಭದ್ರ" ಇವರ ಮೊದಲ ಕೃತಿ. ಈ ಕಾದಂಬರಿ ವಿಶ್ವವಿದ್ಯಾನಿಲಯದ ಪದವಿ ತರಗತಿಗೆ ಪಠ್ಯವಾಗಿತ್ತು. ಕಥೆ, ಕಾದಂಬರಿ, ಪ್ರಹಸನ, ಹರಟೆ, ವ್ಯಕ್ತಿಚಿತ್ರ ಇತ್ಯಾದಿಯಾಗಿ 60ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಸದಾನಂದ, ಫಣಿಯಮ್ಮ ಕಾದಂಬರಿಗಳಿಗೆ ಇವರಿಗೆ ಶ್ರೇಷ್ಠ ಲೇಖಕಿ ಪ್ರಶಸ್ತಿ ಸಂದಿವೆ. ಹಾಗೂ ಇವು ಚಲನಚಿತ್ರಗಳಾಗಿ ಹೆಸರು ಮಾಡಿವೆ. ನವರತ್ನ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 1975ರಲ್ಲಿ 'ಶ್ರೇಷ್ಠ ಲೇಖಕಿ' ಹಾಗು 'ಶ್ರೇಷ್ಠ ಚಿತ್ರಕತೆ' ಗೌರವಗಳು ಇವರಿಗೆ ಸಂದಿವೆ. ಇವರ ಅನೇಕ ಕಾದಂಬರಿಗಳು ತೆಲುಗು, ಮಲೆಯಾಳಂ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿದ್ದಲ್ಲದೆ ಚಲನಚಿತ್ರವಾಗಿ ಜನಮನ್ನಣೆ ಗಳಿಸಿವೆ. ಇವರ ಕಾದಂಬರಿಗಳಲ್ಲಿ ಸಹ್ಯಾದ್ರಿ ಶ್ರೇಣಿ, ಭೀಮವೃಕ್ಷರಾಜಿ, ಹಕ್ಕಿಗಳ ಇಂಚರ, ಹಸಿರು ಮಲೆನಾಡಿನ ವರ್ಣನೆಗಳು ಸುಂದರವಾಗಿ ಮೂಡಿ ಬಂದಿವೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಿತಿ, ವಿಧವಾ ವಿವಾಹ, ಬಾಲ್ಯ ವಿವಾಹ, ವಿಧವೆಯ ಗೋಳು, ಜಾತಿ ಪದ್ದತಿ ಮುಂತಾದ ಮಹಿಳಾ ಸಮಸ್ಯೆಗಳನ್ನು ಅವರ ಕಾದಂಬರಿಗಳ ಮೂಲಕ ತೆರೆದಿಟ್ಟಿದ್ದಾರೆ. ಕಾದಂಬರಿಗಳಲ್ಲದೇ ಸುಮಾರು ನೂರೈವತ್ತು ಸಣ್ಣಕಥೆಗಳನ್ನೂ ಬರೆದಿದ್ದಾರೆ. "ಬಿಂದು" ಅರ್ಧಕ್ಕೇ ನಿಂತುಹೋದ ಆತ್ಮಕಥೆ. ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಗೌರವ, ಪ್ರಶಸ್ತಿಗಳು ಸಂದಿವೆ.



ಎ. ಕೆ. ರಾಮಾನುಜನ್ (16.031929 – 13.07.1993)'

ವಿಶ್ವಮಾನ್ಯ ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದ ತಜ್ಞ, ಭಾಷಾ ತಜ್ಞ, ಭಾಷಾಂತರಕಾರ ಹೀಗೆ ಮಹೋನ್ನತಗಳ ಸಂಗಮವಾದ ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್ ಅವರು ಮೈಸೂರಿನಲ್ಲಿ ಜನಿಸಿದರು. ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆಗಳ ಜೊತೆಗೆ ಕನ್ನಡದ ಕಸ್ತೂರಿಯನ್ನು ವಿಶ್ವದೆಲ್ಲೆಡೆ ಇಂಗ್ಲೀಷ್ ಭಾಷೆಯ ಮೂಲಕ ಪಸರಿಸುವ ಕೀರ್ತಿ ಇವರದಾಗಿವೆ. ಇವರು ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು' ವಚನದ ಇಂಗ್ಲೀಷ್ ಅನುವಾದ ಅನುಪಮವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ.ಪದವಿ ಗಳಿಸಿದ ರಾಮಾನುಜನ್ ಅವರು ದಕ್ಷಿಣ ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದರು. ನಂತರ 1963ರಲ್ಲಿ ಅಮೆರಿಕಕ್ಕೆ ತೆರಳಿ ಇಂಡಿಯಾನ ವಿಶ್ವವಿದ್ಯಾನಿಲಯದಿಂದ ಭಾಷಾ ವಿಜ್ಞಾನದ ಪಿ.ಎಚ್.ಡಿ.ಗಳಿಸಿದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾ ವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾದ್ಯಾಪಕರಾಗಿದ್ದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಷ್ಯಾ ಭಾಷೆಗಳ ಅಧ್ಯಯನ ಪೀಠ ಸ್ಥಾಪನೆ ಮಾಡಿದ ಕೀರ್ತಿ ರಾಮಾನುಜನ್ ಅವರಿಗೆ ಸಲ್ಲುತ್ತದೆ. ರಾಮಾನುಜನ್ ಅವರು ಮೂರು ಕವನ ಸಂಕಲನಗಳು, ಒಂದು ಕಾದಂಬರಿ, ನಾಲ್ಕು ಸಣ್ಣ ಕತೆಗಳು, ಎರಡು ರೇಡಿಯೋ ನಾಟಕಗಳನ್ನು ರಚಿಸಿದ್ದಾರೆ. 'ರಾಮಾನುಜನ್ ಅವರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಪ್ರಸಿದ್ಧ ಮ್ಯಾಕ್ ಆರ್ಥರ್ ಫೆಲೋಷಿಪ್ ಗೌರವಗಳು ಸಂದಿವೆ.



ಚಾರ್ಲ್ಸ್ ರಾಬರ್ಟ್ ಡಾರ್ವಿನ್ (ಫೆಬ್ರುವರಿ 12 1809 – ಏಪ್ರಿಲ್ 19 1882)

ಪ್ರಸಿದ್ಧ ಜೀವವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಇಂಗ್ಲೆಂಡ್‌ನ ಶ್ರೂಸ್ಬರಿ ಎಂಬಲ್ಲಿ ಜನಿಸಿದರು. ಎಡಿನ್‌ಬರೊ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿದ್ದರು. ಇವರ ವ್ಯಾಸಂಗಾವಧಿಯಲ್ಲಿ ಸಸ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಜಾನ್ ಸ್ಟೀವನ್ಸ್ ಹೆನ್ಸ್ಲೊ ಅವರ ಪರಮ ಶಿಷ್ಯರಾಗಿದ್ದರು. ಇವರು ಡಾರ್ವಿನ್ ಅವರನ್ನು "ದಕ್ಷಿಣ ಅಮೆರಿಕ ಖಂಡ ಅಧ್ಯಯನ ತಂಡ"ದ ಎಚ್‌ಎಮ್‌ಎಸ್ ಬೀಗಲ್ ಹಡಗಿನ ಜೀವಶಾಸ್ತ್ರಜ್ಞ ಸ್ಥಾನಕ್ಕೆ ಶಿಫಾರಸ್ಸು ಮಾಡಿದರು. ಇಡೀ ಭೂಮಿಯನ್ನು ಸುತ್ತಿಬರುವ ಈ ಪ್ರವಾಸದಲ್ಲಿ ಡಾರ್ವಿನ್ ಹೋದ ಕಡೆಗಳಲ್ಲೆಲ್ಲಾ ಅಲ್ಲಿನ ಭೂರಚನೆ ಮತ್ತು ಜೀವ ವೈವಿಧ್ಯಗಳ ಅಧ್ಯಯನಗಳನ್ನು ಬಹಳ ಎಚ್ಚರಿಕೆಯಿಂದ ದಾಖಲಿಸಿದ್ದರು. 1858ರಲ್ಲಿ ಮಂಡಿಸಿದ "ನೈಸರ್ಗಿಕ ಆಯ್ಕೆಯಿಂದ ಜೀವ ವಿಕಾಸವಾದ"ವು ಆಧುನಿಕ ಜೀವವಿಜ್ಞಾನದ ಬುನಾದಿಯಾಗಿದೆ. ನೀರಿನಲ್ಲಿ ವಾಸಿಸುವ ಬೆನ್ನೆಲುಬುಳ್ಳ ಪ್ರಾಣಿಗಳ ಬಗ್ಗೆ ಹೆಚ್ಚು ಮಾಹಿತಿ ಸಂಗ್ರಹಿಸಿದರು. ಲಂಡನ್ನಿನಲ್ಲಿ ಸಂಶೋಧನೆಗಳನ್ನು ಮಂದುವರೆಸುತ್ತಿರುವಾಗ, ಥಾಮಸ್ ಮಾಲ್ತುಸ್ ಅವರ ಜನಸಂಖ್ಯಾ ಸ್ಫೋಟದ ಲೇಖನದ ಮೂಲಕ "ನೈಸರ್ಗಿಕ ಸಂಪನ್ಮೂಲಗಳ ಕೊರತೆಯು ಜನಸಂಖ್ಯೆಯನ್ನು ನಿಯಂತ್ರಣ ಮಾಡುತ್ತದೆ" ಎಂಬ ಅಂಶ ಇವರ ಗಮನ ಸೆಳೆಯಿತು. ಜೀವವಿಕಾಸವಾದದಲ್ಲಿ ಮಾನವನ ಸ್ಥಾನವನ್ನು ವಿವರಿಸುವ 'ದ ಡಿಸೆನ್ಸ್ ಆಫ್ ಮ್ಯಾನ್, ಅಂಡ್ ಸೆಲೆಕ್ಷನ್ ಇನ್ ರಿಲೇಷನ್ ಟು ಸೆಕ್ಸ್' ಪುಸ್ತಕವನ್ನು 1871ರಲ್ಲಿ ಪ್ರಕಟಿಸಿದರು.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049